Reg. No. M. 1550.
KODAGU MERCARA, (Coorg)

ಕೊಡಗು

ಸಂಪಾದಕರು:—ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ. ೩-೪-೦.

ಸಂಪುಟ ೨೩ | ತಾರೀಕು ೫—೩—೧೯೪೪ನೇ ಶುಕ್ರವಾರ. | ಸಂಚಿಕೆ ೪೬

ಚರಖಾ ಸಂಘದ ವಿಕೇಂದ್ರೀಕರಣ.

ನೂಲುವವರೇ ಒಡೆಯರಾಗಬೇಕು — ಬಟ್ಟೆ ಧರಿಸುವವರೇ ಮೂಲಕರಾಗಬೇಕು.

ತಾರೀಕು 17-2-44 ರಲ್ಲಿ ಮುಂಬಯಿಯಲ್ಲಿ ಕೂಡಿದ ಅಖಿಲ ಭಾರತ ಚರಖಾ ಸಂಘದ ಸಭೆಯಲ್ಲಿ ಐದು ಜನರ ಒಂದು ಸಲಹೆ ಸಮಿತಿಯು ಸ್ಥಾಪಿತವಾಯಿತು. ಈ ಸಲಹೆ ಸಮಿತಿಯು ತಾ. 28-2-44 ರಲ್ಲಿ ಸಭೆ ಸೇರಿ ವಿಕೇಂದ್ರೀಕರಣದ ನಿರ್ಣಯವನ್ನು ಪಾಸುಮಾಡಿತು.

ನೂಲುವವರ ಸನದು.

ನೂಲುವವರ ಮತ್ತು ಇತರ ಖಾದಿ ಕಸಬುದಾರರ ಸನದಿನ್ನಂತಿರುವ 1935 ನೇ ಇಸ್ವಿಯ ಚರಖಾ ಸಂಘದ ನಿರ್ಣಯದಲ್ಲಿ ನೂಲುವ ತಲಸನ್ನು ದಿನಾಲು 8 ಗಂಟೆ ಮಾಡುವರೆಗೆ ಪುಷ್ಟೀಕರಣವಾದ ಆಹಾರ ಮತ್ತು ವರ್ಷಕ್ಕೆ 20 ಗಜ ಬಟ್ಟೆ ಬಟ್ಟೆಯನ್ನು ಗಳಿಸಿಕೊಳ್ಳಬೇಕೆಂದೂ ಚರಖಾ ಸಂಘವು ಸ್ಥಾಪಿತವಾದಂದಿನಿಂ

ಲೇ: ಕಾನಕಾನಳ್ಳಿ ವೆಂಕಟರಾಮಯ್ಯ
ಮಂತ್ರಿ, ಕರ್ನಾಟಕ ಚರಖಾ ಸಂಘ,
ಹುಬ್ಬಳ್ಳಿ.

ದು, ತಿರಿಯುವದು, ಹೆಂಜು ಮಾಡುವದು, ನೂಲುವದು, ನೇಯುವದು, ಖಾದೀ ಮಾರುವದು ಮುಂತಾದ ಎಲ್ಲ ಕೆಲಸಗಳನ್ನು ಸಂಘವು ತನ್ನ ಶೈಯಲ್ಲೇ ತೆಗೆದುಕೊಳ್ಳಬೇಕಾಯಿತು. ಈ ವ್ಯವಹಾರಗಳು ಹಣ ಕೂಡಿಸುವದು, ಲೆಕ್ಕ ಪತ್ರಗಳು ಇವೆಲ್ಲ ವ್ಯವಸ್ಥೆಯ ಬಗ್ಗೆ ಸಂಘಟನೆಯಲ್ಲಿ ಅತಿ ಗಹನವಾಗಿ ಕೇಂದ್ರೀಕರಣವಾಯಿತು. ಆ ಕೇಂದ್ರೀಕರಣದ ಒಂದೆ ಅನೇಕ ಆಪತ್ತುಗಳು ಬಂದು ಸಂಘವು ತನ್ನ ಶಕ್ತಿಯನ್ನೆಲ್ಲ ಹುಟ್ಟುವಲ್ಲಿ ಮೂರಾಟ ಆಗಿ ಸರಾಸರಿ ಗಳಿಕೆ ರೂ. 20-ಆದರೂ ಇರಬೇಕು. ಹಾಗಿಲ್ಲದೇ ಅದು ರೂ. 9-13-9 ಇರಬೇಕಾದರೆ ಅದಕ್ಕೆ ಮೂರು ಕಾರಣಗಳಿರಬೇಕು.

(1) ರಾಟೆ ಮೊದಲಾದ ಉಪಕರಣಗಳು ಕೆಟ್ಟಿರಬೇಕು. (2) ನಿಪುಣತೆ ಕಮಿಯಾಗಿರಬೇಕು. (3) ನೂಲು ವಾಕೆಯು ನೋಮೂರಿತನದಿಂದ ತನ್ನ ನಿರುದ್ಯೋಗದ ಪೂರ್ಣ ಸೇವೆಯನ್ನು ನೂಲಲಿಕ್ಕೆ ಉಪಯೋಗಿಸದಿರುವದು. ಈ ನ್ಯೂನತೆಗಳ ಪರಿಣಾಮವಾಗಿ ನೈನೂಲು ಇನ್ನೂ ಶಕ್ತಿಸೂನತೆಗಳಲ್ಲಿ ನಿರಂತರ ನೂಲಿಗಿಂತ ಬಹಳ ಹಿಂದಿದೆ. ನೈನೂಲು ಸೇಯಲು ಹೆಚ್ಚು ಕಠಿಣವಾಗುತ್ತದೆ. ಗಿರಣಿ ನೂಲಿನ ಬಟ್ಟೆ 10 ವರ್ಷಗಳನ್ನು ನೋಯುವಲ್ಲಿ ನೇಕಾರನು 3 ಗಜ ಮಾತ್ರ ನೈ

ಹತ್ತಿ.

ಹಿಂದಿನ ಕಾಲದಲ್ಲಿ ದೇಶಾದ್ಯಂತ ಅಲ್ಲಲ್ಲಿಗೆ ಬೇಕಾದಷ್ಟು ಹತ್ತಿ ಬೆಳೆಯುತ್ತಿತ್ತು. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಎಲ್ಲ ಹಳ್ಳಿಗಳಲ್ಲೂ ಜನರು ನೂಲುತ್ತಿದ್ದರು. ಈಚೆಗೆ ಸರಕಾರವು ಗಿರಣಿಗಳ ಅನುಕೂಲಕ್ಕಾಗಿ ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಹೆಚ್ಚು ಪ್ರಮಾಣದಿಂದ ಹತ್ತಿ ಬೆಳೆಯುವ ವ್ಯವಸ್ಥೆ ಮಾಡಿದ್ದರಿಂದ ಅನೇಕ ಕಡೆಗಳಲ್ಲಿ ಹತ್ತಿ ಬೆಳೆಯೇ ಇಲ್ಲ. ಇಂಥಾ ಕಡೆಗಳಲ್ಲಿ ನಿರಂತರ ನೂಲಿನ ಮಾಡಿದ ಮತ್ತು ಪ್ರೆಸ್ ಮಾಡಿದ ಆರಳಿ ಸರಬರಾಜು ಸಿಗುವದು. ಇಂಥಾ ಆರಳಿಯಿಂದ ಕೈನೂಲು ಚೆನ್ನಾಗಿ ಹೊರಡುವದಿಲ್ಲ. 1936ನೇ ಇಸವಿಯ ಚರಖಾ ಸಂಘದ ತರಾವಿನ ಪ್ರಕಾರ ಖಾದೀ ವಿಸ್ತಾರವನ್ನು ಬೇಕಾದರೆ ಬೇರೆ ಬೇರೆ ಕಡೆಯ ಭೂಗುಣಕ್ಕೆ ತಕ್ಕಂತೆ ಪ್ರಾದೇಶಿಕ ಅಧಿಕಾರಿಗಳು ಹತ್ತಿ ಬೆಳೆ ಕೊಡುವ ಹತ್ತಿ ಜಾತಿಗಳ ಬೀಜ ಧನಸಹಾಯ ಮಾಡುವ ಕೆಲಸವನ್ನು ಸಂಘವು ಕೈಕೊಳ್ಳಬೇಕಾಗಿದೆ. ಮತ್ತು ಅದರಂತೆ ತಮ್ಮ ಶಕ್ತಿಸಾಮರ್ಥ್ಯಾನುಸಾರ ಹತ್ತಿಯ ಬೆಳೆಸುವ ಪ್ರಚಾರ ಮಾಡಬೇಕಾಗಿದೆ

ಶಿಕ್ಷಣ.

ಇವತ್ತು ಚರಖಾ ಸಂಘಕ್ಕೆ ಖಾದೀ ವಿದ್ಯೆಯಲ್ಲಿ ವಿಶಿಷ್ಟ ಜ್ಞಾನ ಸ್ಪಷ್ಟವಾಗಿದೆ. ಈ ಜ್ಞಾನವು ವ್ಯವಸ್ಥಿತವಾಗಿರಬೇಕು. ಖಾದೀ ವಿದ್ಯೆಯಲ್ಲಿ ನಿಷ್ಣಾತರಾದ ಅನೇಕ ಕಾರ್ಯಕರ್ತರು ತಯಾರಾಗಬೇಕು. ಅದಕ್ಕೆ ಸಂಘವು ಅಲ್ಲಲ್ಲಿ ಖಾದೀ ವಿದ್ಯಾಲಯಗಳನ್ನು ತೆರೆದು ಅನೇಕ ಕಾರ್ಯಕರ್ತರಿಗೆ ಶಿಕ್ಷಣವನ್ನು ಕೊಟ್ಟು ನಿಷ್ಣಾತರನ್ನಾಗಿ ಮಾಡಬೇಕು. ಇಂಥ ನಿಷ್ಣಾತರಿಗೆ ಮುಂದೆ ಉದ್ಯೋಗ ಕೊಡಿಯಬೇಕು. ವಿಕೇಂದ್ರೀಕರಣ ಯೋಜನೆಯಲ್ಲಿ ಹೆಚ್ಚು

ಅಂಗಡಿಗಳು.

ಈಗಿರುವ ಖಾದೀ ಅಂಗಡಿಗಳು ಸಾಲವು. ಇವು ಜನಸಾಮಾನ್ಯರ ಮನೆಯ ದುರಿಗೆ ಖಾದಿಯನ್ನು ಒಯ್ಯಲಾರವು. ದೇಶದಲ್ಲಿಯ ಬಹು ಜನರು ಇನ್ನೂ ಪೂರ್ಣ ಖಾದೀಧಾರಿಗಳಾಗಿಲ್ಲ. ಖಾದಿಯು ಸಾರ್ವತ್ರಿಕವೂ ಸರ್ವಮಾನ್ಯವೂ ಆಗಬೇಕಾದರೆ ಖಾದೀ ಪ್ರಚಾರಕ್ಷೇತ್ರವು ವಿಸ್ತಾರವಾಗಬೇಕಾಗಿದೆ. ಪ್ರತಿಯೊಬ್ಬ ಖಾದೀಧಾರಿಯು ಖಾದೀ ರಾಯಭಾರಿಯಾಗಬೇಕಾಗಿದೆ. ಖಾದೀಧಾರಿಯಿದ್ದ ಸ್ಥಳದಲ್ಲಿಯೇ ಗ್ರಾಹಕಸಂಘವಿದ್ದು ಪ್ರತಿಯೊಬ್ಬ ಸದಸ್ಯನ ಪ್ರಯತ್ನದಿಂದ 50 ರಿಂದ ಆರಂಭವಾದ ಸಂಘದ ಸದಸ್ಯತ್ವವು 500 ಕ್ಕೆ ಬೇಗನೆ ಮುಟ್ಟಬೇಕಾಗಿದೆ.

ಒಡೆತನ.

ಮೂರಾಟಕ್ಕಾಗಿ ಅಧಿನಾ ಮಜೂರಿಗಾಗಿ ನೂಲುವಾಗ ಅವರಿಗೆ ನೂಲುವದು ಕಷ್ಟವೆಂದೇ ಅವ ಕಸಬು ಎಂದು ಅನಿಸುವದಿಲ್ಲ. ಬರೇ ಕೂಲಿಗಾಗಿ ದುಡಿಯುವರು. ಇದರಿಂದ ಅವರಿಗೆ ಖಾದೀ ಉದ್ಯೋಗದಲ್ಲಿ ಆತ್ಮೀಯತೆಯು ಉಳ್ಪನ್ನವಾಗುವದಿಲ್ಲ. ಆದ್ದರಿಂದ ಖಾದೀ ಕೆಲಸದಲ್ಲಿ ನೂಲುವವರ ಬಂಡವಾಳವೇ ತೊಡಗಿ ಅವರೇ ಮೂಲಕರಾಗಬೇಕು. ಹಾಗೆಯೇ ಖಾದೀಧಾರಿಗಳು ಮೂರಾಟದ ಅಂಗಡಿಗಳ ಮೂಲಕರಾಗಬೇಕು. ಲಾಭ ನಷ್ಟಗಳು ಅವರದೇ ಛಿಗಿರಬೇಕು

ಲೆಕ್ಕ ಪತ್ರ.

ಖಾದೀ ಕಾರ್ಯವು ಕೇಂದ್ರೀಕೃತವಾದಷ್ಟೂ ಅದರ ಲೆಕ್ಕ ಪತ್ರಗಳೂ ಪತ್ರವ್ಯವಹಾರಗಳೂ ಬೆಳೆದು ಶಿರೋಭಾರವಾಗುವದು ಕಾರ್ಯಕರ್ತರು ನೂಲುವವರ ಉತ್ಪನ್ನಕ್ಕೆ ಹೆಚ್ಚು ಲಕ್ಷ ಕೊಡಬೇಕೆಂದು

ಪರಕೋಷಾಯ.

ಮೇಲೆ ಹೇಳಿದ ಕೆಲಸಗಳು ಇಂದಿನ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಸಾಧ್ಯವಾಗಲಿಲ್ಲ. ಕೇಂದ್ರೀಕರಣಕ್ಕೆ ಸಂಘವು ಅಂಟಿಕೊಂಡು ಕುಳಿತರೆ ಮುಂದೂ ಸಾಧ್ಯವಾಗುವ ಲಕ್ಷಣಗಳು ಕಾಣುವದಿಲ್ಲ. ಇವೆಲ್ಲ ಉದ್ದೇಶಗಳ ಸಾಧನೆಯಾಗಿ ಖಾದೀ ಕ್ಷೇತ್ರವು ವಿಸ್ತೃತವಾಗಿ ಸ್ವಾಭಾವಿಕವಾಗಿ ಬೆಳೆಯಬೇಕಾದರೆ ವಿಕೇಂದ್ರೀಕರಣವೇ ಯೋಗ್ಯ ಉಪಾಯ ಹುಟ್ಟುವ ಮೂರಾಟಗಳನ್ನು ಸ್ಥಳೀಯ ಸಂಘಗಳಿಗೆ ಒಪ್ಪಿಸಿ ಚರಖಾ ಸಂಘವು ಒತ್ತಾಸೆಯಾಗಿ, ಆಶ್ರಯದ ತೃವಾಗಿ, ವೈಜ್ಞಾನಿಕ ಮಾರ್ಗದರ್ಶಿಯಾಗಿ ನಿಂತು ತನ್ನ ಬಳಿ ಉಳಿಯುವ ಬಂಡವಾಳವನ್ನು ಮೇಲೆ ಹೇಳಿದ ಸುಧಾರಣೆಗಳನ್ನು ಸಾಧಿಸುವ ಬಗ್ಗೆ ಉಪಯೋಗಿಸಿ ಮುಂದಡಿಯಿಡುವದು ಯೋಗ್ಯವಾಗಿದೆ. ಚರಖಾ ಸಂಘವು ವ್ಯಾಪಾರದಲ್ಲಿ, ತನ್ಮೂಲಕ ರಾಜಕೀಯದಲ್ಲಿ ಅಂದರೆ ಕಾಯಿದೆಗಳ ತೊಡಕಿನಲ್ಲಿ ಸಿಕ್ಕಿಕೊಳ್ಳದೆ ಜನತೆಗೆ ಸೇವೆ ಸಲ್ಲಿಸಬೇಕಾಗಿದೆ. ಸ್ವಾಭಿಮಾನದಿಂದ, ಸದುದ್ದೇಶದಿಂದ, ಉದಾತ್ತಧ್ಯೇಯಗಳನ್ನು ಸಾಧಿಸಬೇಕಾಗಿದೆ. ನಸ್ಪ್ರತಿಯಿಂದ, ಶ್ರದ್ಧೆಯಿಂದ ದರಿದ್ರನಾರಾಯಣನ ಆರಾಧನೆ ಮಾಡಬೇಕಾಗಿದೆ.

ವಿಕೇಂದ್ರೀಕರಣದ ರೂಪರೇಷೆ.

ಖಾದೀ ಹುಟ್ಟುವಳಿಗಾರ ಸಂಘ—ಸದಸ್ಯರ ಪರಮಾವಧಿ ಸಂಖ್ಯೆ 300. ಸದಸ್ಯರು ಕೊಡಬೇಕಾದ ಬಂಡವಾಳದ ಭಾಗ 120 ಲಡಿ(ಹೇಂಣ್ಸ)ಗಳು.ರೂ. 18/12/-ಬಂಡವಾಳವನ್ನು ನೂಲಿನ ರೂಪದಲ್ಲಿಯೇ ಕೊಡಬೇಕು. ಸಂಘದ ಬಂಡವಾಳ ರೂ. 5400-0-0 ಪ್ರತಿಯೊಬ್ಬ ಸದಸ್ಯರೂ ಪರ್ಯಂತಲ್ಲಿ ಸ್ವಂತ ಬಟ್ಟೆಗಾಗಿ 90

ರಲ್ಲೂ ಹಿಂದುಸ್ಥಾನದಲ್ಲಿ ಸ್ವರಾಜ್ಯಾಂಶ ನಡೆಯೂ ಪಸ್ತಾಪ ಬಗ್ಗೆ ಸ್ವಪಾರ್ಣಾ ಪೂ ಸ್ವಾತಂತ್ರಂಬಿಯೂ ಆಗುವಂತೆ ಮಾ ತುನದೂ ಹತ್ತಿ, ಬೆಳೆಯುವದರಿಂದ ಬಟ್ಟೆ ನೂತುವ ವರೆಗಿನ ಕ್ರಿಯೆಗಳಲ್ಲಿ ಉದ್ಯೋ ಕ್ತರಾದ ಎಲ್ಲ ಕಸಬುದಾರರನ್ನು ಕರೆದು ಗಳಿಕೆಯುಳ್ಳ ನೂಲುವವರ ಹಿತಸಾಧನೆ ನೂಡುವದೂ ಚರಖಾ ಸಂಘದ ಧ್ಯೇಯ ವಾಗಿತ್ತೆ ಎಂದೂ ಹೇಳಲುಬಿನಿಸಿ. ಈ ಕ ರ್ಯವನ್ನಿಲ್ಲೇ ಐ ದೀ ವಿಕೇಂದ್ರೀಕರಣದ ಬೀಜಸುಂಕ್ರವು ಅಡಕವಾಗಿದೆ. ವಿಕೇಂ ದ್ರೀಕರಣದ ಯೋಜನೆಯು ಈ ಕರಾವ ನ್ನು ಕಾರ್ಯರೂಪಕ್ಕೆ ತರುವ ದುಂಡಿನ ಹೆಜ್ಜೆಯಾಗಿದೆ. ಚರಖಾ ಸಂಘದ 20 ವರ್ಷಗಳ ಕಾರ್ಯವಿಸ್ತಾರದ ಪ್ರತಿ ಹೆಜ್ಜೆ ಗೂ ನಮ್ಮ ದೃಷ್ಟಿಪಥದಲ್ಲಿ ಈ ಕರಾವಿ ನೊಳಗೆ ಅಡಕವಾದ ಧ್ಯೇಯವು ಧ್ರುವ ತಾರೆಯಾಗಿದೆ.

ಕಾರ್ಯಾರಂಭದ ಕಾಲ.

ಧ್ಯೇಯವು ದೃಷ್ಟಿಪಥದಲ್ಲಿದ್ದರೂ ಕಾರ್ಯಾರಂಭಗೊಳ್ಳಲಿಳಿಸಲು ಅನೇಕ ನ್ಯಾ ಯವಾದ. ಸಹಜವಾದ ಕಾರಣಗಳಿಂದ ಸಾಧ್ಯವಾಗಲಿಲ್ಲ. ಮೊದಲು ಖಾದೀ ಸಂದೇಶವನ್ನು ಕೈಕೊಂಡ ಕಾರ್ಯಕರ್ತ ರು ಸ್ವತಃ ಸ್ಥಾಪಾದಿ ಕಾರ್ಯದಲ್ಲಿ ನುರಿತು ನಿಷ್ಣಾತರಾಗಬೇಕಿತ್ತು. ರಾಟೆಯಿಂದ ನೂಲು ತೆಗೆಯಬಹುದು, ಕೈನೂಲಿನಿಂದ ಬಟ್ಟೆಯಾಗಬಲ್ಲದು. ಹೀಗೆ ತಯಾರಾದ ಕೈನೂಲಿನ ಬಟ್ಟೆಯನ್ನು ಜನರು ಧರಿಸಬ ಹುದು, ಕಣ್ಣಿಗೆ ಆಂದಷ್ಟಿದ, ನಾಜೂಕಾ ದ, ಬೇರೆ ಬೇರೆ ರುಚಿಗಳಿಗೆ ಮೆಚ್ಚುವ ಸನ್ನೂನೆಗಳನ್ನು ತರಿಸಲಬಹುದು, ಖಾದಿಯು ಬಾಳಿಕೆ ಬರುತ್ತದೆ, ಹುಟ್ಟಿವ ಳಿ ಮತ್ತು ಸೂರಾಟನ್ನು ವ್ಯಾಪಾರ ದೃ ಷ್ಟಿಯಿಂದ ನಡೆಸಬಹುದು ಮುಂತಾದ ಆ ನೇಕ ವಿಷಯಗಳನ್ನು ಜನತೆಗೆ ಕಾರ್ಯ ತಃ ಮಾಡಿ ಪ್ರತ್ಯಕ್ಷಪಡಿಸಿ ಮನಂವಟ್ಟು ಮಾಡಿಕೊಡಬೇಕಾದ ಅವಶ್ಯಕತೆಯಿತ್ತು. ಆ ಕಾಲಕ್ಕೆ ಹತ್ತಿ ಬಡಿಸುವದು, ಆರಿಸುವ ಪಾಡಿಕೊಡುವದಕ್ಕೆ ವಿಶೇಷ ಯೋಗಸಿದ್ಧಿಯಾಗಿತ್ತು. ಕಾರ್ಯಕರ್ತರು ಜೇಜೀ ನೂ ಡಿಸುವದು, ಹೆಂಜೀ ಮಾರುವದು, ನೂಲು ಕೊಳ್ಳುವದು, ಋಣ ಕೊಡುವದು ಈ ವ್ಯವ ಹಾರದಲ್ಲಿ ವ್ಯವಧಾನವಿಲ್ಲದೇ ದುಡಿಯ ಬೇಕಾಯಿತು. ಒಂದೊಂದೆಡೆ ಸಂತೆ ದಿ ನಗಳಲ್ಲಿ ಸಾವಿರಾರು ನೂಲುವವರಿಂದ ನೂಲು ಕೊಂಡು ಹೆಂಜೀ ಮಾರಿ, ಹಣ ಕೊಟ್ಟು ಹುರಿಸಬೇಕಾದರೆ ಸಾಳುಬೇಕಾ ಗಿ ಅಯೋಸಗೊಂಡರು. ಈ ಜಂಜಾಟದ ಲ್ಲಿ ನೂಲುವವರ ಹಿತಸಾಧನೆ, ಸ್ವಾವಲಂ ಬನ ಪ್ರಸಾರ, ನೂಲು ಜುತ್ತನುಗೊಳಿಸು ವದು, ನೂಲುವವರಲ್ಲಿ ಮುತ್ತು ಇತರ ಕಸ ಬುದಾರರಲ್ಲಿ ರಾಷ್ಟ್ರೀಯ ಜಾಗೃತಿಯ ನ್ನುಂಟುಮಾಡುವದು ಮುಂತಾದ ಮು ಖ್ಯ ಕೆಲಸಗಳು ಹಾಗೆಯೇ ಉಳಿದವು. ವ್ಯಾಪಾರ ಕಾರ್ಯದ ಒತ್ತಡದಲ್ಲಿ ಸಂಘ ದ ಮೂಲ ಧ್ಯೇಯವು ಕಣ್ಮರೆಯಾಗದಿದ್ದರೂ ಪ್ರಧಾನತೆಗೆ ಬರಲಿಲ್ಲ. ಈಗ 20 ವರ್ಷಗಳಲ್ಲಿ ಸಂಘದ ಕಾರ್ಯಕರ್ತರು ವಿ ಶಿಷ್ಟ ಅನುಭವವನ್ನೂ ವಿಷ್ಣಾತತನ್ನೂ ಪ ಡೆದು ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡು ವ ಯೋಗ್ಯತೆಯನ್ನು ಗಳಿಸಿದ್ದಾರೆ. ಈ ಗ ಹುಟ್ಟುವಳಿ ಮೂರಾಟಗಳ ಕಾರ್ಯಗಳಿ ನ್ನು ಅವರು ಜನತೆಗೆ ವಹಿಸಿಕೊಟ್ಟು ಖಾದಿಯ ಮೂಲ ಧ್ಯೇಯದ ಕಡೆಗೆ ಹೊ ರಳುವದು ಅನಿವಾರ್ಯವಾಗಿದೆ.

ನೂಲುವವನ ಗಳಿಕೆ-ನೂಲಿನ ರಕ್ತ.

ಖಾದೀ ಉದ್ಯಮದಲ್ಲಿ ನೂಲುವವರ ಸಂಖ್ಯೆಯೇ ಹೆಚ್ಚಾಗಿದೆ. 1940 ನೇ ಇ ಸ್ವಿಯಲ್ಲಿ 4,12,000 ನೂಲುವವರು 20,90,000 ರೂಪಾಯಿಗಳನ್ನು ಗಳಿಸಿ ದರು. ಅಂದರೆ ಸರಾಸರಿ ರೂ. 0-13-9 ಆ ವರ್ಷದಲ್ಲಿ ಗಳಿಸಿದರು. ಕೆಲವರು 20 ರೂಪಾಯಿಗಳನ್ನೂ ಗಳಿಸಿದ್ದುಂಟು. ಆ ದರೆ ವರ್ಷದಲ್ಲಿ 6 ತಿಂಗಳು ದಿನಾಲು 8 ಗಂಟೆ ಕೆಲಸ ಮಾಡುವ ಡಿಲ್ಲಿ ಕರಾವಿನ ಪ್ರ ಕಾರ ನಿಪುಣತೆಯುಳ್ಳ ನೂಲುವಾಕೆಯು ವರ್ಷಕ್ಕೆ ರೂ. 33-12-0 ಗಳಿಸಬೇಕು. ಇದಂತೆ ನೆಗೆ ಮಜೂರಿ ಹೆಚ್ಚು ಕೊಡ ಬೇಕಾಗುತ್ತದೆ. ಹೀಗಾಗಿ ಖಾದಿಯ ಬೆ ಲೆಯು ಹೆಚ್ಚಾಗುತ್ತದೆ. ಈ ಕಡೆಗೆ ಸಂ ಘವು ಲಕ್ಷ್ಯಗೊಡಬೇಕಾಗಿದೆ.

ನೂಲುವವರಿಗೆ ಹೊಸ ರಾಟೆಗಳನ್ನು ಕೊಡಬೇಕು. ಜಿನ್ನಾಗಿ, ವೇಗವಾಗಿ ನೂಲುವವನ್ನು ಕಲಿಸಬೇಕು. ವೃಥಾ ಕಾಲ ಕಳೆಯದೇ ಹೆಚ್ಚು ಹೊತ್ತು ನೂ ಲುವಂತೆ ಠ.ಜ ಹ.ಟ್ಟಿಸಬೇಕು. ಈ ಸು ಧಾರಣೆಗಳಿಂದ ಕೈನೂಲು ರಕ್ತಿ, ಸವೂನತೆ ಗಳಲ್ಲಿ ಗಿರಣಿ ನೂಲಿರುವ್ಕೇ ಗುಣಮುಕ್ತ ವಾಗುವಂತೆ ನೂಡುವ ಕಡೆಗೆ ದೃಷ್ಟಿಯ ನ್ನು ಹೊರಳಿಸಬೇಕಾಗಿದೆ. ವಿಕೇಂದ್ರೀ ಕರಣ ಮೂಡಿಸಿ ಬಳಿಕ ಬಿಡುಗಡೆಯೊಗು ವ ಚರಖಾ ಸಂಘದ ಬಂಡವಾಳವನ್ನು ಈ ಸುಧಾರಣೆಗಳ ಕಡೆಗೆ ತಿರುಗಿಸಬಹುದಾ ಗಿದೆ.

ನೇಯ್ಗೆ.

ಐ ದೀ ಹುಟ್ಟುವಳಿಯಲ್ಲಿ ನೇಯ್ಗೆಗೆ ಬಹು ಮಹತ್ವದ ಸ್ಥಾನವಿದೆ. ನೇಕಾರ ರು ಗಿರಣಿ ನೂಲಿನ ಹಿಂದೆ ಓಡುವರು. ನೇಕಾರರು ಕೆಲವು ಕೇಂದ್ರಸ್ಥಾನಗಳಲ್ಲಿ ನೆಲಸಿರುವರು. ಹಳ್ಳಿಗಳಲ್ಲಿ ನೇಕಾರರಿ ಲ್ಲ. ನೂಲನ್ನು ನೇಯ್ಗೆಗೆ ಕೇಂದ್ರಕ್ಕೆ ಒಯ್ಯ ಬೇಕಾಗಿರುವದರಿಂದ ನೇಳೆಯೂ ಹಣ ವೂ ವೃಥಾ ವ್ಯಯವಾಗುವದು. ಹಿಂದೆ ಪಿಂಜಾರಪನ್ನೇ ಅವಲಂಬಿಸಿದ್ದರಿಂದ ಹಂ ಜಿಗೆ ಮುಪ್ಪರವಾಯಿತು. ನೂಲುವವರಿ ಗೆ ಪಿಂಜಿ ರಾಸುವದನ್ನು ಕಲಿಸಿ ಆ ಊರು ನಿಂದ ದೂರಾದೆವು. ಇಂದು ನೇಗಿಯ ಮಗ್ಗಗಳಿಂದ ಪಾರಾಗಲು ನೂಲುವ ಹಳ್ಳಿಗಳಲ್ಲೇ ಕೆಲಸಗಿ ನೇಗಿ ಕೆಲಸ ಕಲಿಸಿ, ಎಲ್ಲಿ ನೂಲು ಹುಟ್ಟುವದೋ ಅಲ್ಲೇ ಅಂ ಪ ನೇಯುವ ವ್ಯವಸ್ಥೆ ಮಾಡಿ ಪ್ರತಿ ಹಳ್ಳಿ ಯೂ ಸ್ವಪಟಪೂರ್ಣವಾಗುವಂತೆ ಮಾಡ ಬೇಕಾಗಿದೆ.

ವಿಕಾರು ನೂಲುವವರಿಂದ ಕೇಂದ್ರಗಳಲ್ಲಿ ಕಾರ್ಯಕರ್ತರಿಗೆ ನೂಲುವರ ಶಿಕ್ಷಣದ ಕಡೆಗೆ ಲಕ್ಷ್ಯಗೊಡುವದು ಸಾಧ್ಯವಿಲ್ಲದಾ ಗಿದೆ. ಅವರ ಉಸಕರಣ, ನಿಪುಣತೆ, ವೃ ಥಾ ಮೇಳೆ ಕಳೆಯುವ ನೂಲುವವರಲ್ಲಿ ತೊ ಡಗುವದು, ಈ ವಿಷಯಗಳ ಬಗ್ಗೆ ಹೆಚ್ಚು ಪ್ರಯತ್ನ ನೂಡುವದು, ಸಣ್ಣ ಸಣ್ಣ ಸಂ ಘಗಳಾದರೆ ಮಾತ್ರ ಸಾಧ್ಯ. ಸಣ್ಣ ಸಣ್ಣ ಸಂಘಗಳಾವರೆ ಹೆಚ್ಚು ಕಾರ್ಯಕರ್ತರು ಬೇಕು. ಹೀಗೆ ಶಿಕ್ಷಿತ ಖಾದೀ ಕಾರ್ಯ ಕರ್ತರ ಅವಶ್ಯಕತೆಯು ಬೆಳೆಯುವದು.

ನೂಲುವವರಿಗೆ ಅನುಕೂಲತೆ.

ಈಗಿನ ಕೇಂದ್ರಗಳು ದೊಡ್ಡವಾದುದ ರಿಂದ ಅನೇಕ ಹಳ್ಳಿಗಳು ಕೇಂದ್ರದಿಂದ 10-12 ಮೈಲುಗಳ ದೂರದಲ್ಲಿವೆ. ಕೇ ನಲ 3-4 ನೇರು ನೂಲುಕೊಟ್ಟು ಹಂಜಿ ಕೊಳ್ಳಲು ನೂಲುವವರು 10-12 ಮೈಲು ದೂರ ನಡೆದು ಬರಬೇಕಾಗುತ್ತದೆ. ಇದರಿಂದ ಅವರ ಇಡೀ ಒಂದು ದಿನ ವ್ಯ ರ್ಥವಾಗುತ್ತದೆ. ಇದನ್ನು ತಪ್ಪಿಸಲು ಐ ದೀ ಕೇಂದ್ರಗಳನ್ನು ಸಮೂಹದ ಹಳ್ಳಿ ಗೆ ಒಯ್ಯಬೇಕಾಗಿದೆ.

ಹೊಸ ಕೇಂದ್ರಗಳು.

ಬೇರೆ ಬೇರೆ ಸ್ಥಳಗಳಲ್ಲಿ ಹೊಸ ಖಾ ದೀ ಹುಟ್ಟುವಳಿ ಕೇಂದ್ರಗಳನ್ನು ತೆರೆಯ ಲು ಬೇಡಿಕೆಗಳು ಬರುತ್ತಿವೆ. ಆದರೆ ಎ ಲ್ಲೆಡೆಗಳಲ್ಲೂ ಕೇಂದ್ರಗಳನ್ನು ನಡೆಸುವ ದು ಪ್ರಾಂತೀಯ ಖಾದಿಸಂಸ್ಥೆಗಳಿಗೆ ಕಠಿಣವಾಗಿ ದೆ. ಚರಖಾ ಸಂಘದ ನಿಯಮದ ಪ್ರ ಕಾರ ಲಾಭ ಬರಬಾರದು. ಬಂಡವಾಳ ನೂ ಲವರು ಮತ್ತು ಗ್ರಾಹಕರಲ್ಲಿ ಹಂಚ ಲಾಗುವದು. ಭಸ್ಮವಾದರೆ ಬಂಡವಾಳ ದಲ್ಲಿ ಕಡಿಮೆಯಾಗುವದು, ಆದ್ದರಿಂದ ಹೊಸ ಕೇಂದ್ರವನ್ನು ತೆರೆಯಲು ಬಂಡ ವಾಳವನ್ನು ಹೊಸದಾಗಿ ಜಂಟಾ ಎತ್ತಿ ಕೂಡಿಸಬೇಕು. ಇದು ಖಾದಿಯ ಸ್ವ ಭಾವಿಕ ಬೆಳವಣಿಗೆಗೆ ಅಡಚಣೆಯಾಗಿದೆ.

ಎಲ್ಲ ಕೇಂದ್ರಗಳ ಲೆಕ್ಕವನ್ನು ಒಟ್ಟು ಗೂ ಡಿಸುವದು, ತಾಳೆ ಹೊಂದಿಸುವದು ಮುಂ ತಾದ ಕೆಲಸವು ಬೆಳೆದು ವ್ಯವಸ್ಥಾ ಖ ರ್ಚು ಹೆಚ್ಚಾಗಿ ಖಾದಿಗು ಬೆಲೆಯು ಹೆ ಚ್ಚಾಗುವದು. ವಿಕೇಂದ್ರೀಕರಣದಿಂದ ಈ ಲೆಕ್ಕ ಪತ್ರದ ಗೊಂಜಲವು ಖಿತವಾಗಿರು ವದು.

ಬಂಡವಾಳ.

ಅವಾಧ್ಯವೂ ಆನ್ಯಭಾವಿಕವೂ ಆ ಗಿ ಬೆಳೆವ ವ್ಯವಹಾರದ ಜತೆಗೆ ಸಂಘದ ಬಂಡವಾಳವೂ ಬೆಳೆಯುವದು. ಬಂಡ ವಾಳವು ಬೆಳೆದಂತೆ ಆಜಾಯ ತೆಂಗೆ ಯು ದ್ಧ ವಿನೂ, ವ್ಯಾಪಾರ ಸನತು, ಸೂಚಿನ ಜಲನವಲನಕ್ಕೆ ಪರವಾನಿಗೆ, ಸುಂಕ ಮೊ ದಲಾದ ಅನಾವಶ್ಯಕ ರಾಜಕೀಯ ಅಡಚ ಣೆಗಳು ಹೆಚ್ಚಾಗುವವು. ದೊಡ್ಡ ಬಂಡ ವಾಳ ಮತ್ತು ತಜ್ಞನ್ಯ ವ್ಯವಹಾರ ಬೆಳೆವ ಷ್ಟೂ ಸಂಘವು ಸರಕಾರದ ಕಾಯಿದೆಯ ತೊಡಕಿನಲ್ಲಿ ಸಿಗುವದು. ಈ ಎಲ್ಲ ಕಾ ಯಿದೆಗಳಿಗೆ ಅವಾನ್ತನ್ಯವಾಗಿ ನಮ್ರತೆ ಯಿಂದ ತಲೆಬಾಗಿ ವ್ಯಾಪಾರಕ್ಕೆ ಅಂಟಿ ಕೊಂಡಿರುವದರಿಂದ ಸ್ವಾಭಿಮಾನಕ್ಕೆ ವಿಶೇ ಷ ಧಕ್ಕೆ ಬರುತ್ತದೆ.

ಯುದ್ಧ ಪರಿಸ್ಥಿತಿ.

ಇಂದು ಯುದ್ಧದ ಪರಿಸ್ಥಿತಿಯ ದೆಸೆ ಯಿಂದ ಯುದ್ಧ ವಿನೂ, ಸೂಚಿನ ಜಲನ ವಲನದ ಕಾಯಿದೆಗಳು, ಕಂಟ್ರೋಲ್ ಆ ರ್ಡರುಗಳು ಮುಂತಾದ ನಿರ್ಬಂಧಗಳ ಗೊಂದಲ ದೆಸೆಯಿಂದ ಸುಸೂತ್ರ ವ್ಯವಹಾ ರ ನಡೆಯುವದೇ ಅಸಾಧ್ಯವಾಗಿದೆ. ದೊ ಡ್ಡ ದೊಡ್ಡ ಕಂಗಡಿಗಳಿಗೆ ನೂಲು ಬರುವ ದೇ ಕಠಿನವಾಗಿದೆ. ಹುಟ್ಟಿದ ನೂಲು ಲವರು ಮತ್ತು ಗ್ರಾಹಕರಲ್ಲಿ ಹಂಚ ಲಾಗುವದು. ಭಸ್ಮವಾದರೆ ಬಂಡವಾಳ ದಲ್ಲಿ ಕಡಿಮೆಯಾಗುವದು, ಆದ್ದರಿಂದ ಹೊಸ ಕೇಂದ್ರವನ್ನು ತೆರೆಯಲು ಬಂಡ ವಾಳವನ್ನು ಹೊಸದಾಗಿ ಜಂಟಾ ಎತ್ತಿ ಕೂಡಿಸಬೇಕು. ಇದು ಖಾದಿಯ ಸ್ವ ಭಾವಿಕ ಬೆಳವಣಿಗೆಗೆ ಅಡಚಣೆಯಾಗಿದೆ. ಇದು ಇನ್ನೂ ಬಿಗಡಾಯಿಸುತ್ತ ಹೋಗಬ ಹುದು.

ಲಡಿ ನೂಲು ಸಂಘಕ್ಕೆ ಸೂರಬೇಕು. ಸಂ ಘದ ವ್ಯವಸ್ಥಾ ಸಮಿತಿಯನ್ನು ನೋವಲು ೮ ವರ್ಷ ಚರಖಾ ಸಂಘವೇ ನಾಮಕರ ಣ ಮಾಡುವದು. ೮ ವರ್ಷಗಳ ನಂತರ ಸದಸ್ಯರೇ ವ್ಯವಸ್ಥಾ ಸಮಿತಿಯನ್ನು ಆರಿ ಸುವರು.

ಖಾದೀಗ್ರಾಹಕ ಸಂಘ:-ಸದಸ್ಯ ರ ಕನಿಷ್ಠ ಸಂಖ್ಯೆ 50; ಪರಮಾವಧಿ ಸಂ ಖ್ಯೆ 500. ಸಂಘದ ಪರಮಾವಧಿ ಬಂ ಡವಾಳ ರೂ. 16,000 ವರ್ಷಕ್ಕೆ 100 ರೂಪಾಯಿಗಳ ಖಾದೀ ಕೊಳ್ಳುವವರು 40 ರೂ. ಬಂಡವಾಳದ ಭಾಗ ತೆಗೆದುಕೊ ಳ್ಳಬಹುದು. ಸದಸ್ಯರು 50ಂದ 11 ಜ ನರನ್ನೊಳಗೊಂಡ ವ್ಯವಸ್ಥಾ ಸಮಿತಿಯ ನ್ನು ಆರಿಸುವರು. ಹೃಕ ವರ್ಷ ಕನಿಷ್ಠ ಒಬ್ಬರು ಅಧಿಕಾರಿಂದ ಇಬ್ಬರು ಸದಸ್ಯರು ಪದಚ್ಯುತರಾಗುವರು. ಅದರಿಂದ ಖಾ ಲಿಯಾದ ಜಾಗಕ್ಕೆ ಬೇರೆಯವರನ್ನು ಆರಿ ಸಲಾಗುವದು.

ಎರಡು ಸಂಘಗಳಲ್ಲೂ ಸದಸ್ಯರ ಸ ಮ್ಮಿಲಿತ ಒಡೆತನ ಇರುವದು. ಲಾಭ ನಷ್ಟ ಗಳು ಸದಸ್ಯರಲ್ಲಿ ಹಂಜಲ್ಪಡುವದು. ಬಂ ಡವಾಳವನ್ನು ಒಮ್ಮೆಲೇ ತೊಡಲಾರದವ ರು ಕಂತಿನಿಂದೆ ಕೊಡಬಹುದು. ಪೂರ್ತಿ ಬಂಡವಾಳ ಸೇರುವ ಮೊದಲು ಹುಟ್ಟುವ ಳಿ ಸಂಘಗಳು ಚರಖಾ ಸಂಘದಿಂದ ಸಾಲ ಪಡೆಯಬಹುದು. ಸಂಘವನ್ನು ಉತ್ತ ಮ ರೀತಿಯಿಂದ ನಡೆಸುವ ಜವಾಬ್ದಾರಿ ಸದಸ್ಯರದ್ದೇ ಆಗಿರುವದು. ಸಂಘಗಳು ಚರ್ಚೆ ಸಂಘದ ನಿಯಮದಂತೆ ನಡೆಯ ಲು ಚರಖಾ ಸಂಘವು ಕಾಲ ಕಾಲಕ್ಕೆ ಪಾಸು ಮಾಡುವ ನಿರ್ಣಯವನ್ನು ಅವ ಲಿನಲ್ಲಿ ತರಲು ಮತ್ತು ಚರಖಾ ಸಂಘದ ಆಡಿಟರುಗಳು, ಇನ್ಸ್‌ಪೆಕ್ಟರುಗಳು ಇವರ ನ್ನೇಲ್ವಿಚಾರಣೆಗೆ ಒಳಪಟ್ಟು ನಡೆಯಲು ಒಪ್ಪಿ ಚರಖಾ ಸಂಘವ ಪ್ರಮಾಣ ಪತ್ರವ ನ್ನು ಪಡೆದ ನಿಷ್ಣಾತ ಕಾರ್ಯ ಕರ್ತರ

(3ನೇ ಪುಟ ನೋಡಿ)

ಕೊಡಗು

ತಾ. ೫-೫-೧೯೪೪ಳಿಗೆ ಶುಕ್ರವಾರ

ದೈವಿಕವಾದ ಎಚ್ಚರಿಕೆ.

ಮಹಾತ್ಮಗಾಂಧಿಯವರ ದೇಹ ಪ್ರಕೃತಿ ಚೆನ್ನಾಗಿಲ್ಲವೆಂದು ಬೊಂಬಾಯಿ ಸರಕಾರವು ವರದಿಯೊಂದು ತಿಳಿಸುತ್ತದೆ. ಡಾ. ಬಿದನಚಂದ್ರರಾಯರೂ, ಡಾ. ಗಿಲ್ಡರ್‌ರವರೂ ಅವರನ್ನು ಪರೀಕ್ಷಿಸಿರುವರು. ಇವರ ಪರಿಶೀಲನೆಯೀಂದ ಗಾಂಧೀಜಿಯವರ ಆರೋಗ್ಯವು ಈ ಪೊಜಿಸಿನ ಮಲೇರಿಯೂ ಜ್ವರದಿಂದ ಸುಧಾರಿಸುವ ಬದಲು ನಿತ್ರಾಣಗೊಂಡಿದೆ ಎಂದು ತಿಳಿಯಬರುತ್ತಿದೆ. ಮಹಾತ್ಮರಿಗೆ ೭೫ ನೇ ವರ್ಷ ಪೂರ್ತಿಯಾಗಲು ಕೆಲವು ತಿಂಗಳುಗಳು ಮಾತ್ರ ಇವೆ. ಅವರು ನಾಡಿನ ಜನರ ಹಿತಚಿಂತನೆಯೀಂದ ಮಾಡಿದ ಅನುಪವು ತ್ಯಾಗ, ಭಾರತ ಸ್ವಾತಂತ್ರ್ಯ ರಂಗಸ್ಥಳದಲ್ಲಿ ಹೊತ್ತ ಅಪ್ರತಿಮ ಜವಾಬ್ದಾರಿ-ಇವುಗಳಿಂದ ಶರೀರವು ಶಕ್ತಿಗೆಟ್ಟಿದ್ದರೂ, ಸರಳ ಸಹಜ್ಯ ಜೀವನ, ಪ್ರಕೃತಿಯೊಡನೆ ಮೇರುವಿನಂಥಾ ಜವಾಬ್ದಾರಿಯನ್ನು ಹೊತ್ತು ಕಾರ್ಯಮಾಡುತ್ತಿದ್ದಾರೆ. ಅವರು ಸೆರೆಮನೆಗೆ ಸೇರಿದ ನಂತರ ಅವರ ಮನಸ್ಸಿಗೆ ಎರಡು ಸಹಿಸಲಸದಳವಾದ ಪೆಟ್ಟು ಬಿದ್ದಿದೆ ಸೆಟ್ಟಿನ ಶಿಸ್ತ-ಮಹದೇವಭಾಯಿ, ಪ್ರೀತಿಯ ಪತ್ನಿ ಕಸ್ತೂರ್‌ಬಾ-ಇವರ ಅಗಲುವಿಕೆಯು ಬಹು ಮಟ್ಟಿಗೆ ಅವರ ಮನಸ್ಸನ್ನು ಕಲಕಿಸಿದೆ. ನಿಜ, ಕರ್ಮಯೋಗಿಗಳಾದ ಮಹಾತ್ಮರ ಜೈತನ್ಯವು ಈ ರೀತಿಯ ಕಮಿದ ನಿರ್ದಿಪ್ತವಾಗಿರಬಲ್ಲಾದಾದರೂ ಅವರ ಸಾರ್ವಜನಿಕ ಶರೀರಕ್ಕೆ ಶೋಕವಾರ್ತೆಯಿಲೆಗಳ ಸಡಸೆಗೆ ಒಂದು ಮಿತಿಯಿದ್ದೇ ಇದೆ. ಇಂದಿನ ಈ ಇಳಿವಯಸ್ಸಿನಲ್ಲಿ ಅವರು ಸೆರೆಮನೆಯಲ್ಲಿ ಕಾಯಿಲೆಯಲ್ಲಿರುವಾಗ ಅವರನ್ನು ಬಿಡುಗಡೆ ಮಾಡುವಿದರಲ್ಲಿ ಅವರ ಪರಿಸ್ಥಿತಿಯ ಬಗ್ಗೆ ಅಗಾಧ ಜನತೆಗೆ ಇರುವ ಕಳವಳವನ್ನು ಕಂಡಾದರೂ ಸರಕಾರವು ಆಸೂಲಕ್ಷಿಸುತ್ತಿರುವ ನೀತಿಯು ಖಂಡನಾರ್ಹವಾಗಿದೆ. ರಾಷ್ಟ್ರಪತಿ ಅರುಣಾದ ಪತಿಯು ಪಕ್ಷದ ದರ್ಶನಕ್ಕಾಗಿ ಮಂಡಲದ್ಯೈಯಲ್ಲಿ ಹಲಬಿದಾಗ ಅಭ್ಯುಸರನ್ನು ಸರಕಾರವು ಬಿಡಲಿಲ್ಲ. ಆರ್. ಎನ್. ಪಂಡಿತರು ಸತ್ಯಾಗ್ರಹ ಪತ್ನಿ ವಿಜಯಲಕ್ಷ್ಮಿಯವರು ಶೋಕಾತಪ್ತರಾಗಿದ್ದಾಗ ಪಂಡಿತರನ್ನು ನೋಡಲೂ, ಸಹೋದರಿ ವಿಜಯಲಕ್ಷ್ಮಿಯರನ್ನು ಸಂತೈಸಲೂ ಜವಾಹರಾಲ್ರು ಬಿಡಲಿಲ್ಲ. ರಾಷ್ಟ್ರಸೂತಿ ಕಸ್ತೂರ್‌ಬಾರವರು ಪರಿಭುತ್ತಿದ್ದಾಗಿಗ ಇಡಿ ಹಿಂದೂದೇಶ ಅವರನ್ನು ಬಿಡಬೇಕೆಂದು ಕೊಡಿದರೂ ಅವರನ್ನು ಬಿಡಲಿಲ್ಲ. ಈ ಬೆಡಲು ಅನೇಕ ಬಾರಿ ಮುಂದಾಳು ಗೆನ್ನು ಜೈಲಿಲೆ ಯೂ ಇನ್ನಿತರ ಕಾರಣಗಳಿಗಾಗಿ ಸರಕಾರವು ಬಿಟ್ಟ ದಾಖಲೆಗಳಿವೆ. ಆದರೆ ಈ ಸಾರಿ ಸರಕಾರದ್ದಾ ಮಾಣ ಹೈದಯದೊಡನೆ ಜೈಲ್‌ಗೇಟಿನಲ್ಲಿ ಕೊಂಡಿ ಹಿಂದು ನಿಂದೆ.

ಜೈಲಿಲೆ ನುರಿರುವ ಮಹಾತ್ಮರನ್ನು ಸಂತ್ರಸ್ತರು ಬಿಡುಗಡೆ ಮಾಡೀತೆಂದು ಬೆಲಿಸಿ ಬಾಧಕರಿಗೆ ಪಮಿಯಿರುವಾಗಲಾರೂ ನಂಬುವಲ್ಲಿಲ್ಲ. ಗಾಂಧೀಯುಗದ ಕಾಯಿ ಲೆಯು ವಾರ್ತೆ ಇಡೀ ಭಾರತೀಯರ ಪ್ರಾರ್ಥನೆಯಾಗಿತ್ತು. ಈ ಕಾಯಿಲೆ : ವಾರ್ತೆಯೇ ಭಗವಂತನಿಂದ ಭಾರತೀಯರಿಗೆ ಬಂದ ಎಚ್ಚರಿಕೆಯೆಂದು ಕಾಣುವಿದೇನು? ಸೆರೆಮನೆಯು ವಿಕಾಂತದಲ್ಲಿ ಗಾಂಧಿಯವರು ಹೇಗಿರುವರು? ಮುಂದೆ ಸೆಣಿಸಾಟಯಲ್ಲಿ ಜಯವು ಬೇಕಲು ಬರಲಿ ಎಂಬ ಪ್ರಾರ್ಥನೆಯು ಕಾಯಿಲೆಯ ವಾರ್ತೆಯು ತಪ್ಪುಗರುವ ಎಚ್ಚರಿಕೆಯೆಂದು ಸರಕಾರವು ತಿಳಿದು ಯೋಗ್ಯರೀತಿ ವರ್ತಿಸಬೇಕು. ನಿಜ, ಸಾರ್ವಜ್ಞಾದಾಹದಲ್ಲಿ ಆಕಸ್ಮಿಕಾಗಿ ತಮ್ಮ ಹಿತವೆಡೆಗೇ ಕಣ್ಣಿಟ್ಟು, ವರ್ತಿಸುತ್ತಿರುವ ಬ್ರಿಟಿಷರಿಗೆ ಈ ದೈವಿಕವಾದ ಎಚ್ಚರಿಕೆಯು ಪರಿಣಾಮಕಾರಿಯಾಗದಿರಬಹುದು. ಆದರೆ ಬಡ ಭಾರತವು ಈ ಎಚ್ಚರಿಕೆಯನ್ನು ಮರೆಯದಿರಲಿ.

ಶುದ್ಧ ಫೇಜಿತತ್ವ ಪ್ರಚಾರಕರಾದ ಸರ್ ಆಸ್ಟಿನ್ ಚೆಂಬರ್ಲೈನರನ್ನು ಬ್ರಿಟಿಷರು ಆರೋಗ್ಯದ ಕಾರಣದಿಂದಾಗಿ ಬಿಡುಗಡೆ ಮಾಡಿದರು. ಬ್ರಿಟಿನಿನ ಒಂಪನೇ ನಂಬರು ಶತ್ರುವಿನ ತಿಬಿರಕ್ಕೆ ಸೇರಿದ ಮೋಸ್ಲೆಯವರನ್ನು ಬಿಡುಗಡೆಮಾಡಿದರೂ, ಭಾರತದಲ್ಲಿ ಇಡೀ ಭಾರತೀಯರ ಜೀವದ ಜೀವವಾಗಿ, ಉಸಿರಿನ ಉಸಿರಾಗಿ ಮತ್ತು ಫೇಜಿತತ್ವಕ್ಕೆ ವಿರುದ್ಧವಾಗಿ ಇರುವ ಮಹಾತ್ಮರನ್ನು ಬಿಡುಗಡೆ ಮಾಡುವ ಹೃದಯ ಬ್ರಿಟಿಷರಿಗಿಲ್ಲ. ಗುಲಾಮ ಭಾರತದ ವಿಶ್ವ ಪೂರ್ಣಕವಾದ ಕೂಗು, ಸೊರಗಿದ, ನಿರ್ವೀರ್ಯ ಭಾರತದ ಫ್ಲೇಇಸ್ಟರವು ಆತರ ಕ್ಷಿಣಿಗೆ ಮುಟ್ಟುವಂತಿಲ್ಲ. ಮುಟ್ಟಿದರೂ ಲೆಕ್ಕಿಸುವಂತಿಲ್ಲ. ಲೆಕ್ಕಿಸಬೇಕಾದರೆ ಜನಹಿತ ಪ್ರಜಾಸ್ವತಿನಿಧಿ ಸರಕಾರವಿದ್ದಿರೆ?

ಮಹಾತ್ಮರು ಜೈಲಿನಲ್ಲಿರುವುದರಿಂದ ಇಡೀ ಭರತಖಂಡ ಜೈಲಿನಲ್ಲಿದೆ. ಗಾಂಧೀಜಿಯವರ ಆಹಾರೋಗ್ಯವೇ ಪರದಾಸ್ಥಿತಿಯಲ್ಲಿರುವ ಭಾರತೀಯರ ಅಸಹಾಯಕತೆಯನ್ನು ವ್ಯಕ್ತಸಾಡುತ್ತಿದೆ. ಲಂಡನಿನ 'ಡೈಲಿಲ್ಕ್' ಪತ್ರಿಕೆ ಹೇಳಿದಂತೆ 'ಇಂಗ್ಲೆಂಡ್ ಮತ್ತು ಹಿಂದೂವೇತರಗಳೊಳಗಿನ ಬಾಂಧವ್ಯವನ್ನು ಬೆಳೆಸಬಹುದಾದ ಚತೇ ಗಂಟಿಯು ಕತೇ ನಿನಿಸಾ ಬಂದಿದೆ.' ಗಾಂಧೀಜಿಯವರು ಜೀವಂತರಾಗಿರುವ ವರೆಗೆ ಈ ಕಡೆ ನಿಮಿಷ ಉಳಿಯಬಹುದು. ಆದರು ಇರುವ ವರೆಗೆ ಹಿಂದೂದೇಶ ಇಂಗ್ಲೆಂಡಿಗೆ ಳೊಳಿಗೆ ಸ್ನೇಹವನ್ನು ಬೆಸೆಲು ಸಾಧ್ಯ ನಾಗಬಹುದು. ಆದರೆ ಇವರಿಗೆ ಆಗಾ ಖಾನ್ ಅರಮನೆ ಸೆರೆಮನೆಯಲ್ಲಿ ವಿತಾದ ರೂ ಸಂಭವಿಸುವಾಪಾದರೆ ೧ ಕಡೆ ನಿಮಿಷವು ಕಳೆಯು ಹೋಗುವುದು. ಬ್ರಿಟನ್ನಾ ಹಿಂದೂದೇಶಕ್ಕೆ ಮಿಲ್ಟಿ ಮಿಂಬಗಿನವರಿಬರುವ ಮಹಾ ಅಂತರವನ್ನುಂಟುಗುವುದು. ಆ ದ್ದರಿಂದ ಬ್ರಿಟಿಶರು ಎಚ್ಚರಿಕೆಯಿಂದ ವರ್ತಿಸಬೇಕು. ಬ್ರಿಟಿನು ಈ ಎಚ್ಚರಿಕೆಯನ್ನು ನಿರ್ಲಕ್ಷಿಸುವುದಾದರೆ ಇಂಡು ತಿವರು ಯಾವ ಉಚ್ಚ ಧ್ಯೇಯಗಳನ್ನು ಹೇಳಿಕೊಂಡು ಯುದ್ಧ ಮಾಡುತ್ತಿರುವುದೋ ಆ ಧ್ಯೇಯಗಳಿಗೆ ಗಂಡಾಂತರ ಒದಗದಿರದು.

ವಾರ್ತಾತರಂಗ.

ಬಳೆ ವೇಕೆ.

ಶ್ರೀ ಲುಂಬಾಕಳಿಯಂದ ಜೋಪಣ್ಣನವು ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಕಳೆದ 1944 ನೇ ಮಾರ್ಚ್ ತಿಂಗಳಲ್ಲಿ ನಡೆದ ಫೈನಲ್ ಎಲ್. ಎಂ. ಪಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಕಳೆದ ಲೋಕಲ್ ಸೆಲ್ಫ್‌ಗವರ್ನ್‌ಮೆಂಟ್ ಪರೀಕ್ಷೆಯಲ್ಲಿ ಈ ಬಾರಿ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು. ಮಡಿಕೇರಿ ಫೈನಲ್ಸ್‌ನಲ್ಲಿ 84 ರಲ್ಲಿ 57, ವೀರಾಜಪೇಟೆ ಫೈನಲ್ಸ್‌ನಲ್ಲಿ 105 ರಲ್ಲಿ 49, ಪೊಡುಗಿಜ್ಜರ ಫೈನಲ್ಸ್‌ನಲ್ಲಿ 57 ರಲ್ಲಿ 27, ಪೊನ್ನಂಪೇಟೆ 59 ರಲ್ಲಿ 14, ಸೋಮವಾರಪೇಟೆ 22 ರಲ್ಲಿ 14, ಸೋಮವಾರಪೇಟೆ 22 ರಲ್ಲಿ 9, ಮಡಿಕೇರಿ 41 ರಲ್ಲಿ 18, ಆನ್ಸ್‌ಬ್ರಿ 42 ರಲ್ಲಿ 15, ಕಕ್ಕಟುಕಾಡು 48 ರಲ್ಲಿ 17, ಕೊಟ್ಟೂರು 32 ರಲ್ಲಿ 13, ಮೂರ್ನಾಡು 23 ರಲ್ಲಿ 4, ಕೊಡ್ಲಿಪೇಟೆ 9 ರಲ್ಲಿ 6, ಚೈಯಂಡಾಣಿ 19 ರಲ್ಲಿ 13, ಬೆಳಗಾರು 10 ರಲ್ಲಿ 7, ಬಿಟ್ಟಂಗಾಲೆ 8 ರಲ್ಲಿ 4, ಫೈಜಾರ್‌ಪೇಟೆ 3 ರಲ್ಲಿ 2 ಕಕ್ಕಟ್ಟಿ 10 ರಲ್ಲಿ 6, ವಿರಾಜಪೇಟೆ ಫಲಿತಾಂಶವನ್ನು ಪ್ರಕಟಿಸಿರುವರಿಷ್ಟೆ ಮಡಿಕೇರಿ.

ಕೊಡಗಿನಲ್ಲಿ ಕಸ್ತೂರಿಬಾಯಿ ನೇಶನಲ್ ಮೆಮೋರಿಯಲ್ ಫಂಡಿಗೆ ರೂ. 10000 ಕ್ಕೆ ಕಡಿಮೆಯಿಲ್ಲದೆ ವಸೂಲ್ಮಾಡಬೇಕೆಂದು ನಿಶ್ಚಯಿಸಿ, ವಸೂಲಾತಿ ಸಮಿತಿಯೊಂದನ್ನು ಸಾರ್ವಜನಿಕ ಕೆಲಸಗಾರರು ಆರಿಸಿದ್ದಾರೆ.

ಇಲ್ಲಿ ಸಿವಿಲ್ ಆಸ್ಪತ್ರೆಯಲ್ಲಿ ಹೆಂಗಾಮಿ ಡಾಕ್ಟರಾಗಿರುವ ಶ್ರೀ ಮಾಧವರಾಯರನ್ನು ಫ್ರೇಜರ್‌ಪೇಟೆಗೂ ಡಾ. ವೆಂಕಟ ಸುಬ್ಬಯ್ಯನವರನ್ನು ಇಲ್ಲಿಗೂ ವರ್ಗಾಯಿಸಲಾಗಿದೆ. ಡಾಕ್ಟರ್ ರಾಮಸ್ವಾಮಿಯವರು 4 ತಿಂಗಳ ರಜೆಯಲ್ಲಿ ಹೋಗುವದರಿಂದ ಡಾ. ಡಿಸೋಜರವರು ಮೂರ್ನಾಡಿನಿಂದಗೆ ನಾಪೋಕ್ಲಿಗೆ ಹೋಗುವರು. ಗುರುವಾರಗಲ್ಲಿ ಅವರೇ ಮೂರ್ನಾಡು ಆಸ್ಪತ್ರೆಯನ್ನು ನೋಡಿಕೊಳ್ಳುವ ವಿರ್ಪಾಡಾಗಿ ದೆಯಂತೆ.

ಕಳೆದ ಫೆಬ್ರುವರಿಯಲ್ಲಿ ಮಡಿಕೇರಿಯಲ್ಲಿ ಸೆಡೆದ ಹಿಂದೀ ಪರೀಕ್ಷೆಯಲ್ಲಿ ಶ್ರೀ ಮಡಿಯರಾದ ಎಂ. ಕೆ. ರಾಜಲಕ್ಷ್ಮಿ, ಎಂ. ಕೆ. ಸುಮಿತ್ರ, ಆರ್. ಎ. ರಾಜಮ್ಮ ಇವರು ಪ್ರಥಮಿಕ ಪರೀಕ್ಷೆಯಲ್ಲೂ, ಬಿ. ಬಿ. ಪೊನ್ನಮ್ಮ, ಶ್ರೀಗಳಾದ ಬಿ. ಎಸ್. ಪದ್ಮನಾಭಭಟ್ಟ, ಕೆ. ಎನ್. ಜಾನ್ಸಿಶೇಕರ ಮತ್ತು ಪಿ. ಜೆ. ನಾರಾಯಣರಾವ್ ಇವರು ಮೊದಲ್ಮಾಮಿಕದಲ್ಲಿಯೂ ಶ್ರೀಮತಿಯರಾದ ಬಿ. ಬಿ ಮುತ್ತಮ್ಮ, ಕೆ. ಪಿ. ಸೀತಮ್ಮ ಇವರು ರಾಷ್ಟ್ರಭಾಷಾ ಪರೀಕ್ಷೆಯಲ್ಲೂ ತೇರ್ಗಡೆಯಾಗಿರುವರು. ಈ ಕೇಂದ್ರದಲ್ಲಿ ಪರೀಕ್ಷೆಗೆ ಕೂತ ಎಲ್ಲರೂ ಪಾಸಾಗಿರುವರು.

ವೀರಾಜಪೇಟೆ.

ಕುಕ್ಕೂರು ಗ್ರಾಮದ ಭದ್ರಕಾಳಿ ದೇವರ ಹೆಬ್ಬಾಗಿಲು ತಾ. 22-23 ಮತ್ತು 24 ರಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ದಕ್ಷಿಣ ಕೊಡಗಿನ ಮಹಿಳಾ ಗಣಕಾರಿಣಿಯಾದ ಶ್ರೀ ಸಿ. ಟಿ. ಕಾವೇರಮ್ಮನವರ ಪ್ರಯತ್ನದಿಂದ ಹೆಮ್ಮೆಳೇರಿ, ಪೊನ್ನಂಪೇಟೆ, ನಾಪೋಕ್ಲು ಮತ್ತು ಅಮ್ಮತ್ತಿಯಲ್ಲಿ ಮಹಿಳಾ ಸಹಕಾರ ಸಂಘಗಳು ಸ್ಥಾಪಿತವಾಗಿ ಕೆಲಸ ಪ್ರಾರಂಭಿಸಿವೆ.

ಜೆಂಬೆಬೆಳಯೂರು ಗ್ರಾಮದ ಶ್ರೀ ಮಾ ವೇಂಡಂಡ ಐಯ್ಯಪ್ಪನವರ ದನಗಳ ಕೊಟ್ಟಿಗೆಗೆ ತಾ. 1-5-44 ರ ರಾತ್ರೆ ಹೇಗೋ ಬೆಂಕಿ ಬಿದ್ದು ಕಿಟ್ಟಿಗೆ ಬೆಂದು ಹೋದದ್ದಲ್ಲದೆ ಕೆಲವು ನಡೆ ದನಗಳು ಕಬ್ಬು ಮೇಯಲು ಹೋಗಿಯೆಂದು ವಾರ್ತೆ.

ಸೋಮವಾರಪೇಟೆ?

ಇಲ್ಲಿಯ ಹೈಸ್ಕೂಲ್ ಸ್ಥಾವನೆಯ ಸಂಬಂಧ ಚರ್ಚೆಯೊಂದು ಜನ ಸಮ್ಮೇಳನದಲ್ಲಿ ಈಗೊಂಚ ಐದು ಫಿಲೋಗಾಗೋಸ್ಟ್ಯಮು ತಾ. 2-5-44 ರಲ್ಲಿ ಚೇರ್ಮನ್ ಕಮಿಟಿಯನ್ನು ರಚಿಸಲು ಸೂಕಾಡಿರು.

ಗೆಜೆಟ್.

ಕೊಡಗು ನ್ಯಾಯವಿಧಾಯಕ ಸಭೆಯ ಸಭಸ್ಯರ ಸದಸ್ಯತನದ ಅವಧಿಯನ್ನು 31-3-1945 ರ ವರೆಗೆ ಮುಂದಗಿಸಲಾಗಿದೆ.

1945 ರಲ್ಲಿ ತಯಾರುಮಾಡುವ ಮತದಾರರ ಪಟ್ಟಿಯನ್ನು ಉಸಯೋಗಿಸಿಕೊಳ್ಳುವ ಅಧಿಸೂಚನೆಯನ್ನು ಯೂನಿಯನ್ ಬೋರ್ಡ್ ಪಡೆವ ವ್ಯಾಪ್ತಿಯಲ್ಲಿ ವಿಶೇಷ ಅಧಿಸೂಚನೆ ಪಡೆಯದೆ ಬಿಟ್ಟ ಕೊಂಡುಕೊಳ್ಳಕೂಡದಾಗಿ ನಿರ್ಬಂಧಿಸಲಾಗಿದೆ.

ಕೊಡಗಿನಲ್ಲಿ ಮೊರ್ಜಾ ತಿಂಗಳಲ್ಲಿ 251 ಜನನಗಳೂ 262 ಮರಣಗಳೂ ಸಂಭವಿಸಿವೆಯೂಗಿ ಪ್ರಕಟಿಸಲಾಗಿದೆ.

ದ್ವಿತೀಯ ರಂಗದ ಸಿದ್ಧತೆಗಳು.

ಮಣಿಪುರದಲ್ಲಿ ಸ್ವಲ್ಪ ಶುಭವಾರ್ತೆ.

ಲೇಖಕ—'ಗುಪ್ತ'

—೦೦—

ಕಳೆದ ವಾರದ ನನ್ನ ಲೇಖನದಲ್ಲಿ 'ಜರ್ಮನರನ್ನು ಆಕಾಶದಿಂದ ಉರುಳಿಸಲಾಯಿತು, ಮುಂದೇನು?' ಎಂದು ಪ್ರಶ್ನೆ ಕೇಳಿದ್ದೆ. ಮಿತ್ರರು ಮುಂದಿನ ಹೆಜ್ಜೆಗೆ ಯೋಗ್ಯ ವಿರ್ಪಾಡು ಮಾಡುತ್ತಿದ್ದಾರೆ. ಮಿತ್ರರು ಜರ್ಮನಿಯ ಮೇಲೆ ಮಾಡುತ್ತಿರುವ ಬಾಂಬುದಾಳಿಯು ದ್ವಿತೀಯ ರಂಗಕ್ಕೆ ಪೂರ್ವ ಪೀಠಿಕೆಯೆಂದು ಹಲವು ಬಾರಿ ಬರೆಯಲಾಗಿದ್ದು. ಆದರೆ ಆಗ, ಈಗ ಪ್ರಾರಂಭವಾಗುವದೆನ್ನುತ್ತಿದ್ದ ದ್ವಿತೀಯ ರಂಗದ ಸೊಲ್ಲಡಗಿ ಅನೇಕ ತಿಂಗಳುಗಳು ಕಳೆದುವು. ನಂತರ ಇಂಗ್ಲಂಡಿನ ದ್ವಿತೀಯ ರಂಗದ ಗುಲ್ಲು ಹೆಚ್ಚಾಗಿ ಕೇಳಿಬರುತ್ತಿದೆ. ಇಪ್ಪೆಲ್ಲಾ ಗುಲ್ಲು ಕೇಳಿಬಂದರೂ ನನ್ನ ನಿಲುವೇನೆಂದರೆ ದ್ವಿತೀಯ ರಂಗವು ನಿಜವಾಗಿ ಪ್ರಾರಂಭವಾಗಿದೆ ಎಂದು ನಿಜವಾಗಿ ಧಾಳಿ ಮಾಡುವವರು ನಾವು ದ್ವಿತೀಯ ರಂಗ ತೆರೆಯುತ್ತೀನೆ ಎಂದು ಹೇಳಿ ತಿರಿಯುವರಾರು. ಈ ರೀತಿಯ ಧರ್ಮ ಯುದ್ಧಕ್ಕೆ ಸ್ಥಾನ ಧರ್ಮರಾಯನ ತಾಲಲ್ಲಿ! ಕೈಯ್ಯಲ್ಲಿ ಶಸ್ತ್ರವಿಲ್ಲದಿದ್ದರೆ ಯುದ್ಧ ಮಾಡಬಾರದು; ಶತ್ರುವನ್ನು ಎಚ್ಚರಿಸಿ 'ಇದೋ ಈ ಬಾಣವನ್ನು ಸಹಿಸು' ಎಂದು ಧಾಳಿ ಮಾಡುವದು-ಇದೆಲ್ಲಾ ಭಾರತ, ರಾಮಾಯಣ ಕಾಲದ ಯುದ್ಧ ನೀತಿ. 'ಶಲ್ಲಿ ಧಾಳಿ ಪ್ರಾರಂಭಿಸುತ್ತೀನೆ' ಎನ್ನುವುದೇ ಇಂದಿನ ಯುದ್ಧ ನೀತಿಗೆ ವಿರುದ್ಧವಿರುವಾಗ, ಇನ್ನೇನೂ ಒಪ್ಪಿ ಮಿತ್ರರೂ ಸಹ ಶತ್ರುಗಳಿಗೆ ತನ್ನು ಸಿದ್ಧತೆ ತಿಳಿಯಬಾರದೆಂದು ಖಾಸಗಿ ಪತ್ರಗಳ ನೇಲೂ ನಿರ್ಬಂಧ ಹಾಕಿರುವಾಗ 'ದ್ವಿತೀಯ ರಂಗ ತೆರೆಯುತ್ತೀವೆ' ಎಂಬ ಕಣ್ಣಾಳೀನ ಕ ಕುರುಗು ಕೇಳುತ್ತಿದೆ! ಹೀಗೂ ಕಳೆದ ವಾರದಲ್ಲಿ ಆ ದ್ವಿತೀಯ ರಂಗದ ಸಿದ್ಧತೆಯ ಬಗ್ಗೆ ಸಂಯುಕ್ತ ರಾಷ್ಟ್ರಗಳು ಕೈಗೊಂಡ ಕೆಲವು ನಿರ್ಪಾಡುಗಳು ಬೆಳಕಿಗೆ ಬಂದಿವೆ. 'ಫ್ರಾನ್ಸಿನಲ್ಲಿ ವೈಯರ್‌ಲೆಸ್ ನಿಲ್ದಾಣಗಳಿರುವವರೆಲ್ಲರೂ ದ್ವಿತೀಯ ರಂಗದ ಮುಂದಿನ ಕಾರ್ಯಕ್ರಮಗಳ ಬಗ್ಗೆ ಲಂಡನಿನಿಂದ ಬರುವ ವಾರ್ತೆಗಳನ್ನೆಷ್ಟೇ ಕೇಳಿ ಮನನ ಮಾಡಿಕೊಳ್ಳಬೇಕು. ಯಾಕೆಂದರೆ ದ್ವಿತೀಯ ರಂಗ ಪ್ರಾರಂಭವಾದೊಡನೆ ಜರ್ಮನರು ಫ್ರೆಂಚರಿಂದ ಈ ವೈಯರ್‌ಲೆಸ್ ಯಂತ್ರಗಳನ್ನು ಕಿತ್ತುಕೊಳ್ಳಬಹುದಾದ್ದರಿಂದ ಮುಂದಿ ಆಗಾಗ್ಗೆ ಸೂಚನೆ ಕೊಡುವರು ಕವ್ಯವಾಗಿ ಪರಿಣಮಿಸುವುದು. ಅಲ್ಲದೆ ಪ್ರಬಲವೆಬ್ಬ ಫ್ರೆಂಚೇತರ ತುಂಗೆ ಸಾಧ್ಯವಿರುವಷ್ಟು ಆಯಾರ ಸಾಮಗ್ರಿಗಳ ನ್ನು ಕೇಳಿಸಿಟ್ಟುಕೊಳ್ಳಬೇಕು. ಯುದ್ಧ ಪ್ರಾರಂಭವಾದನಂತರ ಆಹಾರ ಪದಾರ್ಥಗಳ ಸರಬರಾಯಿ ಇಲ್ಲದೆ ಮುಂದೆ ತೊಂದರೆವಡಬೇಕಾದೀತು' ಎಂದು ಫ್ರೆಂಚರನ್ನು ಎಚ್ಚರಿಸಲಾಗಿದೆ.

ಪ್ರೆಟಿಸ್ಸಿಲ್ಲ ಈಗ ಏನು ನಡೆಯುತ್ತಿದೆಯೆಂಬುದು ಬಲು ಗೂಢವಾಗಿದೆ. ಲಲ್ಲಿಗೆ ಯುದ್ಧಕ್ಕೆ ಹೋರಬೇಳಲಾರದೆಂದು ಸರ್ವ ಕಾಗೆವ ಪತ್ರಿಕೆಗಳ ಮೇಲೆ ಸಹ ಪ್ರತಿಬಂದ ಹೇರಲಾಗಿದೆ. ಈ ರೀತಿಯ ಗುಟ್ಟಿನ ವಾರ್ತಾಭ್ಯಾಸದ ಕಾರಣದಿಂದಲೇ ಜರ್ಮನರಿಗೆ ದ್ವಿತೀಯ ರಂಗವು ನಿರ್ವಾಡಿತ ವಿಜಾರದ ತೆಳಿದಿಲ್ಲ. ಜರ್ಮನ್ ವಿದೇಶ ಪ್ರಚಾರಕರೊಬ್ಬರು ಹೀಗೆ ಹೇಳಿದ್ದಾರೆ-'ಆಂಗ್ಲೊ ಅಮೇರಿಕನರ ಸಿದ್ಧತೆಗಳು ಅಂಧಾ ಪ್ರಗತಿಯ ಮಟ್ಟಿಗೆ ಲಲಿಪಿರುವ ದರಿಂದ ಧಾಳಿಯು ದೂರವಿರಲಾರದು.' ಆದ್ದರಿಂದಲೇ ಜರ್ಮನರು ನಿಶಿಸ್ತ್ರ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಜರ್ಮನರ ಸೈನ್ಯ ಗೋಡೆಯು ಬಹಂ ಒಲವಾಗಿರಬವರಿದೆ. ಜರ್ಮನರನ್ನು ಸುಮಾರು 250 ಮೈಲುಗಳ ವರೆಗೆ ರಷ್ಯನರು ಹಿಮ್ಮೆಟ್ಟಿಸಿರುವರು.

ಮಣಿಪುರದ ಯುದ್ಧವು ಈ ವಾರ ಸ್ವಲ್ಪ ಮಿತ್ರರ ಕಡೆಗಿರುವಂತೆ ಕಂಡುಬರುತ್ತಿದೆ. ಕೊಹಿಮಾವನ್ನು ಜಪಾನರು ಸುತ್ತುವರಿದು ಆವರ ಪರಿಸ್ಥಿತಿ ಗಂಡಾಂತರದಲ್ಲಿ ಇತ್ತು. ಆದರೆ ದಿಮಾಪುರದಿಂದ ಬಂದ ಹಿಂದು ಸೈನ್ಯವೊಂದು ರಸ್ತೆಯನ್ನು ಹಿಡಿದಿದ್ದ ಜಪಾನರನ್ನು ಹಿಮ್ಮೆಟ್ಟಿಸಿ ಕೊಹಿಮಾಕ್ಕೆ ಬಂದು ಸೇರಿದ್ದರಿಂದ ಸ್ವಲ್ಪ ಸುಧಾರಿಸಿದೆ. ಆದರೂ ಅವಕ್ಕಿರುವ ಗಡಾಂತರ ತಪ್ಪಿತೆಂದು ಹೇಳಬಾರದು. ಜಪಾನರ ಪ್ರಥಮ ಪೆಟ್ಟಿನಿಂದ ಕೊಹಿಮಾ ಉಳಿದಿದೆ. ಇಂಫಾಲ್ ಶತ್ರುವಶವಾಗದೆ ನಿಂತಿದೆ. ಜಪಾನರಿಗೆ ಈ ವಾರ ಹೇಳಿಕೊಳ್ಳಬಹುದಾದ ಯಾವ ವಿಜಯವೂ ದೊರೆಕಂತೆ ಕಾಣುವುದಿಲ್ಲ. ಹೇಗೂ ಜಪಾನರ ಪ್ರಥಮ ಮೆಚ್ಚುಪೆರ ಧಾಳಿ ಆವರಿಗೆ ಆಚ್ಚೊಂದು ಅತಾದಾಯಲ್ಲವಾಗಿಲ್ಲ. ಈ ನಿರಾಶೆಯಿಂದ ಅವರು ನಿರುತ್ಸಾಹಗೊಳಿಸಿ ಹಿಂದೆ ಹೋದಾರೆಂದು ಯಾರೂ ತಿಳಿಯಬಾರದು. ಸೌತ್ ಈಸ್ಟ್ ಏಶ್ಯಾಕ್ಕ ಕಮಾಂಡಿನವರು ತಾ. 29ರಲ್ಲಿ ಹೊಡಿಬಿಸಿವ ಹೇಳಿಕೆಯೊಂದು ಹೀಗೆ ಹೇಳುತ್ತದೆ-'ಬರ್ಮಾದಲ್ಲಿ ಶತ್ರುವಿಗೆ ಬಲವಾದ ನೆಲ ಸೈನ್ಯ-ಸಾಮಾನ್ಯವಾಗಿ ಸಾರ್ವಜನಿಕರು ಊಹಿಸುವುದಕ್ಕಿಂಥಾ ಶಕ್ತಿಯುಪಪಾದ-ಸೈನ್ಯವಿದೆ. ಆಲ್ಲದೆ ಅವರಿಗೆ ಅಂತರ್ಜಲ ಸಹಾಟಿನ ಮಾರ್ಗಗಳ ಅನುಕೂಲತೆ ಇದೆ. ಯುದ್ಧ ಗತಿಯು ಒಂದಿಲ್ಲೊಂದು ಭಾಗದಲ್ಲಿ ಅವರ ಧಾಳಿಯನ್ನು ನಿರೀಕ್ಷಿಸಬೇಕಿದೆ. ಮುಂದೆ ಬರ್ಮಾದಲ್ಲಿ ಕವ್ಯತರವಾದ ಯುದ್ಧವಿದೆ'. ಆದ್ದರಿಂದ ಜಪಾನರು ಮಳೆಗಾಲ ಪ್ರಾರಂಭವಾಗುವ ಮೊದಲು ಇನ್ನೊಮ್ಮೆ ಧಾಳಿ ಪ್ರಾರಂಭಿಸಬಹುದು

ನನಗೂ ದಮ್ಮು ಇತ್ತು ಆದರೆ ಈಗ ಅದರ ನೆನಪು ಸಹ ಇಲ್ಲ.

ದಮ್ಮು ಒಮ್ಮೆಲೇ ಗುಣವಾಗದೇ ಕೆಂಬ ಆಕಾಂಕ್ಷೆಯಿಂದ ಕೆಲವು ಉಲ್ಬಣವಾದ ಔಷಧಗಳನ್ನು ತೆಗೆದುಕೊಳ್ಳುತ್ತಾರೆ. ಆದರಿಂದ ತಾತ್ಕಾಲಿಕ ಗುಣ ಕಂಡು ಬಂದರೂ ಮುಂದೆ ಚಿಕಿತ್ಸೆ ಪರಿಣಾಮ ಬಹಳ ಕೆಡುಕು ಆಗುತ್ತದೆ. 'ಪರೋಪಕಾರ ಶ್ವಾಸ ಹಾರಿ'ಯು ಮೂಲ್ಕ ದಮ್ಮಿಗೆ ಉತ್ಕೃಷ್ಟ ಔಷಧವಾಗಿದೆ. ಇದು ದಮ್ಮಿನ ಕ್ಷಣಿಕವಾಗಿ ನೋಂಡಿಸದೆ ಬೇರು ಸಹಿತ ಕಿತ್ತೊಗೆದು ಗುಣ ಮಾಡುತ್ತದೆ. ಅಷ್ಟನ್ನು ತೆಗೆದುಕೊಳ್ಳಿ ಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಕೊಂಚದ ತೊಂದರೆ ಉಳಿಯುವುದಿಲ್ಲ. ಸಚಿನ ಕ್ರಿಯೆ ನೆಟ್ಟಗಾಗುವುದು. ಸಾವಕಾಶವಾಗಿ ಚಿಕ್ಕಿಯು ಬಂಬು ಬಾರು ಪುಳ್ಳಿಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವುದು.

ರೂ. 3-6-0, ರೂ. 5-12-0, ರೂ. 10-0-0ಗಳಿಗೆ ಸಣ್ಣ ಸಣ್ಣ ಬಾಟ್ಲಿಗಳು ಎಲ್ಲಾ ಕಡೆಗಳಲ್ಲೂ ಸಿಗುತ್ತವೆ.

ಪತ್ರ:- ಡಾ. ಪುರೋಹಿತ ಫಾರ್ಮಸಿ, ಕೊಲ್ಲಾಪುರ.

Madras Stockists,
M/S Appah & Co
China Bazar,
Madras.

PUROHIT SHWAS HARI

— ಶೀಲಧಾ —

ಎಂಟಿ ಮಲೇರಿಯೂ ವನಸ್ಪತಿ ಪಿಲ್ಸ್.

ಎಲ್ಲ ತರದ ಜ್ವರ, ಜ್ವರ ಗಡ್ಡೆ, ತಲ್ಲಣ್ಯ ಆಕೃತಿ ಮೇಲೆ ರಾಮಬಾಣ; ಲಿವರ, ಹೊಟ್ಟೆನೋವು, ಮಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ. ಪ್ಲೆನ್ಸೆನ್ ಬವಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ಉಪಯೋಗಿಸುವರು 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0. ಈ ಔಷಧಿಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊಟ್ಟವರಿಗೆ ಒಂದು ಸಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ಮಾರಾಟಕ್ಕೆ ಏಜೆಂಟರು ಬೇಕು.

ಶೀಲಧಾ ಕೆಮಿಕಲ್ಸ್ ಕಂಪೆನಿ,
ತಿರಸಿ, ಉತ್ತರ ಕನ್ನಡ.

ಸೋಲ್ ಏಜೆಂಟರು:-
ಎಸ್. ಎಲ್. (ಅಪ್ಪುರಾವ್) ಭಾಕಳ್ಪೆ.
ಬಜಪರ ಔಷಧಿ ಸರ್ವಿಸ್,
ತಿರಸಿ, ಉತ್ತರ ಕನ್ನಡ

ವ್ಯವಸಾಯಗಾರರಿಗೆ ಸುಸಮಯ.

ಗದ್ದೆ ಮತ್ತು ಕಾಫಿತೋಟಕ್ಕೆ ಬೇಕಾಗುವ ಉತ್ತಮ ದರ್ಜೆಯ ಗುಳಿ, ಗುದ್ದಲಿ, ಮುಳ್ಳುಗುದ್ದಲಿ, ಪಿಕಾಸಿ, ಹಾತ, ಕತ್ತಿ, ಕಸಿಚಾಕು, ಕೊಡಲಿ, ಹಳಿಯಿನ ದಬ್ಬೆ, ಕೂಲಿಕಂಬಳಿ, ಸ್ಪ್ರೆಮಿಶ್ನಿಗೆ ಬೇಕಾದ ಪ್ಯಾಕಿಂಗ್ ಮತ್ತು ಜಟ್, ರಬ್ಬರ್‌ಹೋಸ್ ಮುಂತಾದ ಎಲ್ಲಾ (Spar parts) ಸಾಮಾನುಗಳೂ ಸ್ಟಾಕ್‌ನಲ್ಲಿ ಮೊರೆಯುತ್ತವೆ.

ಪಲ್ಪರ್ ವಿಷಯ ಮತ್ತು ಸ್ಪ್ರೆಯಿಂಪು ಗಳನ್ನು ರಿಪೇರಿ ಸಹ ಮಾಡುತ್ತೇವೆ.

ಧಾರಣೆ ಪಟ್ಟಿಗೆ ಪೆಟ್ಟಿನ ಸಂಗತಿಗಳಿಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿಯಿ.

ಕೆ. ಎಸ್. ನೀತಾರಾಯಯ್ಯ
ಅಂಡ್ ಕೊ,
ಎಲ್ಕ್ಟ್ರೀಷಿಯನ್ಸ್,
ಬೆಂಗಳೂರು ಸಿಟಿ.
12-1

"ಟ್ರಾಪಿಕಲ್"

ಕಂಪೆನಿಯಲ್ಲಿ ನಿಮ್ಮ ಮಾಡುವದೇ

ಯೋಗ್ಯವೆಂದು ನಿಮ್ಮ 1944ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಪಾಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಏಜೆಂಟರು—ಹೊನ ನಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ರಿಗೆ ಬರೆಯರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥರೆಟ್ಟಿ, ಬ್ರಾಂಚ್ ಮೇನೇಜರ್, ಮಂಗಳೂರು

17)

ನಾಳೆ ಎಂಬುವುದಿಲ್ಲ!

ನನ್ನು ಅಜ್ಜ ಮುತ್ತಜ್ಜಂಯರು ಯಾವಾಗಲೂ "ಶುಭಸ್ಯ ಶೀಘ್ರಂ" ಎಂದು ಹೇಳುತ್ತಿದ್ದರು. ನಿಮ್ಮ ಬಳಗದ ವರಿಗೂ ಮತ್ತು ಪ್ರೀತಿಗೆ ಪಾತ್ರರಾಗುವುದಕ್ಕಾಗಿ ನೀವು ಮಾಡಬಹುದಾದ ಉತ್ತಮ ಸೇವೆ ನಿಮ್ಮ ಮಂದುವುದೇ ಆದ ಕಾರಣ ಅನ್ನು ಈಗಲೇ ಮಾಡಬೇಕು. ಬಾಧ್ಯತೆಯಿಂದ ರಕ್ಷಿಸುವಲ್ಲಿನ್ನು ಸಂಯೋಗ ಉತ್ಪತ್ತಿಯಾಗುವಾಗಲೇ ನಿಮ್ಮ ಮಾಡಿ ನಿಶ್ಚಿತ ವರ್ಷಾನ್ನವನ್ನು ಪಡೆಯಬಹುದಾದಿ. ಅಗಲು ತಮ್ಮ ಭಾಗ್ಯವನ್ನು ಸಾರ್ವಜನಿಕ ಸಂಖ್ಯೆಗೆ ಪಾತ್ರವಾದ ಒಂದು ಕಂಪೆನಿಗೆ ಒಪ್ಪಿಸುತ್ತಾರೆ.

ನಮ್ಮ 33 ವರ್ಷಗಳ ಅನುಭವದಿಂದ ಇಂಡಿಯಾದ ಉತ್ತಮ ಕಂಪೆನಿಗಳಲ್ಲಿ ಒಂದಾದ

ದಿ ಬೋಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿ.

ಇದನ್ನು ನಿನುಗೆ ಸಿಪಾರಸ್ಸು ಮಾಡಬಲ್ಲೆವು.

ಭಾರಾಳಿ ಶರತುಗಳ ಮೇಲೆ ಸ್ವತಂತ್ರಿಗಳಲ್ಲದ ಕೊಡಗಿನ ಭಾಗಗಳಿಗೆ ಏಜೆಂಟರು ಬೇಕಾಗಿದ್ದಾರೆ.

ಕೊಬ್ಬಿಕಾರ್ ಬ್ರದರ್ಸ್ ಲಿ.—ಪ್ರಾಮುಖ್ಯ ಏಜೆಂಟರು.

ದಕ್ಷಿಣ ಇಂಡಿಯಾಕ್ಕೆ, ಹಾಗು ಸಂಸ್ಥಾನಗಳಲ್ಲಿನ್ನೊಳಗೊಂಡು ಪೊ. ಬಾ. 337. ಮೌಂಟ್ ರೋಡ್, ಮದ್ರಾಸು.

23) ಕಚೇರಿಗಳು ಮತ್ತು ಏಜೆನ್ಸಿಗಳು ದಕ್ಷಿಣ ಇಂಡಿಯಾದಲ್ಲೆಲ್ಲಾ ಇವೆ.



ಸ್ವದೇಶಿ ಭವನ

ಶನಿವಾರಸಂತೆ.

ರುಜಿಕರವಾದ ತಿಂಡಿಗಳು, ಮತ್ತು ತಣಿಸುವಂಥಾ ಪಾನೀಯಗಳು.

ಉಗಿಕೊಳ್ಳಲು ಬೋಗ್ಗಿ ರಿಜರ್ವಿಡಿ. ಪ್ರಯಾಣಿಕರಿಗೆ ಸಕಲ ಸಾಹಾಯವನ್ನೂ ಒದಗಿಸಲಾಗುವದು.

ಎಸ್. ಎನ್ ತಮ್ಮಯ್ಯ,
ಪ್ರೊಪ್ರೈಟರ್.

ಪವರ್ ಪ್ರೆಸ್

ಕೊಬ್ಬು ಧಾರಣೆ ಪುಸ್ತಿಯನ್ನುಂಟು ಮಾಡಿ. ವಿವಾಹಿತರಿಗೆ ಸಂತೃಪ್ತಿ ದೊನ್ಮಾ ಪದಾರ್ಥವನ್ನೂ ಕೊಡಲು ಮಹಾಸಮರ್ಥರು ಸೂಕ್ತ ರಿಗೆ ಪ್ರಾರ್ಥನೆ.

ಡಬ್ಬಿ ಒಂದಕ್ಕೆ 1 ರೂಪಾಯಿ.

ಮಹಾಸಮರ್ಥರು ಫಾರ್ಮಸಿ, 184, ಪೈನಾಪಾಪ್ಪರ್ ರೋಡ್, ಮದ್ರಾಸ್.

ಮಾರಿಕರಿ—ಡಾ. ಕೆ. ಜಿ. ಕಮಲಾಯ್ಯ, ಸೋಮವಾರಪೇಟೆ—ಡಾ. ಬಿ. ಎ. ಅಯ್ಯ, ವೀರಾಜಪೇಟೆ—ಡಾ. ಕೆ. ರಾಮಲಿಕ್ಷ್ಮರಾವ್.

(1ನೇ ಪುಟದಿಂದ ಸಾಗಿದ್ದು.)

ನ್ನೇ ಸಂಘದ ಕಾರ್ಯ ಕರ್ತರನ್ನಾಗಿ ನಿಯಮಿಸಿಕೊಳ್ಳತಕ್ಕದ್ದು. ಚೆರಪಾ ಸಂಘವು ತನ್ನ ಆಡಿಟರುಗಳ, ಇನ್ಸ್‌ಪೆಕ್ಟರುಗಳ ಮೂಲಕ ಆ ಸಂಘಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಬಗ್ಗೆ ಹಣದ ಸದುಪಯೋಗ ಮಾಡುವ ಬಗ್ಗೆ ಲಕ್ಷ್ಯ ಇಡುವದು. ಯಾರೂ ತಪ್ಪು ದಾರಿಯಲ್ಲಿ ನಡೆದು ಖಾದಿಗೆ ಅಪಖ್ಯಾತಿ ಮಾಡಲು ಸಾಧ್ಯವಿಲ್ಲದಂತೆ ಯೋಗ್ಯ ವ್ಯವಸ್ಥೆಗಳನ್ನೆ ಇಡಲ್ಪಡುವುದು.

ಸಂಶಯನಿವಾರಣೆ.

ಕೆಲವು ಮಿತ್ರರು ಈ ಯೋಜನೆಯು ಡಿ.ಕ್ಟ್ರಿಯೂಗಿ.ಷ ಬಗ್ಗೆ ಸ್ವಲ್ಪ ಸಂಶಯವನ್ನು ಪಡಬಹುದು. ಅವರಿಗೆಂತು ಮೂರು.

(1) ಇದು ಸೂಜಿ ಯೂ ನಿರೀಕ್ಷೆಯ ವಿಕೇಂದ್ರೀಕರಣವಲ್ಲ. ಇಂ ವಿಕೇಂದ್ರೀಕರಣದ ಬಗ್ಗೆ ಒಂದೇ ಒಂದು ಹೆಜ್ಜೆ ಮೊದಲ ಹೆಜ್ಜೆ. ಹಳ್ಳಿಗೊಂದು ಹುಟ್ಟುವಳಿ ಸಂಘ, ಖಾಂಗೆಂದು ಗ್ರಾಹಕ ಸಂಘ, ನಡೆಸಿಕೊಂಡು ಹೋಗುವ ದಕ್ಷತೆಯನ್ನು ಜನತೆಗೆ ಕಲಿಸುವ ಶಿಕ್ಷಣದ ಆರಂಭ. ರಾಷ್ಟ್ರೀಯ ಜಾಗೃತಿಯನ್ನುಂಟುಮಾಡುವ ರಾಷ್ಟ್ರೀಯ ನಿರ್ವಾಹಣೆಯ ಮೊದಲನೇ ಆಯತ್ತ.

(2) ಚೆರಪಾ ಸಂಘವು ವ್ಯಾಪಾರ ಮಾಡುವಾಗಿ ನಿರೀಕ್ಷವಾಗಿ ಉಳಿಯಬಲ್ಲ ಸಂಘಗಳು ಉತ್ಪನ್ನ ರೀತಿಯಿಂದ ನಡೆಯುವಂತೆ ಒತ್ತಾಯಿಸುವ ಸೂತ್ರಗಳನ್ನಿಟ್ಟುಕೊಂಡು ಸಾವಿರ ಕಣ್ಣಾಗಿರುವವು.

(3) ವಿಕೇಂದ್ರೀಕರಣದಿಂದ ಚೆರಪಾ ಸಂಘವು ವರ್ಚಸ್ಸು ಕಡಿಮೆಯಾಗುವದಿಲ್ಲ. ಚೆತ್ತಿಯಿಸರು. ಕಾರ್ಯಕ್ಷೇತ್ರವು ವಿಸ್ತಾರವಾಗುವದು. ಕಾರ್ಯಕರ್ತರು ಪೆಚ್ಚಾಗುತ್ತರು. ಖರೀದಿ ಹುಟ್ಟುವಳಿ ಪೆಚ್ಚಾಗುವದು. ಖಾದಿಯ ಜೆಜ್ಜು ತಾಳಿಕೆ ಬರುವುದಾಗುವದು.

(4) ಅನ್ಯಮಾನಿಕ ಜುವೀ ಸಂಸ್ಥೆಗಳಿಗೆ ಅವಕಾಶ ಕಡಿಮೆಯಾಗುವದು.

(5) ಖಾದಿ ಜುಟ್ಟುವಳಿ ಹೆಚ್ಚಾದಾಗ ಸೂರಾಟಕ್ಕೆ ಹೆಚ್ಚು ಜನರ ಸಹಾಯ ಸಿಗುವದು ಕಡಿಮೆಯಾದ ನಕಿರ ನಿಂಗ್ ಸೂಡಿನೆಂತಾಗುವದು. ಇನ್ನು ಇದು ವಿಕೇಂದ್ರೀಕರಣವಲ್ಲದೇ ಅಲ್ಲ; ಆಮೇ ವ್ಯಕ್ತಿಗೆ ಪೆಚ್ಚು ಜೀರಿ ಅನ್ನವಸರಗೊಂಡು ಮೂರು ಬಾರಿ ಸಗಸ್ಯರೆದು, ಅ ಭಿಪ್ರಾಯ ಅರಿದು ಇರಲ್ಲಿ ಚರ್ಚಾ ಸಂಘಿಸಿ ಭಾಗವಿಲ್ಲ. ರೈತ್ತೆ ಪಹಿಸಿ ಕೆಲಸ ಮಾಡುವ ಜನರಿಗೆ ಸಂಘಗಳಲ್ಲಿ ಉತ್ಸಾಹ ದಿಂದ ಭಾಗವಹಿಸಲು ಅವಕಾಶವಿದೆ. ಇಲ್ಲಿ ವಿಕೇಂದ್ರೀಕರಣ ಎಂದು ಮೊದಲು ಹೆಜ್ಜೆಯಲ್ಲೇ ಆಗಬೇಕೆಂಬ ಇದೇನು ಕಡಿಮೆಯೇ?

ಸಮೂರೋಪ.

ಯೋಜನೆಯು ಕ್ರಾಂತಿಕಾರಕವಿದೆ. ಕ್ರಾಂತಿಯು ಕಾಲಕ್ಕೆ ಕ್ರಾಂತಿಕಾರಕ ಯೋಜನೆಯೇ ಬೇಕಾಗುತ್ತದೆ. ಯೋಜನೆಯು ಎಷ್ಟು ಕರಿಣವಾಗಿ ಕಾಣುತ್ತದೋ ಅಷ್ಟೇ ಕರಿಣ ಪರಿಸ್ಥಿತಿಯಲ್ಲಿ ನಾವು ಸಾಗಿದ್ದೇವೆಂಬುದನ್ನು ಮರೆಯಬಾರದು. ಆದ್ದರಿಂದ ಇದು ಸಕಾಲ. ದೇಶದಲ್ಲಿ ಹರಡಿರುವ ಸಾವಿರಾರು ಖಾದೀ ಕಾರ್ಯಕರ್ತರ ಕ್ರಮಬದ್ಧಾಯುಕ್ತ, ತ್ಯಾಗಪೂರ್ಣ, ಸಾಹಸಪೂರ್ಣ ಪರಿಶ್ರಮದಿಂದ ಇಂದು ಖಾದಿಯು ರಾಷ್ಟ್ರದ ಸ್ವರಾಜ್ಯ ಸಮಸಪ್ತವಾಗಿದೆ. ರಾಷ್ಟ್ರದ ಭವಿತವ್ಯತೆಯಲ್ಲಿ ಭರವಸೆಯಿಟ್ಟು, ಧೈರ್ಯದಿಸ್ಥಲಂಬಿಸಿ, ದೃಢಚಿತ್ತದಿಂದಲೂ ಗಾಂಧೀಯರ್ಯದಿಂದಲೂ ಮುಂದೆ ಸಾಗಬೇಕೆಂದು ಖಾದೀ ಕಾರ್ಯಕರ್ತರಿಗೆ ಚೆರಪಾ ಸಂಘವು ವಿನಂತಿ ಮಾಡಿಕೊಳ್ಳುತ್ತದೆ. 'ಕ. ವಿ'

ಮಹಾತ್ಮರ ವೇಷಸ್ಥಿತಿ ಬಗ್ಗೆ ಕೆಳವಳ.

ಮಹಾತ್ಮಗಾಂಧಿಯವರಿಗೆ ಈಚೆಗೆ ಜ್ವರಬರುವಿದ್ದರೂ ಕೆಲವು ದಿನಗಳ ಹಿಂದೆ ಅವರಿಗೆ ಬಂದ ಮಲೇರಿಯ ಜ್ವರದ ಪರಿಣಾಮವಾಗಿ ಅವರು ಅಶಕ್ತರಾಗಿದ್ದಾರೆ. ಅವರ ದೇಹಸ್ಥಿತಿಯ ಬಗ್ಗೆ ಸ್ವಲ್ಪ ಮಟ್ಟಿಗೆ ಕಳವಳವುಂಟಾಗಿದೆ. ಡಾಕ್ಟರ್ ಬಿ. ಸಿ ರಾಯ್‌ರವರು ತಾ. 1 ರಲ್ಲಿ ಅವರನ್ನು ಪರೀಕ್ಷಿಸಿದರು. ಪೆಥಿಲೊಜಿಸ್ಟರಾದ ಡಾ. ಕಟ್ಜಾರವರು ತಾ. 2 ರಲ್ಲಿ ಅವರನ್ನು ಪರೀಕ್ಷಿಸಿದರು.

—oo—

NOTICE.

INCOME-TAX.

Return of total income and of total world income of the previous year for assessment ine the year commencing on the 1st April 1944.

In pursuance of Sub-section (1) of Section 22 of the Indian Income-Tax Act 1922 (XI of 1922), notice is hereby given to EVERY PERSON whose total income during the previous year exceeded the maximum amount not chargeable to Income tax to furnish with in sixty days from the date of this Notice a return in the prescribed from and verified in the prescribed manner setting forth (along with such other particulars as are required by the said from) his total income and total world income during that year.

A copy of the prescribed form will be supplied free of charge to any person who, for the purpose of complying with this notice applies at my office.

Penalty:-any person who fails without reasonable cause to furnish the return required by this notice, or fails without reasonable cause to furnish it within the time allowed or in the manner required is liable under Section 21 of the said Act to a penalty not exceeding one and a half times any tax payable by him.

Note- The maximam amount which is not chargeable to Income-tax, in the cas of individual Hindu Undivided Family, firm or Association or persons is Rs. 2000.

K. P. Kuttappa,
Income-tax Officer,
Mercara,
27th April, 1944.

—oo—

ನೂರಾಟಕ್ಕಿದೆ.

ವೀರಾಜಪೇಟೆ ದೊಡ್ಡ ಬೀದಿಯಲ್ಲಿರುವ ನನ್ನ ಬಾಬ್ತು ಸುಮಾರು ಅಂದಾಜು ರೂ. 70 ಸಾವಿರ ಖರ್ಚು ಮಾಡಿ ಕಟ್ಟಿಸಿದ, ವಾಸಕ್ಕೆ ಅನುಕೂಲವಾಗಿರುವ ಮಹಡಿ ಮನೆ, (ಇವಕ್ಕೆ ನಿನೆಂಟು ಕೋಣೆ ಪೀರಿನ ಟೆಂಕು, ಅಡಿಗೆಗೆ ಟಾರ್ಚಿ ಯ ಶೆಡ್ಕೈಕೆ ಮನೆ, ಸುತ್ತಲೂ ಕಾಂಪೌಂಡಿಗೆ ಗೇಟ್ ಸಹ ಇವೆ) ಬಾಡಿಗೆ ಸಿಗುವಂಥಾ ದೊಡ್ಡ ಬೀದಿಯಲ್ಲಿ ಅಂಗಡಿ ವೈನು ಮಳಿಗೆಗಳಿಗೂ, ಮನೆ ಕಟ್ಟಿಲು ಅನುಕೂಲವಿರುವ ಖಾಲಿ ದಳವೂ ಸಹ ಮೂರಾಟಕ್ಕೆ ಸಿದ್ಧವಾಗಿದೆ. ಖರೀದಿದಾರರು ಖುದ್ದು ಬಂದು ಆಜೂಪಾಯಿಯೊಗಲೀ, ಯಾ ಪತ್ರ ಮೂಲಕವಾಗಲೀ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಜೆ. ಅಬ್ದುರ್ ರಹೀಂ ಸಾಲೇಜಾ
ದೊಡ್ಡಟ್ಟೆ ಚಾರ್ಕ್,
4-1 ವೀರಾಜಪೇಟೆ

ಮೂರಾಟಕ್ಕಿದೆ.

ಅಮ್ಮತ್ತಿನಾಡಿನ ನೆಲ್ಯಹುದಿಕೇರಿ ಗ್ರಾಮದಲ್ಲಿ ಮಡಿಕೇರಿ-ವೀರಾಜಪೇಟೆ ದೊಡ್ಡ ರಸ್ತೆಯಿಂದ ನಾಲ್ಕು ಫರ್ಲಾಂಗ್ ದೂರದಲ್ಲಿರುವ ಕಿತ್ತಳೆ ಮತ್ತು ಕಾಫಿ ವ್ಯವಸಾಯಕ್ಕೆ ಅತ್ಯುತ್ತಮವಾದ 40 ಏಕ್ರೆ ಈ ವರೆಗೆ ಯಾವ ವ್ಯವಸಾಯ ಮಾಡದ ಹೊಸ ಮಣ್ಣಿನ ಕಾಡು ಮೂರಾಟಕ್ಕಿದೆ. ಹೆಚ್ಚಿನ ವಿವರಗಳಿಗೆ ಈ ವಿಳಾಸಕ್ಕೆ ಬರೆಯಿರಿ.

R
C/o 'ಕೊಡಗು' ಮಡಿಕೇರಿ.

ನಂಬಿಕೆಯನ್ನು ಹುಟ್ಟಿಸತಕ್ಕ ಅಂಕೆ-ಸಂಖ್ಯೆಗಳು.

ಇಪ್ಪತ್ತಮೂರನೆಯ ತ್ರೈಮಾಸಿಕ ವರ್ಷಿಕ ಗಣನೆಗಳು ಪರಿಶೀಲನೆಯಿಂದ ಪ್ರಾಮಾಣಿಕತೆಯಿಂದ ಕೂಡಿವೆ ಎಂಬುದಾಗಿ ಪ್ರಾಮಾಣಿಕ ಪಡಿಸಿದ ಪ್ರಕಾರ ಪ್ರಕಟಣೆ

ಕಂಪೆನಿಯ ಜಮಾ-ಖರ್ಚಿಗಳ ಮೇಲೆ ತೀಕ್ಷ್ಣ ಪರೀಕ್ಷೆ ಮಾಡಿದ ನಂತರ ಬಿಡುಗಡೆಯನ್ನು ಗೆದ್ದಿ

ಮೂರು ಸರ್ಕಾರಿ ಬಾಂಡ್ ಲಾಭ ರೂ. 1,50,88,092. ವಿಮೋಪಾರಾಂ ಪ್ಲೇಮನಿಧಿಗೆ ರೂ. 54 ಲಕ್ಷ ಸೇರಿಸಿದೆ.

ಹಂಚಿಲ್ಪಟ್ಟ ಬೋನಸ್ಸುಗಳು. } ಹೋಲ್ ಲೈಫ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 12½ ರೂಪಾಯಿ. ಎಂಡೋಮೆಂಟ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 10 ರೂಪಾಯಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ಭಾರತದಲ್ಲಿ-1874.] [ಮುಖ್ಯ ಏಜೆಂರಿ-ಬೊಂಬಾಯಿ.

5 ಬ್ರಾಂಚ್ ಆಫೀಸು-"ಓರಿಯಂಟಲ್ ಬಿಲ್ಡಿಂಗ್ಸ್" ಸೌತ್ ಪೇರೇಡ್, ಬೆಂಗಳೂರು, ಇನ್ಸ್‌ಪೆಕ್ಟರ್ ಆಫೀಸು-ಕೆ. ನಡಾಪಿವರಾಜ್ ರೋಡ್, ಮಂಗಳೂರು.

THE CANARA BANKING CORPORATION, Ltd.,

(Incorporated in British India with Limited liability)

ESTD: 1906. Head Office:-UDIPI.

(BRANCHES & AGENCIES IN ALL PRINCIPAL CITIES OF INDIA.)

ANNOUNCEMENT.

A branch of the Bank will be opened at Tobacco Street, CALICUT on 26-5-1944.

52-48

ಧಾತು ವೃದ್ಧಿ ರಸಾಯನ ಎಂದರೆ ಝಂಡು ಕಂಪನಿಯ (ZANDU)

"ಠ್ಯಾಕ್ಟೋ - ಫಾಸ್ಫೋ - ಮಾಲ್ಟ್" ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ರಸಾಯನ ಈ ಕಾಯಿಲೆಯವರಿಗೆ ಟಾನಿಕ್. ಆರೋಗ್ಯದಿಂದಿರುವವರಿಗೆ ಟಾನಿಕ್. ಧಾತುಕ್ಷೀಣತೆಯುಳ್ಳವರಿಗೆ ಟಾನಿಕ್. ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಆಕಸ್ಮಿಕರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿ ಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಚೇತನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತಕಣಗಳನ್ನು ಹೆಚ್ಚಿಸುವ ಆಮ್ಲಾಲ್ ಔಷಧಗಳಿವೆ.

ಇದರಲ್ಲಿ ಇಲೆಕ್ಟಿರ್ ಫಾಸ್ಫೋಮಾಲ್ಟ್, ಹೆನೋಗ್ಲೋಬಿನ್, ನೋಂದ್ಲಿಸರೊ ಫಾಸ್ಫೇಟ್ ಪೆಪ್ಟಿನ್, ಸಾಲ್, ಮಾಲ್ಟ್ ಎಕ್ಸ್‌ಟ್ರಾಕ್ಟ್ ದ್ರಾಕ್ಷಿಸಾರ – ನೊದಲಾದ ಪ್ರಸಿದ್ಧ ಔಷಧಿಗಳಿರುವವು.

ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿ ನೆ.

35 ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಗೋಖಲೆ ರೋಡ್ ಬಾಂಬೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿ., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.] [1921ರಲ್ಲಿ ಸ್ಥಾಪಿತವಾದದ್ದು.

ಶೇರ್ ಬಂಡವಾಳ	1,00,000 0 0	ಪರಾಲಾದ ಕ್ಷೇಮನಿಧಿ	2,07,052 1 7
ವಸೂಲಾಗಿ ಶೇರ್ ನೊಬಲಗು	89,319 0 0	ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಸ್	1,27,750 0 4
ಜಮಾಬಂದ ರೇವಣಾತಿ	1,97,957 0 10	ಫಿಕ್ಸ್ಡ್ ಡಿಪಾಜಿಟ್ಸು	3,374 14 4

ಈ ಬ್ಯಾಂಕಿನಿಂದ ಈ ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಸು ದಾರರಿಗೆ ಅವರ ಡಿಪಾಜಿಟ್ಸು ಆಧಾರನ ಮೇಲೆ 3% ಕೊಡಲಾಗುತ್ತೆ. ನಿರಮು ಕ್ಷೇವಣಾತಿಗಳಿಗೆ 1ವರ್ಷದಿಂದ 3 ವರ್ಷಗಳ ವರೆಗೆ ರೇಕಡ 2-3 ವರ್ಷಗಳಿಂದ 5 ವರ್ಷಗಳವರೆಗೆ 2½. 5 ವರ್ಷಗಳಿಂದ10 ವರ್ಷಗಳ ವರೆಗೆ 3½. 10 ನುತ್ತ ಅತಿಕ್ಕಿಂತ ಮೇಲ್ಪಟ್ಟವರೆಗೆ 4½. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಸುಗಳಿಗೆ (on dailybalances) ರೇ. 0-8-0. ಶ್ರಿಸ್ಟ್ ಡಿಪಾಜಿಟ್ಸು ಹೊಂದಿಕೊಳ್ಳುವುದೆನ್ನು ಶಕ್ತಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಜಿಸ್ಟ್ರಾರರು ಲೆಕ್ಕಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟ್:– ಶ್ರೀ. ಐನಂಡ ಪಿ. ಕಾರ್ಯಪ್ಪನವರು.

ಪ್ರಿಜಿಡರ್:— & ಸೆಕ್ರೆಟರಿ:— ಶ್ರೀ ಕೊಂಗೆಟ್ಟಿರ ಪಿ. ಅಪ್ಪಯ್ಯನವರು

ತಾ. 1-3-1944. (52-48)

BHUVANENDRA PRODUCTS LIMITED,

KATAPADI, (S. Kanara). DEPOT— Maharatha Galli, Hubli.

'ಭುವನೇಂದ್ರ' ಕಸ್ತೂರಿ ಮಿಶ್ರಿತ ದೆಶಿಮೂಲಿಲಿಷ್ಟ.

ಗರ್ಭಾಶಯ ದೋಷದಿಂದ ಗರ್ಭಧಾರಣೆಯಾಗದಿರುವುದು, ಶೀರವು ಅಶಕ್ತವಾಗಿರೋಣ, ಗರ್ಭಾಶಯದ ಅಶಕ್ತತೆಯಿಂದ ಗರ್ಭಪಾತವಾಗೋಣ, ಸೂತಿಕರೋಗ, ಪುತ್ರೋತ್ಪತ್ತಿ ವಿಷಯದಲ್ಲಿ ಇತ್ಯಾದಿಗಳು ಪರಮಾಲಾಲಾಧ್ಯದ ಸೇವನೆಯಿಂದ ಗುಣಹೊಂದುತ್ತವೆ. ಗರ್ಭಧಾರಣೆಗೆ ಸಹಾಯ ಮಾಡುವುದು. ವೀರ್ಯಾವೃದ್ಧಿಮಾಡಿ ದೇಹಕ್ಕೆ ಹೊಸ ಚೈತನ್ಯ ಕೊಡುವುದು.

ನಮ್ಮ ಕೊಡಗು ವಿಜೆಂಟರು:– (1) ಮಂಗಳೂರು ಸೋರ್ಸ್, ಜಪ್ಪರಲ್ ಮುರ್ಕೆಂಟ್ಸ್, ಮಡಿಕೇರಿ (2) ಮಂಗಳೂರು ಎಮ್ಮೆನಿಶರ್ ಸ್ಟೋರ್ಸ್, ಮಡಿಕೇರಿ. (3) ಡಾ. ಬಿ. ಕೆ. ನಂಜುಂಡೇಶ್ವರ, ಮಡಿಕೇರಿ. (4) ಡಾ. ಪಿ. ಎ. ನಾಣಾಮ್ಮಯ್ಯ, ಪೊನ್ನಂಪೇಟೆ. (5) ಡಾ. ಎಂ. ಬಿ. ಕಾರ್ಯಪ್ಪ, ಪೊನ್ನಂಪೇಟೆ. (6) ಎಸ್. ಶ್ರೀನಿವಾಸಯ್ಯ, ಭಾಗಮಂಡ್ಲ. (7) ಕೆ. ಎಸ್. ರಾಜಶೇಖರಪ್ಪ & ಸನ್ಸ್, ಸೋಮವಾರಪೇಟೆ. (8) ಡಾ. ಎ. ಸಿ. ಸುಬ್ಬರಾಯಯ್ಯ, ವೀರಾಜಪೇಟೆ (9) ಡಾ. ಐ. ಆರ್. ಅನ್ನಣ್ಣ, L. I. M., ವೀರಾಜಪೇಟೆ. (10) ಡಾ. ಕೆ. ಜಿ. ಕರುಂಬಯ್ಯ, ಮಡಿಕೇರಿ, (11) ಕುರ್ಗ್ ಟೀಚರ್ ಕೋ-ಆಪರೇಟಿವ್ ಸೊಸೈಟಿ, ವೀರಾಜಪೇಟೆ. (12) ಶ್ರೀ ಎ. ಎಸ್. ನೂಚಿಯ್ಯ, ಕ್ಲಾರ್ಕ್ ಮುರ್ಕೆಂಟ್ಸ್, ಗುಂಡಿಕೆರೆ (13) ಡಾ. ಯಸ್. ವೆಂಕಟರಂಗಾಚಾರ್ಯ, ಯಸ್. ಎ. ಯಂ. ಯಸ್. ಸೋಮವಾರಪೇಟೆ.

ಭುವನೇಂದ್ರ ಪ್ರೊಡಕ್ಟ್ಸ್, ಲಿಮಿಟೆಡ್, ಕಟಪಾಡಿ, ದ. ಕನ್ನಡ.

52-5 ಡಿಪೋ:– ಮಹಾರ ಗಲ್ಲಿ, ಹುಬ್ಬಳ್ಳಿ.

EMPIRE OF INDIA

LIFE ASSURANCE COMPANY LIMITED,

22) ESTABLISHED 1897

A FEW SALIENT FEATURES OF THE FORTY-SIXTH ANNUAL REPORT.

Total Income Exceeds	.... Rs.	87,97,000
Assurances in Force Exceed	.... „	15,06,89,000
Assets Exceed	.... „	5,98,84,000

Claims paid since the Company was established Exceed Rs. 7,92,00,000,

Head Office:-	APPLICATIONS	Branch Office:-
Empire of India Life Building, BOMBAY.	FOR AGENCIES INVITED.	District Board Building, Kempegowda Road, BANGALORE.

Edited, Printed and Published by P. I. Ballappa at 'Kodagu' Press, Mercara, for 'Kodagu' Ltd.

ಕೊಡಗು ಕಸ್ತೂರ್‌ಬಾ ನೇಶನಲ್ ಮೆಮೋರಿಯಲ್ ನಿಧಿ.

ಹತ್ತು ಸಾವಿರ ರೂಪಾಯಿಗಳೆನ್ನಾದರೂ ಸಂಗ್ರಹಿಸಬೇಕು.

ತಾ. 29-4-44ರಲ್ಲಿ ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕ್ ಆಫೀಸಿನಲ್ಲಿ ಸಾರ್ವಜನಿಕ ಕೆಲಸಗಾರರ ಸಭೆಯೊಂದು ಶ್ರೀ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಕೊಡಗಿನಲ್ಲಿ ಕಸ್ತೂರಿಬಾಯಿ ನೇಶನಲ್ ಮೆಮೋರಿಯಲ್ ಫಂಡಿಗೆ ಹಣ ಸಂಗ್ರಹಿಸಬೇಕೆಂಬದನ್ನು ಒಪ್ಪಿ ಈ ಕೆಳಗಿನ ಮಹನೀಯರಿಂದ ಕೂಡಿದ ಒಂದು ವರ್ಕಿಂಗ್ ಕಮಿತಿಯನ್ನು ಆರಿಸಲಾಯಿತು– ಶ್ರೀ ಗಳಾದ ಎಸ್. ಎಂ. ಪುಷ್ಪಣ್ಣ, ಡಿ. ಸಿದ್ದಣ್ಣ, ಎಚ್. ಎಂ. ಮುತ್ತಣ್ಣ, ಸಿಂಗಾರು ಮೂದಪ್ಪ, ಎನ್. ಕೆ. ಗಣಪಯ್ಯ, ಎಸ್. ಎನ್. ರಾಮಶೆಟ್ಟಿ, ಜಿ. ಎಂ. ಮಂಜುನಾಥಯ್ಯ, ಡಾ. ಬಿ. ಕೆ. ನಂಜುಂಡೇಶ್ವರ, ಪಿ. ಜಿ ಐಯ್ಯಪ್ಪ, ಸಿ. ಎಂ. ಪೂಣಚ್ಚ, ಸಿ. ಎಸ್. ನಾರಾಯಣ, ಕೆ ವಿ. ಗಿರಿ, ಪಿ. ಐ. ಬೆಳ್ಯಪ್ಪ, ಕೆ. ಕೆ. ತಿಮ್ಮಯ್ಯ, ಕೆ. ಎ. ಅಪ್ಪಚ್ಚ, ಪಿ ಎಂ ಪೊನ್ನಪ್ಪ, ಕೆ. ಎಂ. ಕುಶಾಲಪ್ಪ, ವಿ. ಪಿ. ಕಾರ್ಯಪ್ಪ, ಕೆ. ಪದ್ಮನಾಭ, ಎಂ. ಎಸ್. ಸೋಮಯ್ಯ, ಪಿ. ಸಿ. ಕರುಂಬಯ್ಯ, ಕೋದಂಡ ದೇವಯ್ಯ, ಮಡೆಯಂಡ ದೇವಯ್ಯ, ಕೆ. ಸಿ. ಕರುಂಬಯ್ಯ, ಪಿ. ಜಿ. ಮುದ್ದಮ್ಮಯ್ಯ, ಕೆ. ಕೆ. ಗಣಪತಿ, ಪುಲಿಯಂಡ ಸುಬ್ಬಯ್ಯ, ಎ. ಜಿ. ಐಯ್ಯಪ್ಪ, ಬಿ. ಪಿ. ಐಯ್ಯಪ್ಪ, ಕೆ. ಎಂ. ಸೂಸಮ್ಮಪ್ಪ, ಡಾ. ವಾಂಹಂಡ ಸೋಮಪ್ಪ, ಸಿ ಪಿ ನೂಚಿಯ್ಯ, ಎ. ಎಸ್. ಪೊನ್ನಪ್ಪ, ಎ ಎಸ್. ಚಿಣ್ಣಪ್ಪ, ಎಸ್ ಎಸ್. ನಾರಾಯಣಮೂರ್ತಿ, ಕೆ. ಪಿ. ಕರುಂಬಯ್ಯ, ಸಿ. ಎಸ್. ವೆಂಕಪ್ಪಯ್ಯ, ಸಿ. ಎಸ್. ನಂಜಪ್ಪ, ಬಿ. ಎಂ. ಕಾರ್ಯಪ್ಪ, ಬಿ. ಎ. ಸುಬ್ಬಯ್ಯ, ಬಿ. ಪಿ ಪೂಚಯ್ಯ, ಕೆ. ಪಿ ಅಪ್ಪಯ್ಯ, ಪಿ. ಎಸ್. ರಾಮಸ್ವಾ, ಎ. ಎಸ್. ನೂಚಿಮ್ಮ, ಹೆಬ್ಬಾಲೆ ಹೊನ್ನಪ್ಪ, ತಿರಂಗಾಲ ಕಾಳೇಗೌಡ, ಹಬಿಬುಲ್ಲಾ ಖಾನ್, ಸಿ ಆರ್. ಮೂರ್ತಿ, ಎಚ್. ಬಿ. ಅಣ್ಣಯ್ಯ, ಗಿರಗೂರ ತಿಮ್ಮಯ್ಯ, ಕೆ. ಎಸ್. ಗಣಪತಿ, ಇಟ್ಟರ ಚಂಗಪ್ಪ, ಎಂ. ಬಿ ಪುಟ್ಟಣ್ಣ, ಕೆ. ಎ. ಚಿಣ್ಣಪ್ಪ, ಬಿ. ಎನ್. ಕೃಷ್ಣಪ್ಪ, ಪಿ ಎ ನಂಜಪ್ಪ, ಶ್ರೀಮತಿಯರಾದ ಸಿ. ಎಸ್ ಗೌರಮ್ಮ, ಪಿ. ಸೀತಾ ಬೆಳ್ಯಪ್ಪ ಮತ್ತು ಶ್ರೀ ಬಿ. ಡಿ. ಗಣಪತಿ ಇವರುಗಳು.

ನಂತರ ಈ ಪಕ್ಷಾತೀತ ಸಮಿತಿಯಿಂದ ಈ ಕೆಳಗಿನವರನ್ನೊಳಗೊಂಡ ಒಂದು ಕಾರ್ಯಕಾರಿ ಮಂಡಳಿಯನ್ನು ಆರಿಸಲಾಯಿತು ಶ್ರೀ ಗಳಾದ ಡಿ. ಸಿದ್ದಣ್ಣ (ಸೈಸಿಡೆಂಟ್), ಕೆ. ಪಿ. ಅಪ್ಪಯ್ಯ (ಪಬ್ಲಾಸ್ಟಿ) ಎಸ್. ಎಂ. ಪುಷ್ಪಣ್ಣ, ಎಸ್. ಎನ್. ರಾಮಶೆಟ್ಟಿ, ಜಿ. ಎಂ. ಮಂಜುನಾಥಯ್ಯ, ಪಿ. ಐ ಬೆಳ್ಯಪ್ಪ, ಸಿ ಎಂ. ಪೂಣಚ್ಚ, ಡಾ. ವೆಂಜುಂಡೇಶ್ವರ, ಕೆ. ಎಂ. ದೇವಯ್ಯ, ಕೆ. ಎಂ. ಕುಶಾಲಪ್ಪ, ಹೆಬಿಬುಲ್ಲಾ ಖಾನ್, ಕೆ. ಸಿ. ಕರುಂಬಯ್ಯ, ಕೆ. ಕೆ. ಗಣಪತಿ, ಬಿ. ಪಿ. ಪೂಚಯ್ಯ, ಪಿ. ಎಂ. ಪೊನ್ನಪ್ಪ ಮತ್ತು ಬಿ. ಡಿ. ಗಣಪತಿ (ಕಾರ್ಯದರ್ಶಿ) ಇವರುಗಳು.

ಕೊಡಗಿನಲ್ಲಿ ಈ ನಿಧಿಗೆ ರೂಪಾಯಿ 10,000ಕ್ಕೆ ಕಡಿಮೆ ಇಲ್ಲದೆ ಹಣ ಸಂಗ್ರಹಿಸಬೇಕೆಂದೂ, ಈ ಬಗೆಗೆ ರಶೀತಿ ಪುಸ್ತಕಗಳನ್ನು ಬೇಗ ತರಿಸಿ ಒಡನೆ ಕಾರ್ಯ ಸ್ವಾರಂಭಿಸಬೇಕೆಂದೂ ತೀರ್ಮಾನಿಸಲಾಯಿತು

ಮೂರು ದಿನ ಉರಿದ ಬೊಂಬಾಯಿ!

ಬರೆದವರು: —— ಪ್ರತ್ಯಕ್ಷ ಕಂಡವರು.

ಏಪ್ರಿಲ್ ತಾರೀಕು 14 ಶುಕ್ರವಾರ. ಬೊಂಬಾಯಿಯ ಇತಿಹಾಸದಲ್ಲಿ ಇನ್ನಂ ಥಾ ದುರ್ದಿನ ಉದಯಿಸಲಾರದು ಬೊಂಬಾಯಿ ಶಹರು. ಮಧ್ಯಾಹ್ನ ಮೂರು ಗಂಟೆ ಸಮಯ. ಆಫೀಸು ವಾತಾವರಣ ಶಾಂತಮಯವಾಗಿತ್ತು. ಆಫೀಸುಗಳಲ್ಲಿ ಟೈಪ್‌ರೈಟರುಗಳ ಪಟ ಪಟ ಶಬ್ದಗಳು ಕೇಳ್ ಸುತ್ತಿತ್ತು. ನಿನ್ನೇನೂ ಗೃಹದಲ್ಲಿ ಜನರು ವಿಲಾಸ ಮಗ್ನರಾಗಿದ್ದರು. ಮೊರ್ತಟು ಗಳಲ್ಲಿ ನಿರಾತಂಕವಾಗಿ ವ್ಯಾಪಾರವು ನಡೆಯುತ್ತಿತ್ತು. ಪತ್ರಿಕಾ ಕಚೇರಿಗಳಲ್ಲಿ ಸಂಪಾದಕರುಗಳು ತಲೆ ತಗ್ಗಿಸಿ ಕೆಲಸ ಮಾಡುತ್ತಿದ್ದರು. ಕೆಲವರು ವಿರಾಮವಾಗಿ ಕುಳಿತು ಧೂಮ್ರಪಾನ ಮಾಡುತ್ತಿದ್ದರು.

ಗಡಿಯಾರದಲ್ಲಿ ನಾಲ್ಕು ಗಂಟೆ ಬಡಿಯಿತು. ಪುರುಷ್ಕಣದಲ್ಲಿ ದೊಡ್ಡದೊಂದು ಶಬ್ದ ಕೇಳಿಸಿತು! ಎಂಥಾ ಗುಡುಗು ಶಬ್ದವಪ್ಪಾ ಅದು? ಆಕಾಶವು ಜರಿದು ಭೂಮಿಯ ಮೇಲೆ ಬಿತ್ತೇ? ಹೊಗೆಯು ನೋಡಿಗಳು ಮೇಲಲ್ಕ್ಕೇಳುತ್ತುದು ಕಂಡು ಬಂತು. ನಿನ್ನೇನೂ ನೊಡಲು ಕುಳಿತವರು ಹೊರಗೆ ಓಡಿ ಬಂದರು. ಆಫೀಸುಗಳಲ್ಲಿ ಟೈಪ್‌ರೈಟರುಗಳ ಶಬ್ದವು ಒಮ್ಮೆಲೇ ಅಡಗಿತು. ಪ್ರತಿಯೊಬ್ಬರೂ ಓಟಿಕ್ಕೆ ತೊಡಗಿದ್ದರು. ಹೆಂಗಸರು, ಗಂಡಸರು, ಮಕ್ಕಳು ಪ್ರತಿಯೊಬ್ಬರೂ ಆಶ್ರಯಕ್ಕಾಗಿ ಧಾವಿಸುತ್ತಿದ್ದರು. ಎಲ್ಲಿ ನೋಡಿದರಲ್ಲಿ ಬೆರಾಟ ಮತ್ತು ಕೂಗಾಟಗಳು ಕೇಳಿಬರುತ್ತಿದ್ದವು ಅಂಗಡಿಗಳ ಗಾಜಿನ ಬಾಗಿಲುಗಳು ಹುಡಿಯಾಗಿ ಕೆಳಗೆ ಬಿದ್ದವು. ಪ್ರತಿಯೊಬ್ಬರ ಜಾಯಲ್ಲಿ ಪೆಪರ ಹೆಕ್ಕರು. ಹಲವು ಕಾಲದಿಂದ ಬಂ.. ಆ ಹೆಸರಿನ ಅಂಗಡಿಯಲ್ಲಾ ಧಗಧಗಿಸುತ್ತಿತ್ತು. ನಾನಾ ಪ್ರಾಣಿಗಳೂ ಆ ಬೆಂಕಿಯಲ್ಲಿ ಬೆಂದು ಗಳಿಗೆಯಲ್ಲಿ ಆಸ್ತಿಕರಾದರು.

ಮತ್ತೊಮ್ಮೆ ಭೂಮಿ ಕಂಪಿಸಿತು ಮತ್ತೊಮ್ಮೆ ಉರಿಯ ನಾಲಗೆಗಳು ಅಗಲದ ಕಡೆಗೆ ವಿಜೃಂಭಿಸಿ ಉಂಡು ಬಾಯಿ ಮತ್ತೊಮ್ಮೆ ಸ್ಫೋಟನೆ! ನೊಡಲಿಗಿಂತ ಭಯಂಕರ! ಮತ್ತೊಮ್ಮೆ ಗುಡುಗಿನ ಶಬ್ದ! ಅಯ್ಯೋ, ಅವನ್ನು ನೆನಕುವಾಗಲೇ ಮೈ ಜುಮ್ಮೆನ್ನುತ್ತಿದೆ. ನರಗಳು ಪಟ ಪಟ ಎನ್ನುತ್ತಿವೆ. ಆ ಶಬ್ದವು ಕೇಳಿಸಿ ಎರಡು ನಿಮಿಷಗಳು ಕಳೆಯಲಿಲ್ಲ–ಪೂರ್ವ ದಿಕ್ಕಿನಲ್ಲಿ ಬೆಂಕಿಯ ಚೆಂಡುಗಳು ಮೇಲಕ್ಕೆ ಹಾರುವ ದೃಶ್ಯ ಕಂಗೊಳಿಸಿತು.

ಕೆಲವೇ ನಿಮಿಷಗಳೊಳಗೆ ನಗರದ ಅಪ್ಪಕ್ಕಿಗಳೆಲ್ಲಾ ತುಂಬಿದುವು ಸಾವಿರಾರು ಜನರು ದೂರದಲ್ಲಿ ನಿಂತು, ಕಣ್ಣು ಮಿನೆಗಳು ಅಗ್ನಿ ದೇವನಿಗೆ ಆಹುತಿಯಾಗುವ ದೃಶ್ಯವನ್ನು ಆಶ್ಚರ್ಯಾನ್ವಿತ ನಯನಗಳಿಂದ ದಿಟ್ಟಿಸಿ ನೋಡುತ್ತಿದ್ದರು. ಮುನ್ನೂರಕ್ಕೆ ಮೇಲ್ಪಟ್ಟು ಜನರು ಅಗ್ನಿದೇವನಿಗಾನ ಹುತಿಯಾದರು. ಒಂದು ಸಾವಿರಕ್ಕೆ ಮೇಲ್ಪಟ್ಟು ಮಂದಿ ಗಾಯ ಹೊಂದಿಸುರಜೋ ಸ್ಥಿತಿ ಆಸ್ಪತ್ರೆಯಲ್ಲಿ ಅಪ್ಪತ್ರೆಯ ಮಂಚವನ್ನು ಸೇರಿದರು.

ಆ ದಿನ ಮೊಜಲನೇ (ಶುಕ್ರವಾರ ಸಂಜೆ) ಸ್ಫೋಟನ ನಡೆಯುವಾಗ ನಾನು ನಮ್ಮ ಪತ್ರಿಕಾ ಕಚೇರಿಯ ಕೆಳ ಅಂತಸ್ತಿನಲ್ಲಿ ನಿಂತಿದ್ದೆ. ಶಬ್ದ ಕೇಳಿದೊಡನೆ ಎಲ್ಲಿಗೆ ಓಡುವುದೆಂಬುದು ನನಗೆ ತೋಚಲಿಲ್ಲ ಕಕ್ಕಾಬಿಕ್ಕಿಯಾಯಿ. ಆಂಜ ಭಾಗ್ಯವಶಾತ್ ಒಂದು ಟಕ್ಸಿಯು ನಾನಿದ್ದಲ್ಲಿಗೆ ಬಂತು. ಕೂಡಲೇ ಟೀಕ್ಸಿ ಹತ್ತಿ ಕುಳಿತು ಟೀಕ್ಸಿವಾಲನಿಗೆ ಬಂಡಿ ಓಡಿಸುವಂತೆ ಸೂಚನೆ ಕೊಟ್ಟೆ. ಆವನಿಗೂ ಯಾವುದಾದರೂ ದೂರವು ಸುರಕ್ಷಿತ ಪ್ರದೇಶಕ್ಕೆ ಹೋಗಿ ಪುಟ್ಟದರಾಗಬಹುದಿತ್ತೆಂಬು ಹೊಳೆದಿತ್ತು. ವೇಗದಿಂದ ಟೀಕ್ಸಿಯನ್ನು ಓಡಿಸಿದ. ನಮ್ಮ ಟೀಕ್ಸಿಯು ಎರಡು ಫರ್ಲಾಂಗ್ ಮುಂದರಿಯುವಷ್ಟರೊಳಗೆ ಕಿರಿಯಾ ಭೂಮಿ ನಡುಗಲಾರಂಭಿಸಿತು ನಾನ್ನು

ಮತ್ತು ಟೀಕ್ಸಿವಾಲ ಇಬ್ಬರೂ ಗಾಡಿಯಿಂದ ಕೆಳಗೆ ಧುಮುಕಿದೆವು. ಭಯಂಕರ ಸ್ಫೋಟವಾಯಿತು. ಉರಿಯು ನಾಲಿಗೆಗಳು ರುದ್ರ ರೂಪ ತಾಳಿದುವು. ಗಾಜಿನ ಹೆರಳುಗಳು, ಕಬ್ಬಿಣದ ಸಲಾಕೆಗಳು ಸಿಡಿಯಲಿಕ್ಕಾರಂಭವಾದವು. ಧೂಮ್ರ ಮೇಘಗಳಿಂದ ಆಕಾಶವು ತುಂಬಿತು. ಹೊಗೆಯ ಎಡೆಯಲ್ಲಿ ಬೆಂಕಿಯ ಜ್ವಾಲೆಗಳು ಕೆಲ ಹೊತ್ತು ಮರೆಯಾದವು.

ಬೆಂಕಿ ಆರಿಸುವ ದಳವು ಧಾವಿಸಿ ಬಂತು. ಬೆಂಕಿ ಆರಿಸುವ ಯತ್ನಗಳು ತೀವ್ರ ಗತಿಯಿಂದ ನಡೆದುವು. ಆವರೆ ರಾಕ್ಷಸಾಕಾರದಲ್ಲಿ ಹರಿದಿದ ಆ ಬೆಂಕಿಯನ್ನು ಕ್ಷಣ ನೆ ನೋಂದಿಸುವದು ಸಾಧ್ಯವೇ?

ಬೊಂಬಾಯಿಯ ಹಡಗು ನಿರ್ಮಾಣ ದಲ್ಲಿ (Dock) ನಿಂತ ಒಂದು ಹಡಗಕ್ಕೆ ಆಕಸ್ಮಾತ್ತು ಬೆಂಕಿ ತಾಗಿದುದೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಯಿತು. ಮೂರು ದಿನಗಳೊಳಗೆ ಈ ಭಯಂಕರ ಬೆಂಕಿಯನ್ನು ಸಂಪೂರ್ಣ ಹತೋಟಿಗೆ ತರಲು ಸಾಧ್ಯವಾದುದೇ ಈಳುವಿನೆಡೆಯಲ್ಲಿ ಒಂದು ಕೆರು ನಗು! ಪ್ರತ್ಯಕ್ಷಕ್ಕೆ ಬೊಂಬಾಯಿಯ ಅಪ್ಪಶ್ಯಗಳೊಂದೂ ಖಾಲಿ ಇಲ್ಲ. ನಿರಾಶ್ರಿತರಿಗೆ ಆಶ್ರಯ ಒದಗಿಸಿ ಕೊಡುವ ಯತ್ನಗಳು ತೃಪ್ತಿಕರ ರೀತಿಯಿಂದ ನಡೆಯುತ್ತವೆ.

ಈ ರೀತಿಯ ಹೃದಯ ದ್ರಾವಕ ಘಟನೆಯು ಬೊಂಬಾಯಿ ನಗರದಲ್ಲಿ ಈ ವರೆಗೆ ನಡೆದುದಿಲ್ಲ. ಎಷ್ಟು ನಷ್ಟವಾಗಿದೆ ಎಂಬುದರ ಕುರಿತು ವಿವರಗಳು ಪ್ರಕಟವಾದುದಿಲ್ಲ ಸುಮಾರು ನೂರು ಕೋಟಿ ರೂಪಾಯಿಯಷ್ಟು ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ. 55 ಸಾವಿರ ಟನ್ನು ಆಹಾರ ಸಮ್ಮುಗಳು ಅಗ್ನಿದೇವನಿಗೆ ಬಲಿಯಾಗಿವೆ ಬೆಂಕಿ ಉಂಟಾದುದರ-ಕಾರಣವೇನೆಂಬುವುದೂ ತಿಳಿಯಬಂದಿಲ್ಲ. ಒಂದು ವಿಚಾರಣಾ ಸಮಿತಿಯನ್ನು ನೇಮಿಸಿ ಅನಾಹುತದ ಕೂಲಂಕುಶ ವಿವರಗಳನ್ನು ಸಂಗ್ರಹಿಸುವದು ಅತ್ಯವಶ್ಯವಿವೆ. ಇದರಿಂದ ಮುಂದೆ ಈ ರೀತಿಯ ಅನಾಹುತಗಳು ಸಂಭವಿಸದಂತೆ ಮುಂಜಾಗ್ರತೆ ವಹಿಸಲು ಅನುಕೂಲವಾಗಬಹುದು. ಅನಾಹುತದ ಪರಿಣಾಮವಾಗಿ ನಿರಾಶ್ರಿತರಾದವರಿಗೆ ಸಹಾಯ ನೀಡಲು ಪ್ರತಿಯೊಬ್ಬರೂ ಮುಂದೆ ಬರಬೇಕಾಗಿದೆ.

'ನ. ಭಾ'

ಬಾ ತ್ಮಿ.

ಕೊಡಗು ಸಮಾಜದಲ್ಲಿ ಈ ಸಮಯವು ಹೆಚ್ಚಿನ ಖರ್ಚಿನ ಕಾಲವಾಗಿದೆ. ಇಂದಿನಂಥಾ ಬಿಕ್ಕಟ್ಟಿನ ಕಾಲದಲ್ಲಿ ಹೆಜ್ಜೂಮಿರಿ ಖರ್ಚು ಮಾಡುವದು ಬುದ್ಧಿವಂತಿಕೆಯಲ್ಲ. ಮದುವೆ ಮೊದಲಾದ ಶುಭ ಕಾರ್ಯಗಳಲ್ಲಿ ಬಟ್ಟೆಗಾಗಿ, ಸಾರಾಯಿಗಾಗಿ ಇತರ ವಿಷಾರಗಳಿಗಾಗಿ ಮೂಡುತ್ತಿರುವ ಖರ್ಚು ವಿಪರೀತವಾಗಿದೆ. ಕೊಡಗಿನಲ್ಲಿ ಅನೇಕ ಉಟುಂಬದವರು ಕುಟುಂಬಕ್ಕೆ ಅಸ್ವಯಿಸುವಂತೆ ಇಂಥಾ ಶುಭಾ ಕೋಭನಗಳ ಖರ್ಚನ್ನು ಹೀಗೆಯೇ ಮಾಡಬೇಕೆಂದು ನಿರ್ಬಂಧಿಸಿಕೊಂಡಿದ್ದಾರೆ. ಆದೇ ರೀತಿ ಕೊಡವರೆಲ್ಲರೂ ಒಂದು ಹಿಡಿತವನ್ನು ನೂಗಿಕೊಂಡು ಆ ರೀತಿ ವರ್ತಿಸಿದರೆ ಸಮಾಜವು ಉದ್ಧಾರವಾಗುವುದು. ಹೆಣ್ಣಿನ ನೆಟ್ಟಗೆಯನ್ನು ಗಂಡಿನ ಸುನೆಯಲ್ಲಿ ನೋಡುವದು ದುಷ್ಟವಾದುದು. ಆದನ್ನು

Reg. No. M. 1556.
KODAGU' MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಐ. ಚಿಕ್ಕಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಖು ೨—೬—೧೯೪೪ನೇ ಗುರುವಾರ. | ಸಂಚಿಕೆ ೫೧

THE CANARA BANKING CORPORATION, Ltd.,

(Incorporated in British India with Limited liability)

ESTD: 1906. Head Office:-UDIPI.

(BRANCHES & AGENCIES IN ALL PRINCIPAL CITIES OF INDIA.)

ANNOUNCEMENT.

A branch of the Bank has been opened at Tobacco Street, CALICUT on 26-5-1944.

52-52

ಧಾತು ವೃದ್ಧಿ ರಸಾಯನ ಎಂಬ ಗುಣಂಡು ಔಷಧಿಯು (ZANDU)

"ಬ್ಯಾಕ್ಟೋ - ಫಾಸ್ಫೋ - ಮುಲ್ಯ" ಎಂಬ ಪೌಷ್ಟಿಕ ಜಾತ್ಯರುಗಳು ಮುಖ್ಯ ಘಟಕದಿಂದ ಹೊಗಳುತ್ತಿದ್ದಾರೆ.

ರಸಾಯನ! ಈ ಔಷಧಿಯು ಬೆಲೆಗೆ ಬಹಳ ಅಗ್ಗವಾಗಿದ್ದು ಅದನ್ನು ಉಪಯೋಗಿಸುವವರಿಗೆ ಬಹಳ ಲಾಭಕರ. ಧಾತುಕ್ಷೀಣತೆಯುಳ್ಳವರು ಮಾತ್ರವಲ್ಲದೆ, ಯಾರು ಸಹ ಸೇವಿಸಿದರೂ ಸಹ ಅಪಾಯವಿಲ್ಲದೆ, ಅಶಕ್ತರಿಗೆ ಬಲವನ್ನು ಕೊಡುತ್ತದೆ.

ವಿದ್ಯಾರ್ಥಿಗಳಿಗೆ, ಪರೀಕ್ಷೆಯವರಿಗೆ, ಪೈಲ್ವಾನರಿಗೆ, ವ್ಯಾಪಾರಿಗಳಿಗೆ, ಕೃಷಿಕರಿಗೆ, ಶೋಕಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಹೇಳಿದ ರೂಪದಲ್ಲಿ ಉಪಯೋಗಿಸಬಹುದು. ಇದು ಜರಾಗ್ಯವನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಯು ರುಚಿಯಾಗಿರುವುದು. ಇದರಲ್ಲಿ ಸಮಜೀರ್ಣಕರವಾದ ಎಲ್ಲಾ ವಿಟಮಿನ್ನುಗಳು ಇಂಬು ರತ್ನಕಣಗಳನ್ನು ಹೆಚ್ಚಿಸುವ ಔಷಧಿಗಳಿವೆ.

ಇದರಲ್ಲಿ ಇಲ್ಲದ ಪದಾರ್ಥವೇ ಇಲ್ಲ. ಇದು ಎಲ್ಲಾ ಪ್ರಸಿದ್ಧ ಔಷಧ ಪಾಪುಗಳಲ್ಲಿದೆ.

ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಪಾಪುಗಳಲ್ಲಿದೆ.

39 ಮುಂಗೆ ಫಾರ್ಮಸ್ಯುಟಿಕಲ್ಸ್ ವರ್ಕ್ಸ್ ಲಿಮಿಟೆಡ್, ಗೂಬಿ ಪೋಸ್ಟ್ ಬಾಂಬೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿ., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಮಾಡಿದೆ.] [1921ರಲ್ಲಿ ಸ್ಥಾಪಿತವಾದದ್ದು.

ಶೇರ್ ಬಂಡವಾಳ	.... 1,00,000 0 0	ಪರೂಢಿ ಮತ್ತು ಕ್ಷೇಮನಿಧಿ	.... 2,07,052 1 7
ಸಂಯೋಜಿತ ಶೇರ್ ಮೊಬಲಗು	.... 89,310 0 0	ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	.... 1,27,750 0 4
ಇಮ್ಮಡಿಯಾದ ಶೇರ್ ಮೊಬಲಗು	.... 1,97,957 0 10	ಶ್ರೇಷ್ಠ ಡಿಪಾಜಿಟ್ಟು	.... 3,371 14 4

ಈ ಬ್ಯಾಂಕಿನಿಂದ ಈ ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಿನ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 30% ಕೊಡಲಾಗುತ್ತೆ. ನಿಲ್ಲು ಶೇವಿಂಗ್ಸ್‌ರಿಗೆ 1ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಹೆಚ್ಚಿಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳಿಗೆ (on daily balance) ಶೇ. 0-8-0. ಶ್ರೇಷ್ಠ ಡಿಪಾಜಿಟ್ಟು ಹೊಂದಿರುವವರಿಗೆ ಪ್ರತ್ಯೇಕ ಸೌಲಭ್ಯವನ್ನು ಶಕ್ತಾಲಕ್ಕೆ ತಕ್ಕಂತೆ ಏರ್ಪಡಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರು ಲೆಕ್ಕಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟ್:— ಶ್ರೀ. ಐನಂಡ ಪಿ. ಅಯ್ಯಪ್ಪನವರು.

ಮ್ಯಾನೇಜರ್:—& ಸೆಕ್ರೆಟರಿ:— ಎ ಕೊಂಗೆಟ್ಟಿರ ಪಿ. ಅಪ್ಪಯ್ಯನವರು.

ತಾ. 1-3-1944. (52-52)

ಆಸಾಮ್ ಗಡಿಯ ಹಿನ್ನೆಲೆ.

(‘ಪೀಪಲ್ಸ್‌ವಾರ್’ ಪತ್ರಿಕೆಯಿಂದ ಸಂಗ್ರಹಿಸಿದುದು.)

‘ಜಪಾನರನ್ನು ನಾವು ಸ್ವಾಗತಿಸಲಾರೆವು. ಜಪಾನರು ಎಂಥಾ ಜನರೆಂಬುದೂ ನಮಗೆ ತಿಳಿದಿಲ್ಲ. ಆದರೆ ನಮಗೆ ಒಂದು ವಿಷಯ ತಿಳಿದಿದೆ. ನಾವು ದುಡ್ಡು ಕೊಟ್ಟರೂ, ಜೀವನಕ್ಕೆ ಅತ್ಯವಶ್ಯವಾದ ಉಪ್ಪನ್ನು ಒದಗಿಸಿಕೊಡಲಾರದ ಒಂದು ಸರಕಾರವು ಖಂಡಿತವಾಗಿಯೂ ತೊಲಗಬೇಕು’. ಒಂದು ಪಾವು ಉಪ್ಪಿಗಾಗಿ 25 ಮೈಲುಗಳಷ್ಟು ದೂರ ನಡೆದು ಉಪ್ಪು ದೊರೆಯದೆ ಹಿಂದುರಿಗಿದ ನವಗಾಂಗ್ ಜಿಲ್ಲೆಯ ರೈತರು ಹೇಳಿದ ಮಾತಿದು. ಆಸಾಮಿನ ಗೌಹಟ್ಟಿ ಜಿಲ್ಲೆಯಲ್ಲಿ ಉಪ್ಪಿಗೆ ಬರಗಾಲ ಬಂದಿದೆ. ಉಪ್ಪು ಸೇರಿಗೆ ರೂ. 2 ಇದೆ! ಈ ಕ್ರಯವನ್ನು ಕೊಟ್ಟರೂ ಉಪ್ಪು ತೂರೆಯುಪದಿಲ್ಲ. ಜಪಾನು ಪರವಿರುವ ಜನರು ಇದನ್ನು ಉಪಯೋಗಿಸಿಕೊಂಡು ಅಪಪ್ರಚಾರ ಮಾಡುತ್ತಿದ್ದಾರೆ. ‘ಜಪಾನರು ಇಂಫಾಲನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲಿ ಉಪ್ಪು ಸೇರಿಗೆ ಒಂದಾಣೆಯಲ್ಲಿ ದೊರೆಯುತ್ತದೆ!’ ಎಂದು ಪ್ರಚಾರ ಮಾಡುತ್ತಿರುವರಂತೆ! ಉತ್ತರ ಆಸಾಮಿನಲ್ಲಿ ಪರಿಸ್ಥಿತಿ ಇನ್ನೂ ಭೀಕರವಿದೆ. ಈ ಪರಿಸ್ಥಿತಿಯನ್ನು ನಿವಾರಿಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ ಆಗಬೇಕಿದ್ದಷ್ಟು ಆಗಲಿಲ್ಲ. ಸೈನಿಕರಿಗೆ ಗುಂಡು ಎಷ್ಟು ಅವಶ್ಯವೋ ಅಷ್ಟೇ ಜನರಿಗೆ ಉಪ್ಪು ಅವಶ್ಯವಾದುದು. ಆದುದರಿಂದ ಈ ಪರಿಸ್ಥಿತಿಯ ಸುಧಾರಣೆ ಬೇಗ ಆಗಬೇಕು.

ಕೋಹಿಮೂಗಡಿಗೆ ಬೀಗದ ಕೈ.

ಈ ರೀತಿ ಉಪ್ಪಿನ ಕೊಂದರೆಗೆ ಬಿದ್ದಿರುವ ನವಗಾಂಗ್ ಜಿಲ್ಲೆಯು ಕೋಹಿಮೂ ಗಡಿಯಿಂದ ಕೇವಲ 70 ಮೈಲುಗಳ ದೂರದಲ್ಲಿದೆ. ದಿಮಾಪುರವು ಈ ಜಿಲ್ಲೆಯಲ್ಲಿಯೇ ಇದೆ. ಆಸಾಮ್ ರೈಲ್ವೆ ರಸ್ತೆಯು ಈ ಮೂಲಕವೇ ಹೋಗುತ್ತಿದೆ. ಇದರ ಜನಸಂಖ್ಯೆ 7,00,000. ಇಲ್ಲಿ ಅಕ್ಕಿಯು ಅದರ ಅವಶ್ಯಕತೆಗಿಂಥಾ ಹೆಚ್ಚು ಬೆಳೆಯುತ್ತದೆ. ಸರಕಾರವು ಇದನ್ನು ಕೊಂಡುಕೊಂಡು ವ್ಯವಸ್ಥಿತ ವಿತರಣೆಮಾಡುವ ಜವಾಬ್ದಾರಿ ಹೊತ್ತಿಲ್ಲದ ಕಾರಣ ಲಾಭಬಡಕರು ಸೈಪೋಟಿಗೆ ಇಳಿದಿರುವರು. ಸರಕಾರದ ಹತ್ತಿರ ಸಕ್ಕರೆಯೊಂದನ್ನು ಬಿಟ್ಟು ಉಳಿದ ಯಾವ ವಸ್ತುವೂ ಒಂದು ತಿಂಗಳಿಗಿಂಥಾ ಹೆಚ್ಚು ದಿನ ಬರುವಷ್ಟು ಸಂಗ್ರಹ ಇಲ್ಲ. ಈ ರೀತಿ ಈ ಜಿಲ್ಲೆಯ ಸ್ಥಿತಿ ಚಿಂತಾಜನಕವಾಗಿದೆ. ಕೆಲವರು ವಿಗ್ರೂಢರಾಗಿ ‘ಜಪಾನರು ಬರಲಿ’ ಎನ್ನುವಷ್ಟರ ಪರಿಸ್ಥಿತಿಗೆ ಬಂದಿದ್ದಾರೆ ಕೋಹಿಮೂಗಡಿಗೆ ಈ ಜಿಲ್ಲೆಯು ಬೀಗದ ಕೈಯಂತಿದೆ. ಇಲ್ಲಿಯ ಜನಗಣ್ಣು ಸಂತೃಪ್ತಿಗೊಳಿಸಿ ಜಪಾನರ ವಿರುದ್ಧ ವಕ್ರತೆಯಿಂದ ನಿಲ್ಲಿಸಲು ಬೇಕಾದ ಏರ್ಪಾಡು ಮಾಡುವದು ಬಹುಮುಖ್ಯ.

ಬಂಗಾಳ ಆಸಾಮ್ ರೈಲ್ವೆ.

ಜಪಾನರು ನಾಗಬೆಟ್ಟ ಗುಡ್ಡಗಳಲ್ಲಿ ಹುದುಗಿಕೊಂಡಿದ್ದಾರೆ. ಕೋಹಿಮೂ–ದಿಮಾಪುರ ರಸ್ತೆಯಲ್ಲೂ ಇದ್ದಾರೆ. ಭಿಶನ್‌ಪುರದ ಪಶ್ಚಿಮಕ್ಕಾಗಿ ಸಿಲ್ಚಾರಿಗೆ ನುಗ್ಗುವ ಪ್ರಯತ್ನವೂ ಇದೆ. ಆಸಾಮಿನ ಚಿತ್ರಪಟವನ್ನು ತೆಗೆದುಕೊಂಡು ನೋಡಿದರೆ ಬಂಗಾಳ ಆಸಾಮ್ ರೈಲ್ವೆಯನ್ನು ಕತ್ತರಿಸುವದು ಜಪಾನರಿಗೆ ಸುಲಭವೆಂಬುದು ಕಂಡು ಬರುವದು. ಅಲ್ಲಿಯ ದೇಶೀಯರನ್ನು ದಾರಿತೋರಿಸಲು ಸುಸಲಾಯಿಸಿ ಹಿಡಿದುಕೊಂಡರೆ ಇದು ಸುಳಭವಾಗುವದರಲ್ಲಿ ಸಂಶಯವಿಲ್ಲ. ಈ ರೈಲ್ವೆಯನ್ನು ಕತ್ತರಿಸಿದರೆ ಉತ್ತರ ಬರ್ಮಾದ ಜೀವತಂತುವನ್ನು ಕತ್ತರಿಸಿದಂತೆ. ಜನರಲ್ ಸ್ಟಿಲ್‌ವೆಲ್‌ರನ್ನು ಉಸವಾಸ ಬೀಳಿಸಿದಂತೆ. ಈ ರೈಲ್ವೆಯು ಹಿಂದೂದೇಶದ ರಕ್ಷಣೆಯ ಮುಖ್ಯದ್ವಾರವಾಗಿದೆ. ಆದಕಾರಣವೇ ಈ ರೈಲ್ವೆಯನ್ನು ಆಮೇರಿಕದ ತಜ್ಞರ ವಶಕ್ಕೆ ಕೊಡಲಾಗಿದೆ. ಈ ರೈಲ್ವೆಯಲ್ಲಿ ಕೆಲಸ ಮಾಡುವವರಲ್ಲಿ ಈ ಹಿಂದೆ ಅತ್ಯಸ್ತಿಯಿತ್ತು. ಇಲ್ಲಿ ಕೆಲಸ ಮಾಡುವವರ ಶೇಕಡ 70 ರಷ್ಟು ಜನರು ಬಂಗಾಳದಿಂದ ಬಂದವರು. ಇವರು ತಮ್ಮ ಕುಟುಂಬಗಳನ್ನು ಹಿಂದೆ ಬಿಟ್ಟು ಬಂದವರು. ಇವರಿಗೆ ಸರಕಾರವು ಯೋಗ್ಯ ಸವಲತ್ತುಗಳನ್ನು ಕಲ್ಪಿಸಿಕೊಡಲಿಲ್ಲ. ಇಂಥಾ ಬಿಕ್ಕಟ್ಟಿನ ಕಾಲದಲ್ಲಿ ಈ ಕೆಲಸಗಾರರ ಸಹಕಾರದ ಮೇಲೆಯೇ ಈ ರೈಲ್ವೆಯ ಜವಾಬ್ದಾರಿ ನಿಂತಿದೆ. ಹಾಗಿರುವಾಗ ಅವರು ತೃಪ್ತರಾಗಿದ್ದರೆ ಮಾತ್ರ ಅದರ ರಕ್ಷಣೆಯು ಜಯಪ್ರದವಾಗುವದು.

ಶಕ್ತಿಮೀರಿ ಸಹಾಯ ನೂಡಿರಿ.

ಪಾವನ ಮಾತೆಯರಾದ ಕಸ್ತೂರ್‌ಬಾ ಗಾಂಧಿಯವರ ಸ್ಮಾರಕವಾಗಿ ಸಂಗ್ರಹಿಸಬೇಕೆಂದಿರುವ ರೂ. 75 ಲಕ್ಷದಲ್ಲಿ ಕೊಡಗಿನವರಾದ ನಾವು ಹತ್ತುಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಂಗ್ರಹಿಸಬೇಕೆಂದು ನಿಶ್ಚಯಿಸಿ ಕಾರ್ಯಕ್ಕೆ ತೊಡಗಿರುವೆವು. ಒಂದು ಲಕ್ಷ ಅರುವತ್ತೈದು ಸಾವಿರ ಜನಸಂಖ್ಯೆಯುಳ್ಳ ಈ ಸ್ಥಾನದಲ್ಲಿ ಹತ್ತುಸಾವಿರ ರೂಪಾಯಿಗಳನ್ನು ಸಂಗ್ರಹಿಸುವದು ಹೆಚ್ಚಲ್ಲ. ಅದಲ್ಲೂ ಈ ಹಣವ ಮುಕ್ಯಾಲು ಭಾಗವು ನಮ್ಮ ನಾಡಿನ ಸ್ತ್ರೀಯರ, ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ವೆಚ್ಚವಾಗುವದರಿಂದ ಸರ್ವರೂ ಪವಿತ್ರವಾದ ಈ ಕಾರ್ಯಕ್ಕೆ ಉದಾರ ಸಹಾಯಮಾಡಬೇಕು. ಹೊರಗಿನ ಪ್ರಾಂತಗಳಲ್ಲಿ ಬರಗಾಲ, ಮೊದಲಾದ ತೊಂದರೆಗಳಿಂದ ಜನರು ಪೀಡಿತರಾಗಿರುವರು. ಆದರೂ ಸಹ ರಾಷ್ಟ್ರಮಾತೆ ಕಸ್ತೂರ್‌ಬಾರವರ ಹೆಸರಿನಲ್ಲಿ ಶಕ್ತಿಮೀರಿ ಧನ ಸಂಗ್ರಹಮಾಡುತ್ತಿದ್ದಾರೆ. ಹಾಗಿರುವಾಗ ಅವರಷ್ಟು ತೊಂದರೆಗೆ ಒಳಗಾಗದ ನಾವು ಸಂತೋಷದಿಂದ ಈ ನಿಧಿಗೆ ಧನ ಸಹಾಯ ಮಾಡಬೇಕು. ಕಸ್ತೂರ್‌ಬಾರ ಸ್ಮಾರಕ ನಿಧಿಯೆಂದರೆ ಭಾರತ ಜೀತದ ನಿಧಿ. ಕೊಡಗಿನವರ ನಿಧಿ. ಪ್ರತಿಯೊಬ್ಬ ಭಾರತೀಯನ ನಿಧಿ. ಈ ನಿಧಿಗೆ ಮಹಾತ್ಮಗಾಂಧಿಯವರೇ ಅಧ್ಯಕ್ಷರಾಗಿ ಅದರ ವಿನಿಯೋಗದ ವ್ಯವಸ್ಥೆಮಾಡುವರು. ಇಂಥಾ ನಿಧಿಗೆ ಧನ ಸಹಾಯ ಮಾಡುವದು ಪವಿತ್ರವಾದ ಕೆಲಸವಾಗಿದೆ. ಇದರಲ್ಲಿ ರಾಜಕೀಯವಿಲ್ಲ. ಜಾತಿ, ಮತ, ಬೇಧವಿಲ್ಲದೆ, ಅಧಿಕಾರ, ಹುದ್ದೆಗಳ ಭಾವನೆಯಿಲ್ಲದೆ ಈ ನಿಧಿಗೆ ಸರ್ವರೂ ಸಹಾಯಮಾಡಬೇಕು. ಕೊಡಗು ದೇಶದ ಧನಾಢ್ಯರಾದ ಪ್ಲಾಂಟರುಗಳು, ವ್ಯಾಪಾರಸ್ಥರು, ಇತರ ಶ್ರೀಮಂತರು ಮುಂದಿನ ನಮ್ಮ ಜನಾಂಗದ ಏಳ್ಗೆಗಾಗಿರುವ ಈ ನಿಧಿಗೆ ಉದಾರವಾದ ಸಹಾಯವನ್ನು ಮಾಡುವರೆಂದು ನಂಬಿರುವೆನು.

ಡಿ. ಸಿದ್ದಣ್ಣ.

ಪ್ರೆಸಿಡೆಂಟ್,

ಕೊಡಗು ಕಸ್ತೂರ್‌ಬಾ ಗಾಂಧಿ

ಸ್ಮಾರಕ ನಿಧಿ.

ಶ್ರೀ. ಸುರೇಶವೈದ್ಯ.

ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದು ಶ್ರೀ. ಸುರೇಶವೈದ್ಯರನ್ನು ಬಿಡುಗಡೆಮಾಡಿ ಮಿಲಿಟರಿಯಿಂದಲೂ ಡಿಸ್ಚಾರ್ಜಿಮಾಡಿರುವರು. ಆದರೆ ಅವರು ನ್ಯಾಯಸಭೆಯ ತೀರ್ಮಾನದಂತೆ ದಿವೈನ್ಸ್ ಕೆಲಸ ಮಾಡಬೇಕಿದೆ. ಹೀಗೆ ಕೆಲಸ ಮಾಡುವಂತೆ ತನ್ನನ್ನು ಬಲಾತ್ಕರಿಸಲು ಬ್ರಿಟಿಷ್ ಸರಕಾರಕ್ಕೆ ಹಕ್ಕಿಲ್ಲವೆಂದೂ, ತಾನು ಮುಂದೆಯಿಟ್ಟ ಹೆಜ್ಜೆಯನ್ನು ಹಿಂದಿಡಲಾರೆನೆಂದೂ, ಯಾವ ಭಯವಿಲ್ಲದೆ ಹಿಂದೂದೇಶದ ಸ್ವಾತಂತ್ರಕ್ಕಾಗಿ ಹೆಣಗುವೆನೆಂದೂ, ಭಾರತ ಭೂಮಿಯ ಸೇವೆಗಾಗಿ ತನ್ನ ಜೀವನವನ್ನು ನುಡಿದು ಇಟ್ಟಿರುವೆನೆಂದೂ ಹೇಳಿದರು.

ಬರ್ಮಾ ಗಡಿ.

—೦೦—

ಜಪಾನರು ಹಿಂದೂ ದೇಶಕ್ಕೆ ಕಾಲಿಟ್ಟು ಎರಡು ತಿಂಗಳುಗಳಾದವು. ಈ ಎರಡು ತಿಂಗಳುಗಳಿಂದಲೂ ಹಿಂದೂದೇಶದ ಪವಿತ್ರ ಭೂಮಿಯನ್ನು ಕುಟ್ಟ ಜಪಾನರು ವಶಪಡಿಸಬಾರದೆಂದು ಆತಿ ತೀವ್ರ ರೀತಿಯ ಪ್ರತಿಭಟನೆಯನ್ನು ಮಿತ್ರ ರಾಷ್ಟ್ರದ ಪರು ಮಾಡುತ್ತಿದ್ದಾರೆ. ಪಂಜಾಬಿನ ಮುಸ್ಲಿಮರು, ಸಿಖ್ಖರು, ಮದ್ರಾಸಿನ ಹಿಂದುಗಳು ಹೀಗೆ ಸರ್ವರೂ ಜಪಾನರನ್ನು ಹೊರಗಟ್ಟುವ ಧ್ಯೇಯಕ್ಕಾಗಿ ತಮ್ಮ ರಕ್ತವನ್ನು ಪವಿತ್ರ ಭಾರತ ಮಾತೆಯ ಅಡಿದಾವರೆಗಳಲ್ಲಿ ಚೆಲ್ಲುತ್ತಿದ್ದಾರೆ. ಕಳೆದ ವಾರದಿಂದ ಮಿತ್ರರು ಜಪಾನರ ಮುನ್ನಡೆಯ ಯತ್ನಕ್ಕೆ ಸರಿಯಾದ ತಡೆ ಹಾಕಿದ್ದಾರೆ. ಜಪಾನರು ತಮ್ಮ ಸಂಪರ್ಕನ ಪತ್ರತೆಗೆದುಕೊಂಡು ಭಾರತದ ಬಾಗಿಲಿನ ಒಳಗೆ ನುಗ್ಗಲು ಬಿಡಬಾರದಿತ್ತು. ಆವರು ಒರಟುತನದಿಂದ ಇಂಫಾಲಿನ ವರೆಗೆ ನುಗ್ಗಿದ್ದಾರೆ. ಆವರನ್ನು ಬಂದಹಾಗೆ ಹಿಂದಕ್ಕೆ ಕಳುಹಿಸುವುದು ಆಷ್ಟು ಸುಲಭವಾಗಿಲ್ಲವೆಂದು ಈ ಎರಡು ತಿಂಗಳುಗಳ ಯುದ್ಧ ವರದಿಯೇ ಹೇಳುತ್ತಿದೆ. ಸಮ್ಯ ಪ್ರತ್ಯಕ್ಷ ರಣ ರಂಗಗಳನ್ನು ತೆಗೆದುಕೊಳ್ಳುವ ಉತ್ತರ ಬರ್ಮಾದಲ್ಲಿ ಜನರಲ್ ಸ್ಟಿಲ್‌ವೆಲ್ಲರು ತಮ್ಮದೊಂದು ಧಾಳಿಯನ್ನು ಆತಿ ಪ್ರಯಾಸದಿಂದ ಮುಂದೊತ್ತುತ್ತಿದ್ದಾರೆ. ಚಿಂಡಿಟರು ಜಪಾನರಿಗೆ ಇಲ್ಲಿ ಬಹು ರೀತಿಯ ತೊಂದರೆಯನ್ನು ಯಶಸ್ವಿಯಾಗಿ ಕೊಡುತ್ತಿದ್ದಾರೆ. ಪೂರ್ವ ಭಾಗದಿಂದ ಬೈನೀ ದಳಗಳು ಜನರಲ್ ವೈಯವರ ನಾಯಕತ್ವದಲ್ಲಿ ಮುಂದರಿದು ಸ್ಟಿಲ್‌ವೆಲ್ಲರ ದಳಗಳನ್ನು ಕೂಡಲು ಯತ್ನಿಸುತ್ತಿದ್ದಾರೆ. ತಾವು ಸಾಗಬೇಕಿತ್ತ 150 ಮೈಲು ದೂರದಲ್ಲಿ 70 ಮೈಲು ಮುಂದೆ ಬಂದಿದ್ದಾರೆ. ಬ್ರಿಟಿಷರ ದಳವು ವಿಟಿಕಿಯೂನವನ್ನು ಮುತ್ತಿ ಹೋರಾಡುತ್ತಿದೆ. ಆದರೆ ಈ ಮಧ್ಯೆ ಮಳೆ ಪ್ರಾರಂಭವಾಗಿದೆ. ಮಳೆಗಾಲ ಪ್ರಾರಂಭವಾದರೆ ಮುತ್ತು ವಿಟಿಕಿಯೂನವನ್ನು ವಶಪಡಿಸುವದು ಆವರಿಗೆ ಮಳೆಗಾಲದೊಳಗೆ ಅಸಾಧ್ಯವಾದರೆ ಮಿತ್ರರ ಈ ಸೇನೆಗಳಿಗೆ ವಿಮಾನ ಮೂಲಕವಲ್ಲದೆ ಯಾವ ರೀತಿಯಿಂದಲೂ ಸರಬರಾಯಿ ದೊರೆಯುವದು ಕಷ್ಟವಾಗುವದು ಇದರಿಂದ ಈ ಸೇನೆಗಳು ಯಶಸ್ವಿ ಹೋರಾಡಲಾರದಾಗಿ ಚಿಂಡಿಟ್ಸರು ಇಂಡಿಯಾಕ್ಕೆ, ಸ್ಟಿಲ್‌ವೆಲ್ಲರು ಉತ್ತರ ಅಸಾಮಿಗೆ, ಚೈನೀಯರು ಯುನಾನಿಗೆ ಹಿಂದಿರುಗಬೇಕಾಗುವದು. ಬರ್ಮಾವ ಜನರ ಸಹಕಾರವನ್ನು ಪಡೆಯುವ ಕೆಲಸವನ್ನು ಮಿತ್ರರು ಮಾಡಿದಂತೆ ಕಂಡು ಬರುವದಿಲ್ಲ. ಹಿಂದೂ ದೇಶೀಯರನ್ನು ನಿರ್ಲಕ್ಷಿಸಿದಂತೆಯೇ ಆಲ್ಲಿಯೂ ನಡೆದಿದೆ. ಜಪಾನರು ಯುದ್ಧ ಸಾಹಿತ್ಯಗಳಿಗಿಂತಲೂ ಜನರ ಮೇಲೆ ನೆಚ್ಚು ವಿಶ್ವಾಸವಿಡುತ್ತಿದ್ದಾರೆ. ಆದರೆ ಬ್ರಿಟಿಷರು ಜನರ ಬೆಂಬಲಕ್ಕಿಂಥಾ ಯುದ್ಧ ಶಸ್ತ್ರಗಳನ್ನೇ ನೆಚ್ಚಿರುವರು. ಉತ್ತರ ಬರ್ಮಾದಲ್ಲಿ ಜಪಾನರು ಕೇವಲ ತಮ್ಮ ಕೈಯ್ಯಲ್ಲಿರುವ ಭಾಗಗಳು ಚಾರಿ ಹೋಗದಂತೆ ನೋಡಿಕೊಂಡರೆ ಸಾಕಾಗಿದೆ. ಆದರೆ ಮಿತ್ರರು ಮುನ್ನುಗ್ಗಬೇಕಾದರೆ ಮಳೆ, ಮಲೇರಿಯೂ ಮೊದಲಾದುವನ್ನು ಎದುರಿಸಿ ಹೋರಾಡಬೇಕು.

ಕೊಹಿಮಾದಿಂದ ಜಪಾನರನ್ನು ಹಿಮ್ಮೆಟ್ಟಿಸಿದುದರಿಂದ ತೃಪ್ತರಾಗಿ ಕೂತುಕೊಳ್ಳುವದು ಸಾಧ್ಯವಿಲ್ಲ. ನಾಗ ಗುಡ್ಡಗಳು ಜಪಾನರ ಕೈಯ್ಯಲ್ಲಿರುವ ವರೆಗೆ ಬ್ರಹ್ಮಪುತ್ರ ಕಣಿವೆಯಲ್ಲಿ ಆವರ ಪ್ರಭಾವ ಕಂಡು ಬಾರದಿರದು. ಕೊಹಿಮಾವು ಮಿತ್ರರ ವಶವಿದ್ದರೂ ದಿನೂಷ್ಣರದಿಂದ ಇಂಫಾಲಿಗೆ ಸರಬರಾಯಿ ಕಳುಹಿಸುವನು ಸಾಧ್ಯವಾಗಿಲ್ಲ. ಮಧ್ಯೆ ರಕ್ಷೆಯು ಜಪಾನರ ವಶವಿದೆ.ಕೊಹಿಮಾದ ಉತ್ತರದಲ್ಲಿ ಮತ್ತು ದಕ್ಷಿಣದ ಮೂ ಸಾಂಗ್‌ಸೇಂಗಿನಲ್ಲಿ ಹೀಗೆ ಜಪಾನರ ಎರಡು ಕೇಂದ್ರಗಳವೆ. ಇವುಗಳನ್ನು ನಾಶ ಮಾಡದಿದ್ದರೆ ಕೊಹಿಮಾ ಹಿಡಿದೂ ಪ್ರಯೋಜನವಿಲ್ಲ. ಈ ರೀತಿ ಸರಬರಾಯಿ ಮಾರ್ಗವು ಬಂಧಾಗಿರುವದರಿಂದ ಕೊಹಿಮಾದ ಪರಿಸ್ಥಿತಿ ವಿಷಮವಾಗಿದೆ. ವಿಮಾನ ಮೂಲಕ ಮಾತ್ರ ಆದಕ್ಕೆ ಸರಬರಾಯಿ ಬರಬೇಕಿದೆ. ಮಳೆಗಾಲ ಪ್ರಾರಂಭವಾದ ಮೇಲೆ ಇದು ಇನ್ನಷ್ಟು ಕಷ್ಟವಾಗಬಹುದು. ಜಪಾನರು ಮೈದಾನಕ್ಕೆ ಬಂದಿಳಿಯಲಿ, ತಮ್ಮ ಟ್ಯಾಂಕುಗಳನ್ನು ಪಯೋಗಿಸಿ ಆವರನ್ನು ಹುಡಿ ಮಾಡುವೆನೆಂದು ಮಿತ್ರ ಸೇನಾಧಿಕಾರಿಗಳು ಕೂತಿದ್ದಾರೆ. ಆದರೆ ಜಪಾನರು ಕಾಡು ಮಾರ್ಗವಾಗಿಯೇ ಸಾಗಲೆತ್ನಿಸುತ್ತಿರುವರು. ಇಂಫಾಲಿನ ರಕ್ಷಣಕ್ಕಾಗಿ ಜಪಾನರು ಬಿಶನ್‌ಪುರವನ್ನು ವಶಪಡಿಸಿಕೊಂಡು ಸಿಲ್ಚಾರಿಗೆ ಮುಂದರಿದು ಅಸಾಮ್ ಬಂಗಾಳ ರೈಲ್ವೆಗೆ ತೊಂದರೆ ಮಾಡುವ ಸಾಧ್ಯತೆ ಇನೆ. ಆದ್ದರಿಂದ ಮಿತ್ರರು ಬಿಷನ್‌ಪುರ ಮತ್ತು ಪಾಲೆಲನ್ನು ವಶಪಡಿಸಿಕೊಂಡರೆ ಈ ರೈಲ್ವೆಗಿರುವ ಗಂಡಾಂತರವು ಸ್ವಲ್ಪ ಮಟ್ಟಿಗೆ ದೂರವಾಗಬಹುದು.

ಅರಕಾನ್ ಗಡಿಯು ವಿಚಾರ ಹೆಚ್ಚಿನ ವಾರ್ತೆಗಳೇ ಬರುತ್ತಿಲ್ಲ. ಆವರೆ ಜಪಾನರು ಇಲ್ಲಿ ತಟಸ್ಥರಿರುವರೆಂದು ತಿಳಿಯಬಾರದು. ಅರಕಾನ್ ಗಡಿಯಲ್ಲಿದ್ದ ಮಿತ್ರರ ಐವನೆ ಡಿವಿಜನನ್ನು ಇಂಫಾಲಿಗೆ ಕಂದಿರುವ ವಾರ್ತೆಯು ತಿಳಿದುಬಂದಿದೆ. ಇದರಿಂದ ಇಂಫಾಲಿನ ಸ್ಥಿತಿ ಭಯಂಕರವಿರಬಹುದೆಂದು ಊಹಿಸಬಹುದು. ತಾ. 16 ರಲ್ಲಿ ಜಪಾನರ ಧಾಳಿಯನ್ನು ಡಾಲೆಟ್ಟಾದಿಂದ ಹಿಮ್ಮೆಟ್ಟಿಸಲಾಯಿತೆಂದು ವರದಿ ಬಂದಿದೆ. ಡಾಲೆಟ್ಟಾವು ಚಿಕಗಾಂಗ್ ಗಡಿಯಿಂದ 8 ಮೈಲುಗಳ ದೂರದಲ್ಲಿದೆ. ಆದ್ದರಿಂದ ಅರಕಾನ್ ಯುದ್ಧವು ಹಿಂದೂ ದೇಶದ ಗಡಿಯ ಬಹು ಹತ್ತಿರದಲ್ಲಿ ನಡೆಯುತ್ತಿದೆಯೆನ್ನಬಹುದು. ಆದರೆ ಬಂಗಾಳದ ಈ ಭಾಗದ ಪರಿಸ್ಥಿತಿ ಹೇಗಿದೆ? ದ್ವಿತಿಯ ಬರಗಾಲದ ಚಿಹ್ನೆಗಳೇ ಕಂಡು ಬರುತ್ತಿವೆ. ಇವು ಯಶಸ್ವಿ ಯುದ್ಧಕಾರ್ಯಕ್ಕೆ ಎಂದೂ ಸಹಾಯಕವಾದುವಲ್ಲ.

ರಷ್ಯಾದ ಯುದ್ಧವು ಎಷ್ಟು ಸ್ಥಬ್ದವಾಗಿದೆಯೋ ಅದೇ ಪ್ರಮಾಣದಲ್ಲಿ ಇಟೆಲಿ ಯುದ್ಧವು ಹೆಚ್ಚಾಗಿದೆ. ಈ ರಂಗದ ಯುದ್ಧವು ಬಹು ಭೀಕರವಿದೆ. ವರ್ಣನಾತೀತವಿದೆ. ಭವಿಷ್ಯವು ಅನಿಶ್ಚಿತವಿದೆಯೆಂದು ಎಲ್ಲರೂ ಹೇಳುತ್ತಿರುವರೇ ವಿನ ಹೆ ನಿಶ್ಚಿತವಾದ ಅಭಿಪ್ರಾಯವು ಈ ವರೆಗೆ ಬಂದಿಲ್ಲ. ಮಿತ್ರರು ಈ ವರೆಗಿನ ಸ್ಥಬ್ದತೆಯನ್ನು ಮುರಿದು ಜರ್ಮನರನ್ನು ಬಹು ಪುಟ್ಟಗೆ ಹಿಂಬೆ ಸರಿಸಿದ್ದಾರೆ. ಆವರ ರಕ್ಷಣಾಗೋಡೆಗಳನ್ನು ಒಂಡೊಂದಾಗಿ ತುಂಡರಿಸಿ ಹಿಟ್ಲರ್ ಲೈನಿನ ಮೇಲೆ ಧಾಳಿ ಮಾಡಿದ್ದಾರೆ. ಈ ವ್ಯೂಹದ ಮೇಲೆ ಜರ್ಮನ್ ಸೇನಾನಿ ಕೆಸರ್‌ಲಿಂಗನಿಗೆ ದೊಡ್ಡ ಭರವಸೆಯಿತ್ತು. ಆದರೆ ಅದೂ ಮೈರಿಯಲ್ಪಡುವ ಚಿಹ್ನೆಗಳು ಕಂಡುಬರುತ್ತಿವೆ. ಕೆಸರ್‌ಲಿಂಗನು ತನ್ನ ವಿಶಿಷ್ಟ ಶಕ್ತಿಯನ್ನು ಉಪಯೋಗಿಸಿ ಮಿತ್ರರನ್ನು ಪ್ರತಿಭಟಿಸುತ್ತಿದ್ದಾನೆ. ಮಿತ್ರರು ಬಹುಮುಟ್ಟಿಗೆ ಮುಂದರಿದು ರೋಮ್ ನಗರದಿಂದ ಕೇವಲ 16 ಮೈಲುಗಳ ದೂರದಲ್ಲಿದ್ದಾರೆ. ಮಿತ್ರರು ಏಕಾಏಕಿ ಭಯಂಕರ ರೂಪು ತಾಳಿ ಈ ರೀತಿ ಮುಂದರಿಯತೊಡಗಿರುವದು ಜರ್ಮನರಿಗೆ ಚಿಂತೆಯನ್ನುಂಟುಮಾಡಿರಬಹುದು. ರೋಮ್‌ನಗರವು ಮಿತ್ರರ ವಶವಾದರೆ ಇಡೀ ಇಟೆಲಿಯ ಪತನವಾದಂತೆ. ಆದೇ ಅಲ್ಲ; ಜರ್ಮನರ ಪ್ರತಿಷ್ಠೆಯು ನಿರ್ನಾಮವಾದಂತೆ. ಆದ್ದರಿಂದ ಅಸಮಾನ ತ್ಯಾಗವನ್ನಾದರೂ ರೋಮ್‌ನಗರವನ್ನು ರಕ್ಷಿಸಲು ಕೆಸರ್‌ಲಿಂಗನು ಪ್ರಯತ್ನಿಸಬಹುದು. ಅಂತೂ ಕ್ಯಾಥೋಲಿಕ್ ಸಾಮ್ರಾಜ್ಯದ ರಾಜಧಾನಿಯಾದ ರೋಮಿಗಾಗಿ ನಡೆಯುವ ಅತ್ಯುಗ್ರಕಾಳಗವನ್ನು ಮುಂಬೆ ನೋಡಲಿರುವೆವು.

ನವಯೌವನ

ಕೊಬ್ಬು ಧಾತುಪುಷ್ಟಿಯನ್ನುಂಟುಮಾಡಿ, ವಿವಾಹಿತರಿಗೆ ಸಂತೃಪ್ತಿಯನ್ನೂ, ಪರಮಾನಂದವನ್ನೂ ಕೊಡಲು **ಮಧವಮಂಜರಿ ಮಾತ್ರೆ**ಗಳು ದಿವ್ಯೌಷಧ

ಡಬ್ಬಿ ಒಂದಕ್ಕೆ 1 ರೂಪಾಯಿ.

ಮಧವಮಂಜರಿ ಫಾರ್ಮಸಿ,
184, ಚೈನಾಬಜಾರ್ ರೋಡ್,
ಮದ್ರಾಸ್.

ಮಡಿಕೇರಿ—ಡಾ. ಕೆ. ಜಿ. ಕರುಂಬಯ್ಯ,
ಸೋಮವಾರಪೇಟೆ—ಡಾ. ಜಿ. ಎ. ಐಯ್ಯ,
ವೀರಾಜಪೇಟೆ—ಡಾ.ಕೆ.ರಾಮಕೃಷ್ಣರಾವ್.

—೦೦—

ವೀರರಾಜೇಂದ್ರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ. ಕೆ. ಯಂ. ಸುಬ್ರಾಯಶೆಟ್ಟರವರು.

ಕೊಡಗು

ತಾ. ೨-೬-೧೯೪೪ನೇ ಶುಕ್ರವಾರ

ಹೊಸ ವರ್ಷ.

ಸಾರ್ವತ್ರಿಕ ಹಬ್ಬರುವ ಯುದ್ಧ ರಂಗದ ನಡುವೆ, ಸರ್ವತೋಮುಖವಾಗಿ ಕಠಿಣಗೊಳ್ಳುತ್ತಿರುವ ಜೀವನ ಸಮಸ್ಯೆಯ ಮಧ್ಯೆ ಮತ್ತೊಂದು ವರ್ಷ ಕಾಲವಾಹಿನಿಯಲ್ಲಿ ಹಿಸ್ಸೆಲೆಗೆ ಸರಿಯಿತು. ಆದರೂ ಜನಸಮೂಹವನ್ನು ಸೂರೆಗೊಳ್ಳುತ್ತಿರುವ ವಾಶನೀ ಯುದ್ಧವು ನಿಲ್ಲಲಿಲ್ಲ. ಯಾಕೆ? ನಿಲ್ಲುವ ಚಿಹ್ನೆಗಳೂ ಗೋಚರವಾಗುತ್ತಿಲ್ಲ. ಬರಗಾಲ, ರೋಗರುಜನೆಗಳ ತಾಪ ಜನರನ್ನು ಬಿಟ್ಟಿಲ್ಲ. ಯುದ್ಧದ ಝಳದಿಂದ ಜನತೆಯು ಬೆಂದು ಬೇಗುದಿಗೊಂಡು ನಿಸ್ತೇಜರಾಗಿದ್ದರೆ, ಬರಗಾಲವ ಬವಣೆಯು ಬಡಬಾನಲಕ್ಕೆ ತುತ್ತಾಗಿ ಮತ್ತೊಂದೆಡೆ ಭಂಗಪಡುತ್ತಿದ್ದಾರೆ. ಗತವರ್ಷ ಪ್ರಾರಂಭದಲ್ಲಿ ಎಲ್ಲಿಯೋ ದೂರದಲ್ಲಿದ್ದ ಯುದ್ಧವು ಈಗ ಭಾರತೀಯರ ನಚ್ಚಿನ ದೇಶದೊಳಗನುಗ್ಗಿದೆ. ಭಾರತೀಯರ ಬಲಿದಾನವನ್ನು ರಣರಂಗದಲ್ಲಿ ಮೂಡಬೇಕಾಗಿ ಬಂದಿದೆ. ಭರತಖಂಡಕ್ಕೆ ಶತ್ರುವು ಕಾಲಿಕ್ಕಿದ್ದರೂ ಭಾರತವನ್ನು ಹಿಡಿತದಲ್ಲಿಟ್ಟಿರುವ ಅಧಿಕಾರಶಾಹಿಯು ಭಾರತೀಯರ ಸರ್ವಸಹಾಯಕ್ಕಾಗಿ ಪ್ರಯತ್ನಿಸುತ್ತಿಲ್ಲ. ತನ್ನ ಅಧಿಕಾರ ದರ್ಪವನ್ನು ಬಿಟ್ಟು ಭಾರತೀಯರೊಡನೆ ಸಹಕರಿಸಿ ಒಗ್ಗಟ್ಟಿನಿಂದ ಶತ್ರುವನ್ನು ಎದುರಿಸುವ ಯೋಗ್ಯಮಾರ್ಗವನ್ನವಲಂಬಿಸದೆ ಇನ್ನೂ ನಿರಂಕುಶ ರೀತಿಯಿಂದ ವರ್ತಿಸುತ್ತಿದೆ.

ಹೊಸ ವರ್ಷಕ್ಕೆ ಕಾಲಿಡುವ ಕಾಲಕ್ಕೆ ಮಹಾತ್ಮಗಾಂಧೀಯವರ ಬಿಡುಗಡೆಯಾದುದು ಶುಭಚಿಹ್ನೆಯಾದರೂ, ಅಗಿದ ಮುಂದಾಳುಗಳನ್ನು ಬಿಟ್ಟು ಸದ್ಯದ ಬಿಕ್ಕಟ್ಟನ್ನು ಬಗೆಹರಿಸುವ ಪ್ರಯತ್ನವೂ ಆದಿದುವದು ಯಾರಿಗೂ ತೃಪ್ತಿಯನ್ನು ಸಿರುವದಿಲ್ಲ. ಪುನಹ ದೇಶದಲ್ಲಿ ಅಲ್ಲಲ್ಲಿ ಬರಗಾಲಗಳು ತಲೆದೋರಕೊಡಗಿನೆ. ಗತವರ್ಷವು ಭಾರತದ ಚರಿತ್ರೆಯಲ್ಲಿ ರಕ್ತದ ಅಕ್ಷರಗಳಿಂದ ಬರೆಯಲ್ಪಡತಕ್ಕುದೆಂಬಂತೆ ಲಕ್ಷಾಂತರ ಜನರನ್ನು ಆಹುತಿ ತೆಗೆದುಕೊಂಡಿತು. ಸಂಪನ್ನ ರಾಷ್ಟ್ರವೆಂದೆನಿಸಿರುವ ಭರತಭೂಮಿಯಲ್ಲಿ, ಧಾರ್ಮಿಕ ವಿಚಾರಕ್ಕೆ ಅಗ್ರಸ್ಥಾನ ಪಡೆದಿರುವ ಪುಣ್ಯ ಭೂಮಿಯಲ್ಲಿ ಜನರು ಕೂಳುಗೇಡಿಗಳಾಗಿ ಹೊಟ್ಟೆಗಿಲ್ಲದೆ ಸಾಯುವದೆಂಬ ವಿಚಾರವು ಭಾರತೀಯರಾದ ನಮಗೂ, ನಮ್ಮನ್ನು ಆಳುವವೆನ್ನುವ ಸರಕಾರಕ್ಕೂ ಕಲಂಕಪ್ರಾಯವಾದುದು. ಈ ಕಲಂಕವನ್ನು ನಿವಾರಿಸುವದು ಸರಕಾರದ ಕೈಯ್ಯಲ್ಲಿದೆ. ಜನರ ಮುಂದಾಳುಗಳನ್ನು ಬಿಟ್ಟು ತೆರೆದ ಮನಸಿನಿಂದ ಸಂಧಾನ ಪ್ರಯತ್ನ ಮಾಡಿದರೆ ಹಿಂದೂ ದೇಶವು ಸಹಕರಿಸಿ ಆಂತರಿಕ ಅವ್ಯವಸ್ಥೆಯನ್ನು ಸುಧಾರಿಸಿ, ಶತ್ರುವಿನ ಗೋಣು ಮುರಿಯಲು ಸಹಾಯಕವಾಗುವುದರಲ್ಲಿ ಸಂಶಯವಿಲ್ಲ. ಈ ವರ್ಷದಲ್ಲಿ ಈ ವಿಚಾರ ಕೈಗೂಡಲಿ.

'ಕೊಡಗು' ಪತ್ರಿಕೆಯು ಈ ಸಂಚಿಕೆಯು ಮೊದಲುಗೊಂಡು ತನ್ನ 24ನೇ ವರ್ಷಕ್ಕೆ ಕಾಲಿಕ್ಕಿದೆ. ಈ 24 ವರ್ಷಗಳಿಂದ ತನ್ನ ಶಕ್ತಿಗೆ ತಕ್ಕಂತೆ ಅದು ನಾಡಿನ ಸೇವೆ ಮಾಡಿದೆ. ಈ ಸೇವೆಗೆ ಚಂದಾದಾರರೂ, ಜಾಹಿರಾತುದಾರರೂ, ಲೇಖಕರೂ ಸಹಾಯಕರು. ಇವರುಗಳ ಸಹಾಯವಿಲ್ಲದೆ ಯಾವ ಪತ್ರಿಕೆಯೂ ಮುಂದಡಿ ಇಡಲಾರದು. ಯುದ್ಧದ ದೆಸೆಯಿಂದ ಕಾಗದದ ಸಮಸ್ಯೆಯೊಂದು ಪತ್ರಿಕೆಗಳ ಜೀವಕ್ಕೇ ಸಂಚಕಾರ ತಂದಿದೆ. ಆದರೂ ಕೊಡಗು ನಾಡಿನವರ, ನಿಖಿಲ ಕನ್ನಡಿಗರ ಬೆಂಬಲದಿಂದ 'ಕೊಡಗು' ಮುಂದೆ ನಡೆದಿದೆ. ಕಾಗದದ ಅಭಾವಕ್ಕಾಗಿ ಪತ್ರಿಕೆಯು ಅಗಾಗ್ಗೆ ತನ್ನ ಆಕಾರವನ್ನು ಬದಲಾಯಿಸಬೇಕಾಗಿ ಬಂದಿದೆ. ದಯಾಮಯ ವಾಚಕರು ಇದನ್ನು ಮನ್ನಿಸಬೇಕು. ಈ ವರ್ಷವೂ ನಮ್ಮ ಕಿಂಚಿತ್ ಸೇವೆಯನ್ನು ಯಥಾವಿಧಿ ಸಲ್ಲಿಸಲು ಅನುಕೂಲವಾಗುವಂತೆ ಚಂದಾದಾರರೂ, ಜಾಹಿರಾತುದಾರರೂ, ಲೇಖಕರೂ ಸಹಾಯಕರಾಗಬೇಕು. ಪತ್ರಿಕೆಯು ಅಭಿವೃದ್ಧಿ ಪಥದಲ್ಲಿ ನಡೆಯುವಂತೆ ಪ್ರೋತ್ಸಾಹಿಸಬೇಕು.

ಪಾತ್ರಾಂತರಂಗ.

ಬಳದೇಶ.

ಬರುವ ಜುಲೈ ತಾರೀಕು 15 ರಿಂದ ಫ್ರೇಜರ್‌ಪೇಟೆಯಲ್ಲಿ ಸರ್ವೇ ತರಬೇತು ಶಾಲೆಯು ತೆರೆಯಲ್ಪಡುವದೆಂದೂ, ಮೂರು ತಿಂಗಳುಗಳ ವರೆಗೆ ತರಬೇತು ಕೊಡಲಾಗುವದೆಂದೂ ಉದ್ಯೋಗಿಗಳಲ್ಲದ ವಿದ್ಯಾರ್ಥಿಗಳು ಮಾಸಿಕ ರೂ. 3 ರಂತೆ ಫೀಜು ಕೊಡಬೇಕೆಂದೂ ನಿಶ್ಚಯಿಸಲಾಗಿದೆ.

ಮಧ್ಯಪ್ರಾಂತದ ಚಂದಾ ಜಲ್ಲೆಯಲ್ಲಿ ಎಕ್ಸಾಟ್ರಾ ಅ. ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಆಗಿರುವ ಶ್ರೀ. ಎಂ. ಎ. ಚಿಣ್ಣಪ್ಪನವರು ತಾ. 24-5-44 ರಲ್ಲಿ ಒಂದು ದೊಡ್ಡ ಹೆಬ್ಬುಲಿಯನ್ನು ಗುಂಡಿಕ್ಕಿ ಕೊಂದರಂತೆ. ಕಳೆದ ನಾಲ್ಕು ತಿಂಗಳಲ್ಲಿ ಅವರು ಮೂರು ಹೆಬ್ಬುಲಿಗಳನ್ನೂ, ನಾಲ್ಕು ಚಿರತೆಗಳನ್ನೂ ಗುಂಡಿನಿಂದ ಕೊಂದಿರುವರಂತೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗಮಾಡುತ್ತಿರುವ ಕೈಕೇರಿಯ ವಿ. ಎಸ್. ರಾಮಕೃಷ್ಣರವರು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗಿರುವರು.

ಸಿಲೋನಿನ ಜಫ್ನಾ ಎಂಬಲ್ಲಿ ಹೊಸದಾಗಿ ತೆರೆಯಲ್ಪಟ್ಟಿರುವ ಹಿಂದೂಮಹಿಳೆಯರ ಕಾಲೇಜಿಗೆ ಮಿಸ್ ಕೊಂಗಾಂಡಮುತ್ತು ಆಚ್ಚಯ್ಯನವರನ್ನು ಮುಖ್ಯಾಧ್ಯಾಪಿಕೆಯರಾಗಿ ನೇಮಿಸಲಾಗಿದೆ.

ಪೊನ್ನಂಪೇಟೆ, ನಾಪೋಕ್ಲು, ಸೋಮವಾರಪೇಟೆಗಳಲ್ಲಿ ಹೈಸ್ಕೂಲಿನ ಪ್ರಥಮ ಹೆಜ್ಜೆಯಾದ ನಾಲ್ಕನೇ ಫಾರಂಗಳನ್ನು ಖಾಸಗಿಯಾಗಿ ತೆರೆಯಬಹುದೆಂದು ಚೀಫ್ ಕಮಿಷನರು ಅನುಮತಿಯಿತ್ತಿರುವರೆಂದು ತಿಳಿಯಬರುತ್ತದೆ.

ಮಡಿಕೇರಿ.

ಶ್ರೀ. ಕೊಕ್ಕಲೆರ ಟಿ. ಕಾಳಯ್ಯನವರು ಮದ್ರಾಸ್ ವಿಶ್ವವಿದ್ಯಾಲಯದ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಚಿಕ್ಕನುಗಳೂರಿನಲ್ಲಿ ಓದುತ್ತಿರುವ ಶ್ರೀಗಳಾವ ಮಚ್ಚಂಡ ಎಸ್. ಸಂಜಪ್ಪ ಮತ್ತು ಅಂಜಪರವಂಡ ಬಿ. ಚಿಣ್ಣಪ್ಪ ಇವರುಗಳು ಮೈಸೂರಿನ ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ವಾಂಡರರ್ಸ್ ಕ್ಲಬ್ಬಿನ ಆಶ್ರಯದಲ್ಲಿ ದೇವಣೀರ ಪೂವಿ ಅಪ್ಪಯ್ಯನವರ ಸ್ಮಾರಕ ಹಾಕಿ ಕಪ್ಪಿನ ಪಂದ್ಯಾಟದ ಕಡೆ ಆಟವು ತಾ. 31-5-44 ರಲ್ಲಿ ವೈಟ್ ಯೂನಿಯನಿನವರಿಗೂ, ವಾಂಡರರ್ಸ್ ಗ್ರೀನ್‌ರವರಿಗೂ ನಡೆದು ವಾಂಡರರ್ಸ್ ಗ್ರೀನ್‌ರವರು ಜಯಶೀಲರಾಗಿ ಕಪ್ಪನ್ನು ಗೆದ್ದರು.

ಕೊಡಗು ಇಂಡಿಯನ್ ಪ್ಲಾಂಟರುಗಳ ಸಂಘದ ಮಹಾಸಭೆಯು ತಾ. 12 ರಲ್ಲಿ ಸೋಮವಾರಪೇಟೆ ಚೆನ್ನಬಸಪ್ಪ ಹೈಯರ್ ಎಲಿಮೆಂಟರಿ ಸ್ಕೂಲಿನಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯುವದು. ಮೆಂಬರುಗಳೂ, ಮೆಂಬರಾಗಲಿಚ್ಛಿಸುವವರೂ ಸಭೆಗೆ ಬರಬೇಕೆಂದೂ, ಚರ್ಚಿಸತಕ್ಕ ವಿಷಯಗಳನ್ನು ಮಿಟಿಂಗಿಗೆ ಒಂದು ವಾರಕ್ಕೆ ಮೊದಲು ಕಳುಹಿಸಬಹುದೆಂದೂ ತಿಳಿಸುತ್ತಾರೆ.

ನಾಪೋಕ್ಲು

ಇಲ್ಲಿಯ ಶಾಲೆಯಲ್ಲಿ 4ನೇ ಫಾರಮ್, ನ್ನು ತಾ. 15-6-44ರಲ್ಲಿ ಬೆಳಿಗ್ಗೆ 11 ಗಂಟೆಗೆ ಕೊಡಗು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತೆರೆಯಲ್ಪಡುವದೆಂದೂ 4ನೇ ಫಾರಮಿಗೆ ವಿದ್ಯಾರ್ಥಿಗಳನ್ನು ತಾ. 5-6-44ರಿಂದ ಸೇರಿಸಿಕೊಳ್ಳಲಾಗುವದೆಂದೂ ತಿಳಿದು ಬರುತ್ತದೆ.

ಸೋಮವಾರಪೇಟೆ.

ಹೈಸ್ಕೂಲಿನ ಮೊದಲನೆಯ ತರಗತಿಯಾದ ನಾಲ್ಕನೇ ಫಾರಮ್ಮನ್ನು ತಾ. 8-6-44 ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ತೆರೆಯಲಾಗುವದೆಂದೂ, ಶಾಲೆಗೆ ಸೇರುವ ವಿದ್ಯಾರ್ಥಿಗಳಿಗೆ ಸುಲಭ ದರದ ಬೋರ್ಡಿಂಗಿನ ಸಲಕರಣೆಯನ್ನು ಏರ್ಪಡಿಸಲಾಗಿದೆಯೆಂದೂ ತಿಳಿಯಬಂದಿದೆ.

ತಾ. 28-5-44 ರಲ್ಲಿ ಸೋಮವಾರಪೇಟೆ ನಾಡಿನ ಸಹಕಾರ ಪರಿಷತ್ತು ರಿಜಸ್ಟ್ರಾರಾದ ಶ್ರೀ. ಪಿ. ಯಂ. ಚಂಗಪ್ಪನವರ ಅಧ್ಯಕ್ಷತೆಯಲ್ಲಿಯೂ, ಯೂನಿಯನ್ ಕೂಟದ ವಾರ್ಷಿಕ ಮಹಾಸಭೆಯು ಶ್ರೀ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿಯೂ ಚೆನ್ನಬಸಪ್ಪ ಹಾಲ್‌ನಲ್ಲಿ ನಡೆದವು.

ಬೇಕಾಗಿದ್ದಾರೆ.

ಕಂಪೋಸಿಂಗ್, ಪ್ರಿಂಟಿಂಗ್, ಮತ್ತು ಬೈಂಡಿಂಗ್ ಕೆಲಸ ತಿಳಿದಿರುವ ಕೆಲಸಗಾರರು ಬೇಕಾಗಿದ್ದಾರೆ. ಯೋಗ್ಯತೆ ಮತ್ತು ಅನುಭವಕ್ಕೆ ತಕ್ಕಂತೆ ಸಂಬಳ ಕೊಡಲಾಗುವದು. ಹೆಚ್ಚಿನ ವಿವರಕ್ಕೆ ಈ ಆಡ್ರೆಸಿಗೆ ಬರೆಯಿರಿ.

ಮೇನೇಜರು,
'ಕೊಡಗು' ಮಡಿಕೇರಿ.

ಕೊಡಗು ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ.

ಧನ ಸಹಾಯ ಮಾಡಿದವರ ಹೆಸರು.

ಸುಂಟಿಕೊಪ್ಪ.

ಶ್ರೀ ಜಿ. ಎಂ. ಮಂಜುನಾಥಯ್ಯನವರು	ರೂ. 250
,, ಡಿನ್ಯ ಬಸಪ್ಪನವರು	100
,, ಪಾಂಡಂಡ ನಂಜಪ್ಪನವರು	100
ಯಂಕನ ಕುಟುಂಬಸ್ಥರು	40
,, ಟಿ. ಡಿಸೋಜನವರು	25
ಶ್ರೀಮತಿ ಸಿ. ಎಜ್. ರೋಹಿಡಿಯವರು	20
ಶ್ರೀ ಬಿ. ಅಣ್ಣಪ್ಪನವರು	20
,, ಎ. ಎಸ್. ಮೊಚಯ್ಯನವರು	10
,, ಬಿ. ಸಿ. ಬೋಪಣ್ಣನವರು	8

ಐದು ರೂಪಾಯಿಯಿಂತೆ.

ಶ್ರೀ ಗಳಾದ ಸಿ. ಜಿ. ಕಾಳಯ್ಯ, ಕೆ. ಅಬ್ದುಲ್ ಆಜೀಜ್ ಸಾಹೇಬರು, ಎಂ. ಪಚ್ಚಪ್ಪ, ಬಿ. ರಾಮಯ್ಯ, ಪುಂಜೇಟಿರ ಅಪ್ಪಯ್ಯ, ಪುಂಜೇಟಿರ ಸುಬ್ಬಯ್ಯ, ಕೆ. ಶಿಸ್ಮಪ್ಪಯ್ಯ, ಕರವಂಡ ನಂದಿಚ್ಚ, ನೊಡಿಪಿಸ್ ಬ್ಯಾರಿ, ಮಿಸ್ಟರ್ ಸಿ. ಬೆಳ್ಯಪ್ಪ, ಮಿಸೆಸ್ ಕೆ. ಎಂ. ಸೀತಮ್ಮ ಕಣ್ಣಪ್ಪ ಪೊದಲಿಯಾರ್, ಕಾಳೇರಮ್ಮನ ವಯ್ಯಣ್ಣ, ಎಂ. ಸಿ. ನಾರಾಯಣ, ಬಿ. ಟಿ. ಗೋಪಾಲಕೃಷ್ಣ ಇವರುಗಳು. ಶ್ರೀ ಬಿ. ತಮ್ಮಯ್ಯನವರು ರೂ. 3, ಶ್ರೀ ಕೆ. ಅಣ್ಣಯ್ಯನವರು ರೂ. 2.

ಸೋಮವಾರಪೇಟೆ.

ರೂ. 5ರಂತೆ.

ಶ್ರೀ ಗಳಾದ ಎಸ್. ಪೀಸಣ್ಣ, ಸತ್ಯಾ ರಿ ಸಪ್ತಿನಂದ.

ಶ್ರೀ ಎಸ್. ನಾಗರಾಜು ಮತ್ತು ಮಿಸೆಸ್ ಎನ್. ಮುಳ್ಳಯ್ಯ ಇವರುಗಳು ರೂ. 2 ರಂತೆ.

ಫ್ರೇಜರ್‌ಪೇಟೆ.

ಶ್ರೀ ಬಿ. ವೈಲಾಶ್ ಶೆಟ್ಟಿಯವರು	25
,, ಹೆಚ್. ಬಿ. ಹೊನ್ನಪ್ಪನವರು	20
,, ಕಾಳೇಗೌಡರು	10
,, ಯಜಮಾನ್ ತಿಮ್ಮಪ್ಪನವರು	10
,, ಶರಾಫ್ ಸುಬ್ಬು ಶೆಟ್ಟರು	10
,, ಪಿ. ಆರ್. ಕೃಷ್ಣ ಶೆಟ್ಟರು	10

ರೂ. 5ರಂತೆ.

ಶ್ರೀ ಗಳಾದ ಪಟೇಲ್ ಮುರುಗಪ್ಪ, ಶಿರಂಗಾಲ ಬಸವಣ್ಣ, ಹಬ್ಬಾಲೆ ಟಿ. ಪುಟ್ಟಪ್ಪ, ತೊರೆನೂರು ಸಿ. ದೊಡ್ಡಪ್ಪ, ಜಿ. ದೇವಯ್ಯ, ವಿ. ಕೆ. ಪಿಂಕಿ ಸುಬ್ಬಶೆಟ್ಟಿ, ಸಿ. ಜಾರಯ್ಯ ಇವರುಗಳು.

ಶ್ರೀ ಶಿರಂಗಾಲ ಚಿನ್ನಪ್ಪ ಮತ್ತು ಎಂ. ಎಸ್. ಸುಬ್ಬಾಯ ಇವರುಗಳು ರೂ. 3ರಂತೆ.

ಶ್ರೀ ಗಳಾದ ಎಸ್. ಸಿ. ಕರಿಯಪ್ಪ, ವಿ. ಸುಬ್ಬುಶೆಟ್ಟಿ ಮತ್ತು ಐಯ್ಯಂಡ ರಾಮಪ್ಪ ಇವರುಗಳು ರೂ. 2ರಂತೆ.

ಮಡಿಕೇರಿ.

ರೂಪಾಯಿ 5ರಂತೆ.

ಶ್ರೀಮತಿಯರಾದ ಮುಕ್ಕಾಟಿರ ಬೋಪಯ್ಯ, ಕಡೇಮಾಡ ಸೀತಮ್ಮ, ಕೋದಾಂಡ ಪೊನ್ನಪ್ಪ, ನಡಿಕೇರಿಯಂಡ ಚೊಳ್ಳಪ್ಪ, ಕೊರವಂಡ ತಿಮ್ಮಯ್ಯ, ಕೊಂಗಾಂಡ ಪೊನ್ನಪ್ಪ, ಕುಪ್ಪಂಡ ಪೊನ್ನಮ್ಮ, ಕೊಡಂದೆರ ಕಾರ್ಯಪ್ಪ, ನೆರವಂಡ ಉತ್ತಪ್ಪ, ಕರವಂಡ ಅಪ್ಪಚ್ಚು, ಸಾಂವಂಡ ಬೆಳ್ಯಪ್ಪ, ಬಡ್ಡಂಡ ವಯ್ಯಪ್ಪ, ಈತಿಯೊಂಡ ತಿಮಗವ್ವ, ಕೆ. ಎಂ. ಗಂಗಮ್ಮ ಮತ್ತು ಶ್ರೀ ಐಚಿಟ್ಟಿರ ಬೋಪಯ್ಯ ಇವರುಗಳು.

ಶ್ರೀಮತಿಯರಾದ ಕೊರವಂಡ ಸೀತಮ್ಮ, ಕೊರವಂಡ ಅಪ್ಪಚ್ಚು, ಕೆಂಬಟತಂಡ ಸುಂದಣ್ಣ, ಕುಪ್ಪಂಡ ಅಮ್ಮಕ್ಕ, ನಡಿಕೇರಿಯಂಡ ಚಿಣ್ಣಪ್ಪ ಮತ್ತು ಶ್ರೀ ಎಂ. ಎಂ. ಪೂಣಚ್ಚ ಇವರುಗಳು ರೂ. 2ರಂತೆ.

ಶ್ರೀಮತಿಯರಾದ ಬಲ್ಲಚಂಡ ಸೀತಮ್ಮ, ಮನೆಯಪಂಡ ವಯ್ಯಪ್ಪ, ಬಿದ್ದಂಡ ಮುತ್ತಮ್ಮ, ಶ್ರೀ ಎಜ್. ಎಸ್. ತಮ್ಮಣ್ಣ, ಕೆ. ಜಿ. ಸೋಮಯ್ಯ, ಕೆ. ಎಸ್. ಜೊಪ್ಪಯ್ಯ, ಸಿ. ವಿ. ಕುಟ್ಟಪ್ಪ ಇವರುಗಳು ರೂ. 1ರಂತೆ.

ವೀರಾಜಪೇಟೆ.

ಶ್ರೀಮತಿ ಸೂಂಗೆರ ಅಕ್ಕವ್ವನವರು	10

ಶ್ರೀ ಗಳಾದ ಟೋನಂಚಿರ ಸೂಯಮ್ಮ ರೂ. 5, ಮಲಚಿರ ಮುತ್ತಣ್ಣ ರೂ. 4, ಶ್ರೀಮತಿ ಚೀನಂಡ ಬೋಜಮ್ಮ ಮೇದಪ್ಪ ರೂ. 3, ಸಳಿಯಂಡ ಗಣಪತಿ ರೂ. 2, ಪೊಳ್ಳೆರ ಗಂಗಮ್ಮ ರೂ. 2, ಮಂಜೇಡ ಅಣ್ಣಯ್ಯ ರೂ. 1.

ಗೋಣಿಕೊಪ್ಪ.

ಶ್ರೀ ಕುಪ್ಪಂಡ ಮುದ್ದಪ್ಪನವರು	25
,, ಮುಕ್ಕಾಟಿರ ಮುತ್ತಣ್ಣನವರು	10

ಶ್ರೀ ಗಳಾದ ಪಿ. ರಾಮಣ್ಣ, ಕೆ. ಕೆ. ಚೀನಪ್ಪ, ಮುಕ್ಕಾಟಿರ ಬೈರಪ್ಪ, ಎಸ್. ಪಿಂಟೊ, ಸಿ. ಡಿ. ಅಪ್ಪಯ್ಯ, ಎ. ನೊರೋನಾ, ಚಿಟ್ಟಿಯಂಡ ಮುದ್ದಪ್ಪ, ವಿ. ವೀರಯ್ಯ ಇವರುಗಳು ರೂ. 1ರಂತೆ ಕೊಟ್ಟಿರುವರು.

ಒಟ್ಟು ಈ ವರೆಗೆ ರೂ. 1,771 ಜಮೆಯಾಗಿದೆ.

ಮೇಲ್ಕಂಡ ನಿಧಿಗೆ ಹಣ ಕಳುಹಿಸಲಿಚ್ಛಿಸುವವರು ಈ ಆಡ್ರೆಸಿಗೆ ಹಣ ಕಳುಹಿಸಬಹುದು.

ಬಿ. ಡಿ. ಗಣಪತಿ.
ಗೌ. ಕಾರ್ಯದರ್ಶಿ,
ಕೊಡಗು ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ, ಮಡಿಕೇರಿ.

ಕೊಡವ ವಿದ್ಯಾ ನಿಧಿ.

1944ನೇ ಮೇ ತಿಂಗಳಲ್ಲಿ ಕೊಡವ ದೇಶಾಭಿಮಾನಿಗಳಿಂದ ಸಹಕಾರ ಸಂಘ ಮತ್ತು ಇತರ ಸಂಘಗಳಿಂದ ಕೇಂದ್ರ ಮಂಡಳಿಯ ಖಜೇರಿಗೆ ಬಂದ ವರ್ಗಾಣು ವಂತಿಗೆ, ಧನ ಸಹಾಯ ಮತ್ತು ಸ್ಥಾಲ ಮರುವಾವಳಿಯ ವಿವರ–

ವಾರ್ಷಿಕ ಚಂದ ಒಂದು ರೂಪಾಯಿ.

ಧನ ಸಹಾಯ–ಶ್ರೀ ಮಚ್ಚಂಡ ಚಂಗಪ್ಪನವರು (ಆಜೀವ ಸದಸ್ಯರು) ರೂ. 500, ತಾ. ನಡಿಕೇರಿಯಂಡ ಅಪ್ಪಯ್ಯನವರು 11, ಲೆ. ಕೋಟೆರ ಅಪ್ಪಣ್ಣನವರು 5, ಡಾ. ಕೊಂಗೆಟ್ಟಿರ ಮಂದಣ್ಣನವರು 6, ನಾಪೋಕ್ಲು ಉಪಸಮಿತಿಯಿಂದ ಶ್ರೀ ಕುಂಚೆಟ್ಟಿರ ನಂಜುಂಡನವರ ಮೂಲಕ 30, ಶ್ರೀ ಚಿರಿಯಂಡ ಕುತಾಲಪ್ಪನವರು 25.

ಸ್ಥಾಲ ಮರುವಾವಳಿ–ಶ್ರೀ ಮನೆಯಪಂಡ ಪೊನ್ನಪ್ಪನವರಿಂದ (ರೇಂಜರು) ಗ, ಶ್ರೀ ಕೂತಂಡ ಪೂವಯ್ಯನವರಿಂದ 50, ಲೆ. ಚೆರಿಯಪಂಡ ಮೊದಯ್ಯನವರಿಂದ 30, ಲೆ. ಚೇನಂಡ ಗಣಪತಿಯವರಿಂದ 10.

ಸಿ. ಎಸ್. ಮಂದಣ್ಣ
ಗೌ. ಕಾರ್ಯದರ್ಶಿ.

ವಂದನಾರ್ಪಣೆ.

ನನ್ನ ಪೂಜ್ಯ ತಂದೆಯವರಾದ ಅಂಕನಳ್ಳಿ ಜ್ಯೋತಿಷ್ಯ ವಿದ್ವಾನ್ ಅಜ್ಜಾಚಾರಿಯವರು ತಮ್ಮ 63 ನೇ ವಯಸ್ಸಿನಲ್ಲಿ ತಾ. 25-5-44 ರಲ್ಲಿ ಶಿವಾಧೀನರಾದ ಕಾಲದಲ್ಲಿ ನನಗುಂಟಾದ ಅಪಾರ ಶೋಕದ ಬಗ್ಗೆ ತಮ್ಮ ಸಂತಾಪಸೂಚಕ ಪತ್ರಗಳನ್ನು ಬರೆದ ನನ್ನ ಅನೇಕ ಬಂಧು, ಮಿತ್ರರಿಗೆ ಪ್ರತ್ಯೇಕ ನನ್ನ ಕೃತಜ್ಞತಾ ವಂದನೆಗಳನ್ನು ಬರೆದು ಅರ್ಪಿಸಲು ಅಶಕ್ತನಿರುವದರಿಂದ ಅವರೆಲ್ಲರಿಗೂ ಈ ಮೂಲಕ ನನ್ನ ಅನನ್ಯಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಂಕನಳ್ಳಿ, ಎ. ಎ. ಕಾಳಿಂಗಾಚಾರಿ.
ಶನಿವಾರಸಂತೆ.

ಮೂರುವಾಚುಗಳು ಮುಫತ್ತಾಗಿ!

ರೂಪಾಯಿ 3/-ಕ್ಕಯದ ಎರಡು ಬಾಟ್ಲಿ ಪುಷ್ಪರಾಜ ಹೇರ್ ಆಯಿಲನ್ನು ಕೊಂಡುಕೊಳ್ಳುವವರಿಗೆ 250 ಬಹುಮಾನಗಳನ್ನು ಕೊಡಲಾಗುವದು. ಆ ವುಗಳಲ್ಲಿ ಒಂದು ನಿಕ್ಕಲ್ ಕೇಸಿನ ಡಮ್ಮಿ ರಿಸ್ಟ್‌ವಾಚು, ಒಂದು ಟಾರ್ಚ್‌ಲೈಟ್, 1 ಪೌಂಟನ್‌ಪೆನ್, ಒಂದು ಸೇಫ್ಟಿರೇಜರ್, 1 ಸೋಪು, ಒಂದು ಚಿಕ್ಕ ಸೈಜಿನ ಟಾಯಿಟೇಬಲ್ ಗಡಿಯಾರ, ಒಂದು ಗುಂಡಿ, 4 ಕೈಬೆಸ್ತ್ರಗಳು, ಒಂಬು ಚೂರಿ, ಒಂದು ಕತ್ತರಿ, ಒಂದು ಉಂಗುರ, 240 ಸುಂದರ ಚಿತ್ರಗಳು ಅಥವಾ ಒಂದು ಗಟ್ಟಿಯೂಪ ತಾಳಿಕೆ ಬರುವ ವಾಚ್, ಪೋಸ್ಟೇಜ್ ಮತ್ತು ಪ್ಯಾಕಿಂಗ್ 0-12-0 ಪ್ರತ್ಯೇಕ.

IDEAL TRADING CO.,
140/2 Upper Chitpur Road,
CALCUTTA (K).

ನನಗೂ ದಮ್ಮು ಇತ್ತು ಆದರೆ ಈಗ ಅದರ ನೆನಪು ಸಹ ಇಲ್ಲ.

ದಮ್ಮು ಒಮ್ಮೆಲೇ ಗುಣವಾಗಬೇಕಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳನ್ನು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. 'ಪುರೋಹಿತ ಶ್ವಾಸಹಾರಿ'ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಕಾಲ ನೋಂದಿಸದೆ ಬೇರು ಸಹಿತ ಕಿತ್ತೊಗೆದು ಗುಣ ಮಾಡುತ್ತದೆ. ಅದನ್ನು ತೆಗೆದುಕೊಳ್ಳ ಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವುದಿಲ್ಲ. ಪಥ್ಯ ಕ್ರಿಯೆ ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಒಂದು ಪುಷ್ಟಿಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವುದು.

ರೂ. 3-6-0, ರೂ. 5-12-0, ರೂ. 10-0-0ಗಳಿಗೆ ಸಣ್ಣ ಸಣ್ಣ ಬಾಟ್ಲಿಗಳು ಎಲ್ಲಾ ಕಡೆಗಳಲ್ಲೂ ಸಿಗುತ್ತವೆ.

ಪತ್ರೆ:– ಡಾ. ಪುರೋಹಿತ ಫಾರ್ಮಸಿ, ಕೊಲ್ಲಾಪುರ.

Madras Stockists,
M/S Appah & Co
China Bazar,
Madras.

ದನಗಳ ದೊಡ್ಡ ರೋಗಕ್ಕೆ ಔಷಧಿ.

ಲೇಖಕ:–ಶ್ರೀ ಕೆ. ಮಂಜಪ್ಪ.

(1) ಸೀಮೆಸುಣ್ಣ ಮುಕ್ಕಾಲು ರೂಪಾಯಿ ತೂಕ. ನೆಲಬೇವು ಒಂದುಕಾಲು ರೂ. ತೂಕ. ಕಾಚು ಮುಕ್ಕಾಲು ರೂಪಾಯಿ ತೂಕ. ಅಳಲೆಕಾಯಿ ಅಂದರೆ ಕಡಕೆಕಾಯಿಪುಡಿ ಮುಕ್ಕಾಲು ರೂಪಾಯಿ ತೂಕ. ಈ ನಾಲ್ಕು ಔಷಧಗಳನ್ನು ಪನ್ಸಾರಿ ಅಂಗಡಿಯಿಂದ ಕೊಂಡುಕೊಂಡು ಕುಟ್ಟಿ ನುಣ್ಣಗೆ ಪುಡಿಮಾಡಿ. ಈ ಪುಡಿಯನ್ನು ಐದು ರೂಪಾಯಿ ತೂಕ ಸಾರಾಯಿಯಲ್ಲಿ ಮಿಶ್ರಮಾಡಿ. ಇದರೊಂದಿಗೆ ಆರಾಣಿ (ಹೆಳೆಯ ಪಾವಲ) ತೂಕ ಅಷ್ಟೇಮು ಸೇರಿಸಿ, ಬೆಳತಕ್ಕಿನುಚ್ಚು 1 ಸೇರು ಬೇಯಿಸಿ ಗಂಜಿಮಾಡಿ, ಈ ಗಂಜಿಗೆ ಮೇಲೆ ಹೇಳಿದ ಸಾರಾಯಿ ಮದ್ದನ್ನೆಲ್ಲಾ ಮಿಶ್ರಮಾಡಿ ಹೀಗೆ ಮಿಶ್ರಮಾಡಿದ ಗಂಜಿಯನ್ನು ಸಮ ಎರಡುಪಾಲುಮಾಡಿ ಒಂದು ಪಾಲನ್ನು ಬೆಳಿಗೆ ಕುಡಿಸಿ ಇನ್ನೊಂದು ಪಾಲನ್ನು ಸಾಯಂಕಾಲದಲ್ಲಿ ಕುಡಿಸಿ. ಬೆಳೀಗುಲುಗಂಜಿಯೊಂದನ್ನು ಒಡೆದು, ಅದರ ಎರಡು ಬೇಳೆಯನ್ನು ಸಿಪ್ಪೆಸುಲಿಯದೇನೇ ಇರುವ ರಸಬಾಳೆ ಹಣ್ಣಿನೊಳಗೆ ನುಗ್ಗಿಸಿ ಮಧ್ಯಾಹ್ನ ಕೊಡುವದು ಇನ್ನೂ ಉತ್ತಮ. ಕಾಯಿಲೆ ಗುಣಮುಖ ಕಾಣುವ ವರೆಗೆ ಈ ರೀತಿ ಔಷಧ ಮಾಡಿ, ಫಕ್ಕನೆ ಗುಣಕಂಡತೆ ಮೂರುದಿನ ಔಷಧ ಸಾಕಾಗಿದೆ. ಒಂದು ವಾರ ದನವನ್ನು ಕೊಟ್ಟಿಗೆಯಿಂದ ಬಿಡಬೇಡಿ. ಕುಡಿಯಲಿಕ್ಕೆ ನೀರು ಕೊಡಬೇಡಿ. ಹಸಿಹುಲ್ಲು ಹಾಕಬೇಡಿ. ಸುಖವಿರುವ ದನಗಳಿಂದ ಬೇರೆ ಕಟ್ಟಿ ಪೋಷಣೆಮಾಡಿ ಕಾಯಿಸಿದ ಒಂದು ಬಿಂದಿಗೆ ನೀರಿಗೆ ಒಂದು ಔನ್ಸು ಸೆನ್ಸೈಲ್ ಮಿಶ್ರಮಾಡಿ ಒಂದು ಹರಕು ಬಟ್ಟೆಯನ್ನು ಸೆನ್ಸೈಲ್ ನೀರಿನಲ್ಲಿ ನನೆಸಿ ಆ ಬಟ್ಟೆಯನ್ನು ಹಿಂಡಿ ದನದ ಮೈಯನ್ನೆಲ್ಲಾ ಉಜ್ಜಿ. ಆಗ ನೊಣಗಳ ಕಾಟ ತಪ್ಪುತ್ತೆ. ಉಳಿದ ಫೆನ್ಸೈಲ್ ನೀರಿನಿಂದ ಕೊಟ್ಟಿಗೆಯನ್ನು ಶುದ್ಧಮಾಡಿ. ಉರುವಿನ ಸೆಗಣಿಯ ಮೇಲೆ ಫೆನ್ಸೈಲ್ ನೀರು ತುಂಬಾ ಎರಚಿ ಆ ಸೆಗಣಿಯನ್ನು ದೂರದಲ್ಲಿ ಗುಂಡಿತೆಗೆದು ಹಾಕಿ ಮಣ್ಣು ಮುಚ್ಚಿ. 3 ದಿನದಲ್ಲಿ ಅರ್ಧ ಸೇರು (ಅನ್ನ ಬಸಿದ) ಗಂಜಿಗೆ ಒಂದು ಸಣ್ಣ ಚಮಚದ ಅಳತೆಯಷ್ಟು ಉಪ್ಪು ಮಿಶ್ರಮಾಡಿ ಕುಡಿಯಲಿಕ್ಕೆ ಕೊಡಿ. ಹೀಗೆ ದಿನೇ ದಿನೇ ಕುಡಿಯಲಿಕ್ಕೆ ಗಂಜಿಯು ಅಳತೆ ಜಾಸ್ತಿಮಾಡಿ ಕಡಿಮೆ ಪಕ್ಷ ಒಂದು ವಾರ ದನವು ಕೊಟ್ಟಿಗೆಯಲ್ಲಿ ಇರಿಸುವದು ಉತ್ತಮ. ಗುಲುಗಂಜಿ ಅಂದರೆ ಅಕ್ಕಸಾಲಿಗರು ಚಿನ್ನ ತೂಕಮಾಡಲಿಕ್ಕೆ ಉಪಯೋಗಿಸುವ ಬಿಳೇಕಾಯಿ.

ವ್ಯವಸಾಯಗಾರರಿಗೆ ಸುಸಮಯ.

ಗದ್ದೆ ಮತ್ತು ಕಾಫಿತೋಟಕ್ಕೆ ಬೇಕಾಗುವ ಉತ್ತಮ ದರ್ಜೆಯ ಗುಳ, ಗುದ್ದಲಿ, ನುಳ್ಳುಗುದ್ದಲಿ, ಪಿಕಾಸಿ, ಹಾತಿ, ಕತ್ತಿ, ಕಸಿ ಚಾಕು, ಕೊಡಲಿ, ಹಳುವಿನ ದಬ್ಬೆ, ಕೂಲಿ ಕಂಬಳಿ, ಸ್ಪ್ರೆಯಿನ್ನಿಗೆ ಬೇಕಾದ ವ್ಯಾಕೆಂಗ್ ಮತ್ತು ಜಟ್, ರಬ್ಬರ್‌ಹೋಸ್ ಮುಂತಾದವೆಲ್ಲಾ (Spar parts) ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ಪಲ್ವರ್ ಮಿಷನ್ ಮತ್ತು ಸ್ಪ್ರೆಪಂಪುಗಳನ್ನು ರಿಪೇರಿ ಸಹ ಮಾಡುತ್ತೇವೆ.

ಧಾರಣೆ ವಗೈರೆ ಹೆಚ್ಚಿನ ಸಂಗತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಸೀತಾರಾಮಯ್ಯ ಅಂಡ್ ಕೊ.,
12-F ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

ನಂಬಿಕೆಯನ್ನು ಹುಟ್ಟಿಸತಕ್ಕ ಅಂಕೆ-ಸಂಖ್ಯೆಗಳು.

ಇಪ್ಪತ್ತಮೂರನೆಯ ಶ್ರೀವಾರ್ಷಿಕ ನಮೂನೆಯ ವರದಿಯು ಮರಣಸುಧಾರಿತ ದಾಖಲೆಯನ್ನೂ ಕಡಿಮೆ ಖರ್ಚಿನ ದಾವಾಶಯವನ್ನೂ ತೋರಿಸುತ್ತವೆ.

ಕಂಪೆನಿಯ ಜವಾಬ್ದಾರಿಕೆಗಳ ಮೇಲೆ ಶೇಕಡ ಮೂರರ ದರದಲ್ಲಿ ಬಡ್ಡಿಯನ್ನು ಗಣಿಸಿ
ಮೂರು ವರ್ಷಗಳ ಐನ್ ಲಾಭ ರೂ 1,50,88,092. ವಿಮೋದಾರರ ಕ್ಲೇಮನಿಧಿಗೆ ರೂ. 54 ಲಕ್ಷ ಸೇರಿಸಿದೆ

ಪಂಜಲ್ಪಟ ಬೋನಸುಗಳು. } ಹೋಲ್ ಲೈಫ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 12½ ರೂಪಾಯಿ.
ಎಂಡೋಮೆಂಟ್ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ 10 ರೂಪಾಯಿ.

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: ಭಾರತದಲ್ಲಿ-1874.] [ಮುಖ್ಯ ಖಜೇರಿ–ಬೊಂಬಾಯಿ.

7 ಬ್ರಾಂಚ್ ಆಫೀಸು–"ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು,
ಇನ್ಸ್‌ಪೆಕ್ಟರರ ಆಫೀಸು–ಕೆ. ಸದಾಶಿವರಾವ್ ರೋಡ್, ಮಂಗಳೂರು.

ಪುನಹ ಬರಗಾಲ.

ಸಂಗ್ರಾಹಕ:-'ವಿಹಾರಿ.'

ಪುನಹ ಬಂಗಾಳದಲ್ಲಿ ಬರಗಾಲದ ಚಿಹ್ನೆಗಳು ಪ್ರಾರಂಭಿಸಿದೆ. ಕಳೆದ ವರ್ಷದ ಧಾನ್ಯದ ಫಸಲು ಬಂದ ಆರು ತಿಂಗಳುಗಳಲ್ಲಿ ಚಿತಗಾಂಗಿನಲ್ಲಿ ಬರಗಾಲವು ಪ್ರಾರಂಭವಾಯಿತು. ಈ ವರ್ಷ ನಾಲ್ಕೇ ತಿಂಗಳುಗಳಲ್ಲಿ ಬರಗಾಲದ ಪೀಡಿಕೆ ಪ್ರಾರಂಭವಾಗಿದೆ. ಬಂಗಾಳದ ಗವರ್ನರರಿಂದ ಕೆಸಿಯವರು ಈ ವರ್ಷ ಬರಗಾಲದ ಭಯವಿಲ್ಲವೆಂದು ಹೇಳಿದಾಗ ಆಶ್ಚರ್ಯವಾಗುತ್ತದೆ. ಒಂದೋ ಆ ಸರಿಗೆ ಬಂಗಾಳದ ಸದ್ಯದ ಪರಿಸ್ಥಿತಿಯ ಅರಿವು ಇಲ್ಲದಿರಬೇಕು. ಇಲ್ಲವೇ ತಪ್ಪು ಹಿಂದಿನ ಅಧಿಕಾರಿಯಂತೆ ಸತ್ಯ ಸಂಗತಿಗಳನ್ನು ಸಾರಿ ಹೇಳಲು ಹೆದರುತ್ತಿರಬೇಕು.

ಕಳೆದ ಮೂರು ತಿಂಗಳುಗಳಲ್ಲಿ ಅಕ್ಕಿಯ ಬೆಲೆ ಶೇಕಡ 300ರಂತೆ ಏರಿದೆ. ಈಗ ಸಂತೆಯಲ್ಲಿ (ಕಾಕ್ಸ್ ಬಝೂರ್) ರೂ ವಾಯಿಗೆ ಒಂದು ಸೇರು ಅಕ್ಕಿ. ಪುನಹ ಒಮ್ಮೆ ಉಪವಾಸದಿಂದ ಬಳಲುವ ಜನರ ದೃಶ್ಯವು ಕಾಣ ತೊಡಗಿದೆ. ಶೇಕಡ 50 ರಂತೆ ಗ್ರಾಮಗಳು ತೊಂದರೆಗೆ ತುತ್ತಾಗಿ ಲೆ. ಗ್ರಾಮದ ಜನರು ಅಕ್ಕಿಯನ್ನು ಕೊಂಡುಕೊಳ್ಳಲು ಅಶಕ್ತರಾಗಿ ಉಪವಾಸ ಬೀಳುತ್ತಿದ್ದಾರೆ. ಹೆಳ್ಳಿಗಳಿಂದ ನಗರಕ್ಕೆ ನಿರಾಶ್ರಿತರು ಜೋಗೆತೊಡಗಿದ್ದಾರೆ. ಹೆಳ್ಳಿಗಳಲ್ಲಿ ನಿರಾಶ್ರಿತರು ಮರದ ನೆರಳುಗಳಲ್ಲಿ ಪಾತ್ರೆಗಳನ್ನು ಹಿಡಿದು ದಾರಿಯಲ್ಲಿ ಹೋಗುವವರನ್ನು ಅನ್ನಕ್ಕಾಗಿ ಬೇಡುವ ದೃಶ್ಯ ಪ್ರಾರಂಭವಾಗಿದೆ. ಕಸ ಬಿಸಾಡಿದ ಸ್ಥಳಗಳಲ್ಲಿ ತಿನ್ನಲು ಏನಾದರೂ ದೊರಕುವುದೇ ಎಂದು ಹುಡುಕುವ ಗುಂಪುಗಳಿಗೆ ಕಡಿಮೆ ಇಲ್ಲ. ವೃಣ, ಕಜ್ಜಿಗಳಿಗೆ ಬಲಿಯಾಗಿ ನಿನ್ತೇಜರಾಗಿರುವ ಈ ಹೆಂಗಸು, ಮಕ್ಕಳ ದೃಶ್ಯವು ಕಳೆದ ವರ್ಷಕ್ಕಿಂಧಾ ದಾರುಣವಾದುದು.

ಗ್ರಾಮಗಳಲ್ಲಿ ಜಮೀನ್ದಾರರುಗಳನ್ನು ಬಿಟ್ಟು ಮತ್ತಾರಲ್ಲೂ ಒಂದು ವರ್ಷಕ್ಕೆ ಸಾಕಾಗುವಷ್ಟು ಭತ್ತವಿಲ್ಲ. ಇವರಂತೆಯೇ ಔಷಧಿಗಳಿಗೂ ಅಭಾವ. ಕಳ್ಳಸಂತೆಯಲ್ಲಿ ಕ್ವಿನೈನ್ ಒಂದು ಮಾತ್ರೆಗೆ ರೂ. 2 ಕ್ರಯವಿದೆ. ಸರಕಾರದವರು ಇಲ್ಲಿ 48 ಸಹಾಯಕ ಆಸ್ಪತ್ರೆಗಳನ್ನು ತೆರೆದಿದ್ದಾರೆ. ಬರಗಾಲ ಒಂದೆಡೆ, ಕಾಲಿಲೆ ಇನ್ನೊಂದೆಡೆ; ಹೀಗೆ ಜನರು ಕಂಗಾಲಾಗಿದ್ದಾರೆ. ಸಿಡುಬು, ಸೂಲೇರಿಯೂ, ವಾಂತಿಬೇಧಿಯ ಪಾಮಳೆ ತಡೆಯುವುದು ಕಷ್ಟವಾಗಿ, ಕಾಕ್ಸ್ ಬಝೂರಿನ ಕಾಕರಾ ಗ್ರಾಮದಲ್ಲಿ 4 ಗಂಟೆಯಲ್ಲಿ 20 ಜನರು ವಾಂತಿಬೇಧಿಯಿಂದ ಸತ್ತವರನ್ನು ನೋಡಿದವರಿದ್ದಾರೆ. ಕಳೆದ ವರ್ಷ ಭೂಮಿಯಲ್ಲಿ ಉತ್ತಮ ಬೆಳೆ ಇದ್ದಾಗ ಜನರು ಉಪವಾಸ ಬಿದ್ದು ಸತ್ತರು. ಆ ಫಸಲಿನಿಂದ ಈಗ ಜನರು ಜೀವಿಸಿದ್ದಾರೆ. ಆದರೆ ಈ ವರ್ಷ ಬರಗಾಲ ಈಗಲೇ ಪ್ರಾರಂಭವಾಗಿದೆ. 1944ರ ಉಳಿದ ತಿಂಗಳುಗಳು ಮತ್ತು 1945ರಲ್ಲಿ ಬಂಗಾಳದ ಪರಿಸ್ಥಿತಿ ಹೇಗಾಗಬಹುದೆಂದು ಯೋಚಿಸಿದರೆ ಭಯವಾಗುತ್ತದೆ. ಈ ವರ್ಷ ಸರಿಯಾಗಿ ವ್ಯವಸಾಯವಾಗದೆ ಶೇಕಡ 50ರಷ್ಟು ಬೆಳೆ ಕಡಿಮೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ಒಂದು ಜೊತೆ ಹೂಡುವ ಎತ್ತುಗಳಿಗೆ ರೂ. 400ರಿಂದ 600ರ ವರೆಗೆ ಕೊಡಬೇಕು. ತಿನ್ನಲು ಅನ್ನವಿಲ್ಲದ ಬಡ ರೈತರು ಇಷ್ಟು ಹಣವನ್ನು ಕೊಡುವುದೆಲ್ಲಿಂದ? ಬಹು ಜನ ರೈತರು ಕಳೆದ ವರ್ಷ ಉಪವಾಸ ಬಿದ್ದಾಗ ತಮ್ಮ ಜನ ಕರುಗಳನ್ನು ಸುಲಭ ದರವಲ್ಲಿ ಮಾರಿದರು. ಈಗ ಕೊಂಡುಕೊಳ್ಳುವವರು ಅವರ ಶಕ್ತಿಗೆ ಮೀರಿದೆ.

ಸಾಮೂಹಿಕ ವ್ಯಭಿಚಾರ.

ಬರಗಾಲಕ್ಕೆ ತುತ್ತಾದ ಜನರು ಶಕ್ತಿವಂತರಿದ್ದರೆ ಸೈನ್ಯಕ್ಕೆ ಸೇರಿದ್ದಾರೆ. ಹೆಂಗಸರು ಮಿಲಿಟರಿ ಕೆಲಸಕ್ಕೆ ಸೇರಿದ್ದಾರೆ. ಇಲ್ಲಿಯ ಲೇಬರ್ ಕಾರ್ಪ್ಸಿಗೆ ಸುಮಾರು 30,000 ಹೆಂಗಸರು ಸೇರಿರುವರು. ಆ ದರೆ ಅವರ ಸ್ಥಿತಿಯು ಚಿಂತಾಜನಕವಿದೆ. ಅವರಿಗೆ ದಿನಕ್ಕೆ ರೂ. 1ರಂತೆ ಕೂಲಿ ಕೊಡಲ್ಪಡುವುದು. ಆದರು ಸರಕಾರನ ಅಧೀನದಲ್ಲಿಲ್ಲ. ಸರಕಾರಕ್ಕೆ ಕೂಲಿಗಳನ್ನು ಒದಗಿಸುವ ಏಜೆಂಟರ ಅಧೀನದಲ್ಲಿದ್ದಾರೆ. ಈ ಏಜೆಂಟರು ಅವರಿಗೆ ಪೂರ್ತಿ ಕೂಲಿಯನ್ನು ಕೊಡದೆ ಅವರ ದಿನಗೂಲಿ ರೂ. 1ರಿಂದ ನಾಲ್ಕಾಣೆ, ಎಂಟಾಣೆಯಂತೆ ಹಿಡಿದು ಕೊಂಡು ಕೊಡುತ್ತಾರೆ. ಈ ಏಜಂಟರು ಬಹು ಮಟ್ಟಿಗೆ ಅನೀತಿವಂತರು, ಅತ್ಯಾಚಾರಿಗಳು. ಅಲ್ಲಿಯ ಜನರು ಹೀಗೆ ಹೇಳುತ್ತಾರೆ-'ಈ ಕಂಟ್ರಾಕ್ಟುದಾರರು ಪ್ರಾಣಿಗಳು. ಅವರು ಈ ಹೆಂಗಳೆಯರ ಶ್ರಮವನ್ನು ಸೂರೆಗೊಳ್ಳುವದಲ್ಲ; ಅವರ ಮಾನವನ್ನೂ ಸೂರೆಗೊಳ್ಳುತ್ತಾರೆ. ಪ್ರತಿದೊಬ್ಬ ಯುವತಿಗೆ ಈ ಏಜೆಂಟರಿಗೆ ಒಳ್ಳೆ ಬೆಲೆ ದೊರೆಯುತ್ತದೆ. ಆದರೆ ಅವಳಿಗೆ ದೊರೆಯುವುದು ಒಂದು ಬಿಸ್ಕೆಟು ಇಲ್ಲವೆ ರೊಟ್ಟಿಯ ತುಂಡು ಮತ್ತು ಗುಹ್ಯ ರೋಗ.' ಲೇಬರ್ ಕಾರ್ಪ್ಸಿನಲ್ಲಿರುವ ಹೆಂಗಸರಲ್ಲಿ ಶೇಕಡ 90ರಷ್ಟು ಜನರು ಗುಹ್ಯ ರೋಗಗಳಿಗೆ ತುತ್ತಾಗಿ, ನಿರ್ಬಲರಾಗಿ, ನಿನ್ತೇಜರಾಗಿ ಕಡೆಗೆ ಕೆಲಸ ಬಿಟ್ಟು ತಮ್ಮ ಮನೆ ಕಡೆ ಬರುತ್ತಾರೆ. ತಮ್ಮ ಗ್ರಾಮದ ಜನರು ರಕ್ಷಿಸಲೆಂದು! ಆಪರ ಮೂಲಕ ಈ ಗುಪ್ತ ರೋಗಗಳು ಮೊದಲೇ ಕಾಯಿಲೆ ತುಂಬಿದ ಗ್ರಾಮಗಳಲ್ಲಿ ಹಬ್ಬಿ ಸ್ಥಿತಿಯು ಭಯಂಕರವಾಗುತ್ತದೆ.

ಚಿತಗಾಂಗ್ ಜಿಲ್ಲೆಯು ಮುಖ್ಯ ಸೈನ್ಯ ಕೇಂದ್ರವಾದ ಕಾಕ್ಸ್ ಬಝೂರಿನಲ್ಲಿ ನಮ್ಮ ಆರ್ಮೀಯವಾದ ನೀತಿ ಗೌರವಗಳಿಗೆ ಲೆಲಾಂಜಲಿ ಬಿದ್ದಿದೆ. ವ್ಯಭಿಚಾರವು ಸಾಮೂಹಿಕವಾಗಿದೆ. ರಸ್ತೆಯ ಮಗ್ಗುಲಿನ ಕೆರೆಗಳಲ್ಲಿ ಹೆಂಗಸರು ಲಜ್ಜೆಬಿಟ್ಟು ನಗ್ನರಾಗಿ ಹೆಗಲು ಸ್ನಾನ ಮಾಡುತ್ತಾರೆ. ಸಿಪಾಯಿಗಳನ್ನು ಯಾ ಇತರ ಜನರನ್ನು ಎದುರು ನೋಡುತ್ತಾ ಗುಂಪು ಗುಂಪು ಹೆಂಗಳೆಯರು ರಸ್ತೆಯ ಕಡೆಯಲ್ಲಿ ನಿಂತಿರುವುದನ್ನು ನೋಡಬಹುದು. ಇವರೆಲ್ಲ ಒಮ್ಮೆ ಧೈರ್ಯವಂತ ಹೆಂಗಳೆಯರಾಗಿದ್ದರು! ಪರದೆಯ ಹಿನ್ನೆಲೆಯಲ್ಲಿದ್ದ ಸಭ್ಯ ಮುಸ್ಲಿಂ ಹೆಂಗಳೆಯರು ಇವರಲ್ಲಿದ್ದಾರೆ! ದ್ವಿತೀಯ ಬರಗಾಲದ ಹೆಜ್ಜೆ ಬಂಗಾಳದ ಮೇಲೆ ಬಿದ್ದಿದೆ. ಇದನ್ನು ನಿವಾರಿಸಲು ಸರಕಾರವೂ, ಸಾರ್ವಜನಿಕರೂ ಈಗಲೇ ಪ್ರಯತ್ನಿಸದಿದ್ದರೆ ಪರಿಸ್ಥಿತಿ ನೈವಿಧಂರಿ ಬಂಗಾಳವು ನಿರ್ಜನ ಪ್ರದೇಶವಾದೀತು!

"ಟ್ರಾಪಿಕಲ್"

ಕಂಪೆನಿಯಲ್ಲಿ ನಿಮ್ಮ ಮೂಡುವದೇ

ಯೋಗ್ಯವೆಂದು ನಿಮ್ಮ **1944**ರ ತೀರ್ಮಾನವಾಗಲಿ

1943ರಲ್ಲಿ ಮೂಡಿದ ನಿವ್ವ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ:—ಪೊಸ ದಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:—

ಯಂ. ಯು. ಅಚ್ಚುಣ್ಣಿ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ, ಬ್ರಾಂಚ್ ಮೇನೇಜರ್, ಮಂಗಳೂರು.

21)

EMPIRE OF INDIA
LIFE ASSURANCE COMPANY LIMITED,

26) ESTABLISHED 1897

A FEW SALIENT FEATURES OF THE FORTY-SIXTH ANNUAL REPORT.

Total Income Exceeds .... Rs. 37,27,000
Assurances in Force Exceed .... „ 15,06,83,000
Assets Exceed .... „ 5,08,81,000

Claims paid since the Company was established Exceed Rs. 7,92,00,000,

Head Office:- Empire of India Life Building, BOMBAY.

APPLICATIONS FOR AGENCIES INVITED.

Branch Office:- District Board Building, Kempegowda Road, BANGALORE.

BHUVANENDRA PRODUCTS LIMITED,
KATAPADI, (S. Kanara) DEPOT— Maharatha Galli, Hubli.
'ಭುವನೇಂದ್ರ' ಕಸ್ತೂರಿ ಮಲ್ಲಿಗೆ ಬಿಡಿಮೂಲಿಕೆಗಳು.

ಗರ್ಭಾಶಯದ ದೋಷದಿಂದ ಗರ್ಭಧಾರಣೆಯಾಗದಿರುವುದು, ಶುಕ್ರವು ಅಶಕ್ತವಾಗುವುದು, ಗರ್ಭಾಶಯದ ಬಲಹೀನತೆಯಿಂದ ಗರ್ಭಪಾತವಾಗುವುದು, ಸೂತಿಕರೋಗ, ಪುಷ್ಪದ ಸಂಬಂಧ ಪೀಡೆ ಇತ್ಯಾದಿಗಳು ಬಲಹೀನಾಲಂಗನೆಯರಲ್ಲಿ ಕಂಡುಬರುವುದು. ಇವನ್ನು ಗುಣಪಡಿಸುವುದಕ್ಕೆ ಗರ್ಭಧಾರಣೆಗೆ ಸಹಾಯ ಮಾಡುವುದಕ್ಕೆ ಈ ಔಷಧಿಯನ್ನು ಬಳಸಿ ಹೊಸ ಜೀವನವನ್ನು ಕೊಡಿರಿ ಎಂದು ವಿಜ್ಞಾಪಿಸುವೆವು- (1) ಮಂಗಳೂರು ಸೆಂಟ್ರಲ್, ಜನರಲ್ ಮರ್ಚೆಂಟ್ಸ್, ಮಡಿಕೇರಿ. (2) ಮೆಸರ್ಸ ಎಮ್ಮೆನಿಶನ್ ಸ್ಟೋರ್ಸ್, ಮಡಿಕೇರಿ. (3) ಡಾ. ಬಿ. ಕೆ. ನಂಜುಂಡೇಶ್ವರ, ಮಡಿಕೇರಿ. (4) ಡಾ. ಪಿ. ಎಂ. ನಾರಾಯಣಯ್ಯ ಪೊನ್ನಂಪೇಟೆ. (5) ಡಾ. ಎಂ. ಬಿ. ತಿಮ್ಮಯ್ಯ, ಪೊನ್ನಂಪೇಟೆ (6) ಎಸ್. ಶ್ರೀನಿವಾಸಯ್ಯ, ಭಾಗಮಂಡಲ. (7) ಎಸ್. ರಾಜಲೇಖರಪ್ಪ & ಸನ್ಸ್, ಸೋಮವಾರಪೇಟೆ. (8) ಡಾ. ಎ. ಸಿ. ಸುಬ್ಬರಾಮುಲು, ವೀರಾಜಪೇಟೆ. (9) ಡಾ. ಐ. ಆರ್. ಅಪ್ಪಣ್ಣ, L. I. M., ವೀರಾಜಪೇಟೆ. (10) ಡಾ. ಕೆ. ಜಿ. ರಂಗಯ್ಯ, ಕುಶಾಲನಗರ. (11) ಕೊಡಗಿನ ಕೋ-ಆಪರೇಟಿವ್ ಸೊಸೈಟಿ, ವೀರಾಜಪೇಟೆ. (12) ಶ್ರೀ ಎ. ಎಸ್. ಮುದಯ್ಯ, ಕಾರ್ಯದರ್ಶಿ, ಮೇಲಿನವರು (13) ಡಾ. ಯಸ್. ವೆಂಕಟರಂಗಾಚಾರ್ಯ, ಯುಲ್. ಎ. ಯಂ ದಸ್. ಸೋಮವಾರಪೇಟೆ.

ಭುವನೇಂದ್ರ ಪ್ರೊಡಕ್ಟ್ಸ್, ಲಿಮಿಟೆಡ್, ಕಟಪಾಡಿ, ದ. ಕನ್ನಡ.
52-9 ದಿವೋ:- ಮಹಾರಥ ಗಲ್ಲಿ, ಹುಬ್ಬಳ್ಳಿ.

ನಾಳೆ ಎಂಬುವುದಿಲ್ಲ!

ನಮ್ಮ ಬಹಳ ಮುತ್ತಜ್ಜಂದಿರು ಯಾವಾಗಲೂ "ನಾಳಿಪ ದಿವ್ಯಂ" ಎಂದು ಹೇಳುತ್ತಿದ್ದರು. ಇದೂ ಒಳಿತು ಸರಿಯೂ ಮತ್ತು ಸ್ಥಿತಿಗೆ ಪಾತ್ರರಾಗುವುದಕ್ಕಾಗಿ ನೀವು ಮಾಡಬೇಕಾದ ಮುಖ್ಯ ಸೇವೆ ಏನೆಂದರೆ ಮುಂದಿನ ಅಡಚಣೆಗಳಿಗಾಗಿ ಸಿದ್ಧರಾಗಿರಬೇಕು. ಬುದ್ಧಿವಂತರು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಶಕ್ತಿಯಿರುವಾಗಲೇ ವಿಮೆ ಮಾಡಿಸಿ ತಮ್ಮ ಕುಟುಂಬಕ್ಕೆ ವರಮಾನವನ್ನು ಏರ್ಪಡಿಸುತ್ತಾರೆ. ಅವರು ತಮ್ಮ ಭವಿಷ್ಯವನ್ನು ಭದ್ರಪಡಿಸಿಕೊಂಡಿರುತ್ತಾರೆ ಮತ್ತು ಪಾತ್ರವಂತರೆಂದು ಜನರಿಂದ ಗೌರವಿಸಲ್ಪಡುತ್ತಾರೆ.

ನಮ್ಮ ೩೮ ವರ್ಷಗಳ ಅನುಭವದಿಂದ ಇಂದಿನವರೆಗೆ ಲಾಭವನ್ನು ಪಾಲಿಸಿದಾರರಿಗೆ ಒಂದಾದ

ದಿ ಬೋಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿ.

ಇದನ್ನು ನಿಮಗೆ ಸಿಹಿಸಾರಸ್ಸು ಮಾಡಬಲ್ಲೆವು.

ಧಾರಾಳ ಕಮಿಷನುಗಳ ಮೇಲೆ ಪ್ರತಿನಿಧಿಗಳಿಲ್ಲದ ಕೊಡಗಿನ ಭಾಗಗಳಿಗೆ ಏಜೆಂಟರು ಬೇಕಾಗಿದ್ದಾರೆ.

ಕೊಬ್ಬಿಕಾರ್ ಬ್ರದರ್ಸ್ ಲಿ.—ಪ್ರಾಮುಖ್ಯ ಏಜೆಂಟರು.

ದಕ್ಷಿಣ ಇಂಡಿಯಾದ್ಯಂತ, ಒಂದು ಸಂಸ್ಥಾನಗಳನ್ನೊಳಗೊಂಡು ಪೊ. ಬಾ. 337. ಮೌಂಟ್ ರೋಡ್, ಮದ್ರಾಸು.
27) ಶಾಖೋಪಶಾಖೆಗಳು ಮತ್ತು ಏಜೆನ್ಸಿಗಳು ದಕ್ಷಿಣ ಇಂಡಿಯಾದಲ್ಲೆಲ್ಲಾ ಇವೆ.

ಕಸ್ತೂರಿಬಾ ಗಾಂಧಿ ರಾಷ್ಟ್ರೀಯ ಸ್ಮಾರಕ
ನಿಧಿಗೆ ಧನ ಸಹಾಯ ಮಾಡಿರಿ.

Published and Printed by P. T. Belliappa at 'Kodagu' Press, Mercara for 'Kodagu'

Reg. No. M. 1550.
KODAGU' MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೪-೦.

ಸಂಪುಟ ೨೩ | ತಾರೀಕು ೯—೬—೧೯೪೪ನೇ ಶುಕ್ರವಾರ. | ಸಂಚಿಕೆ ೫೨

THE CANARA BANKING CORPORATION, Ltd.,

(Incorporated in British India with Limited liability)

ESTD: 1906. Head Office:-UDIPI.

(BRANCHES & AGENCIES IN ALL PRINCIPAL CITIES OF INDIA.)

ANNOUNCEMENT.

A branch of the Bank has been opened at Tobacco Street, CALICUT on 26-5-1944.

52-53

ಧಾತು ವೃದ್ಧಿ ರಸಾಯನ ಎಂದರೆ ಝಂಡು ಕಂಪೆನಿಯು **(ZANDU)**

"ರ್ಯಾಕ್ಟೋ - ಫಾಸ್‌ಫೋ - ಮಾಲ್ಟ್" ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ರಸಾಯನ | ಈ ಕಾಯಿಲೆಯವರಿಗೆ ಟಾನಿಕ್. ಆರೋಗ್ಯದಿಂದಿರುವವರಿಗೆ ಟಾನಿಕ್. ಧಾತುಕ್ಷೀಣತೆಯುಳ್ಳವರಿಗೆ ಟಾನಿಕ್. ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಆಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ – ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ನೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಗಳಿವೆ.

ಇದರಲ್ಲಿ ಇಲೆಕ್ಟಿರ್ ಫಾಸ್‌ಫೋಮಾಲ್ಟ್, ಹೆಪೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್‌ಫೇಟ್ ಪೆಪ್ಸಿನ್, ಸಾಲ್, ಮಾಲ್ಟ್ ಎಕ್ಸ್‌ಟ್ರಾಕ್ಟ್ ದ್ರಾಕ್ಷಾಸವ – ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ.

ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿವೆ.

40 ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಗೋಖಲೆ ರೋಡ್ ಬಾಂಬೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿ., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.] [1921ರಲ್ಲಿ ಸ್ಥಾಪಿತವಾದದ್ದು.

ಶೇರ್ ಬಂಡವಾಳ	.... 1,00,000 0 0	ವಸೂಲಾದ ಕ್ಷೇಮನಿಧಿ	.... 2,07,052 1 7
ವಸೂಲಾದ ಶೇರ್ ಮೊಬಲಗು	.... 89,310 0 0	ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು	.... 1,27,750 0 4
ಜಮೆಬಂದ ಠೇವಣಾತಿ	.... 1,97,957 0 10	ಶ್ರಿಸ್ಟ್ ಡಿವಾಜಿಟ್ಟು	.... 3,374 14 4

ಈ ಬ್ಯಾಂಕಿನಿಂದ ಈ ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ 1ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳವರೆಗೆ 2½. 5 ವರ್ಷಗಳಿಂದ10 ವರ್ಷಗಳ ವರೆಗೆ 3½.. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟುಗಳಿಗೆ (on dailybalance) ಶೇ. 0-8-0. ಶ್ರಿಸ್ಟ್ ಡಿವಾಜಿಟ್ಟು ಹೊಂದಿಕೊಳ್ಳುವುದನ್ನು ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕಪರಿತೋಧನೆ ಮಾಡುತ್ತಾರೆ.

ಪ್ರೆಸಿಡೆಂಟ್:- ಶ್ರೀ. ವಿನಂತ ಪಿ. ಕಾರ್ಯಪ್ಪನವರು.

ಮ್ಯಾನೇಜರ್:— & ಸೆಕ್ರೆಟರಿ:— ಕೊಂಗೆಟ್ಟಿರ ಪಿ. ಅಪ್ಪಯ್ಯನವರು.

ತಾ. 1-3-1944. (52-53)

ಕಸ್ತೂರಿಬಾಯಿಯು ಜೀವನ ಒಂದು ಮುಚ್ಚಿಟ್ಟ ಪುಸ್ತಕದಂತೆ. ಎಂದೂ ಅವರು ಮುಂದೆ ಬಂದವರಲ್ಲ. ಲೋಕನಾಯಕನ ವೀರಪತ್ನಿಯೆಂದು ಸರ್ವಮಾನ್ಯರಾಗಿದ್ದರೂ ಹಿಂದುಳಿದು ಹಿಂಬಾಲಿಸುವ ಜಾಯಮಾನದ ಹೊರತು ಉದ್ದಟತನದಿಂದ ಮುಂದೆ ಬಿದ್ದು ಗಡಿಬಿಡಿ ಮಾಡುವ ಜಾತಿಯಲ್ಲ. ಅವರ ಮನೋವಿಕಾಸವನ್ನಾಗಲಿ, ವ್ಯಕ್ತಿತ್ವದ ಬೆಳವಣಿಗೆಯನ್ನಾಗಲಿ ಅಳೆಯುವ ಅಥವ ಗುರುತಿಸುವ ಸಾಧನವೆಂದರೆ ಅಲ್ಲೊಂದು ಇಲ್ಲೊಂದು ಗಾಂಧಿಜೀಯವರು ಅವರ ವಿಚಾರದಲ್ಲಿ ಹೇಳಿರುವ ಮುತ್ತಿನಂತಹ ಮಾತುಗಳು. ಹಾಗೂ ಕಸ್ತೂರಿಯವರ ಸುಂದರವಾದ ಪರಿಮಳವನ್ನು ಸೇವಿಸುವ ಭಾಗ್ಯ ಪಡೆದ ಹಲವು ವ್ಯಕ್ತಿಗಳ ಕೃತಜ್ಞತೆಯ ಮಾತು. ಗಾಂಧೀಜಿ ಆತ್ಮಕಥೆಯಲ್ಲಿ ಇವರ ವಿಚಾರವಾಗಿ ಬರೆದಿರುವ ಸ್ವಲ್ಪ ಮಾತುಗಳಿಂದಲೇ ಸದ್ಯಕ್ಕೆ ಜನತೃಪ್ತಿಪಡಬೇಕಿದೆ. ಅವರ ವಿಚಾರವನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಬೇಕೆಂಬುದು ಇಡೀ ದೇಶದ ಕುತೂಹಲವಾಗಿದೆ. ಈ ಹಸಿವನ್ನು ಹಿಂಗಿಸುವುದು ಗಾಂಧಿಜೀಯ ಲೇಖನಿಗೆ ಮಾತ್ರ ಸಾಧ್ಯ. ಇದು ಬೇಗ ಕೈಗೂಡೀತೆಂಬದೇ ಎಲ್ಲರ ಮಹದಾಶಯ.

ಗಾಂಧಿಜೀಯೊಡನೆ ಹೆಣಗಲೇಬೇಕಾಗಿ ಬಂದವರ ಬವಣೆ ಹೇಳಲು ಬಾರದು. ಈ ವ್ಯಕ್ತಿಯನ್ನು ಸರಿತೂಗಿಸಿಕೊಂಡು ಹೋಗುವುದು ಸಾಮಾನ್ಯ ವಿಚಾರವಲ್ಲ, ಸಹಸದ ಕೆಲಸ. ಅರವತ್ತು ವರ್ಷ ಅಖಂಡವಾಗಿ ಮೂಡಿದ ದಾಂಪತ್ಯಜೀವನದಿಂದ ಕಸ್ತೂರಿಬಾ ದಣಿದರೊ ಏನೋ! ಸಾಯುವ ಮುನ್ನ ಹಣ್ಣು ಹಣ್ಣಾಗಿ ಹೋಗಿತ್ತು ಆ ಜೀವ. ಈ ಗಾಂಧಿ-ಗದ್ದಲದಲ್ಲೂ ಅವರ ಬಾಳು ಶಾಂತಿಯ ಚಿಲುಮೆಯಾಗಿತ್ತು.

ಕಸ್ತೂರ್‌ಬಾರ ಮುಖ ಸದಾ ಸೌಮ್ಯದ ಸೊಬಗನ್ನು ಬೀರುತ್ತಿತ್ತು. ಚಿಕ್ಕ ಮೂರ್ತಿ; ಪ್ರಸನ್ನವದನ; ಸಂಯಮಶೀಲತೆಯಿಂದ ಹುಟ್ಟುವ ಒಂದು ಗಂಭೀರವಾದ ತೇಜಸ್ಸು ಆ ಕಣ್ಣುಗಳಲ್ಲಿ ಹೊಳೆಯುತ್ತಿತ್ತು; ವಾತ್ಸಲ್ಯ ತುಂಬಿ ತುಳುಕುತ್ತಿತ್ತು. ಹೃದಯವಂತೂ ಬೆಣ್ಣೆಯಷ್ಟು ಮೃದು.

ಇಲ್ಲಿ ಮಾತಿನ ಇಂದ್ರಜಾಲವಿಲ್ಲ; ರೂಪದ ಸಂಮೋಹನಾಸ್ತ್ರವಿಲ್ಲ; ಸತ್ಯನಿಷ್ಠೆಯಿದೆ, ಆತ್ಮಸಂಸ್ಕಾರವಿದೆ, ಸೇವೆಯ ಸಂಕಲ್ಪವಿದೆ.

—ಒಟ್ಟಿನಲ್ಲಿ ದೊಡ್ಡ ಗುಣಗಳ ಗಣಿ.

ಗಾಂಧೀ ಆಶ್ರಮ ಸತ್ಯದ ಗರಡಿಯಿದ್ದಂತೆ. ಅವರ ಶಿಸ್ತು ಎಂತಹವರನ್ನೂ ಹುಸ್ತುಮಾಡಿಸುವಂತಹುದು. ಅಲ್ಲಿ ತರಬೇತಾಗುವವರಿಗೆ ಹಗುರ ಮನೋಭಾವ ವಿದ್ದರೆ ಒಂದು ಕ್ಷಣವಿರಲೂ ಅಶಕ್ಯ. ಕಸ್ತೂರಿಬಾ ಇಲ್ಲಿ ಚೆನ್ನಾಗಿ ಪಳಗಿದರು. ಪ್ರೇಮದ ಪ್ರತೀಕ, ಸಹನೆಯ ಪುತ್ಥಳಿಯೆಂಬ ಮೆಚ್ಚುಗೆಯನ್ನು ಪಡೆದರು ಕಸ್ತೂರ್‌ಬಾ.

ಕಸ್ತೂರಿ-ಬಾ.

—೦೦—

ಲೇ:—ಶ್ರೀ ಎಚ್. ಜೆ. ಸೂರ್ಯನಾರಾಯಣರಾವ್.

ಹದಿನೂರನೆಯ ವಯಸ್ಸಿನಲ್ಲಿ ಗಾಂಧಿ ಕಸ್ತೂರಿಯವರು ಗಂಡ ಹೆಂಡತಿಯರಾದರು. ಇದು ಮೊದಲು ಕಾಮದ ಗಂಟಾಗಿತ್ತು. ತಾನು ಮೋಹಾಂಧನಾಗಿ ಹೆಂಡತಿಯನ್ನು ವಿಧವಿಧವಾಗಿ ಕಾಡಿಸಿದೆನೆಂದು ವ್ಯಥೆಪಟ್ಟಿದ್ದಾರೆ. ಅವನ್ನು ನೆನಿಸಿಕೊಂಡಾಗಲೆಲ್ಲ ಕಸ್ತೂರಿಬಾಯಿಗೆ ಎಂತಹ ಅನ್ಯಾಯ ಮಾಡಿದೆ ಎಂದು ತಮ್ಮನ್ನು ತಾನೇ ಬಯ್ದುಕೊಂಡಿದ್ದಾರೆ. ಹಿಂದೂ ಸಮಾಜದ ಅಧಿಕಾರ ಪದ್ಧತಿಯಲ್ಲಿ ಅಧಿಕಾರದರ್ಪವನ್ನು ಚಲಾಯಿಸುವ ಹಕ್ಕೆಲ್ಲ ಗಂಡನದಲ್ಲವೇ? ಆದರಲ್ಲೂ ಗಂಡನು ಕಾಮುಕನಾಗಿ ಏನೂ ಅರಿಯದ ಹೆಣ್ಣು ಹರುಳೆಯ ಮೇಲೆ ಮೋಹದ ಬಲೆಯನ್ನು ಬೀಸಿದಾಗಲಂತೂ ಆತ್ಮನನ್ನು ಹಿಂಡಿದ ಹಾಗೆ. ಈ ದಬ್ಬಾಳಿಕೆಯಷ್ಟು ಕ್ರೂರವಾದುದು ಮತ್ತೊಂದಿಲ್ಲ.

ಕಸ್ತೂರ್‌ಬಾಗೆ ಕಾಮದ ಕಿರುಕುಳವನ್ನು ಕೊಟ್ಟು ಮೋಹನ್‌ದಾಸ್ ಅಪ್ಪಮ್ಯ ಆಸರಾಧಮಾಡಿದನೆಂದೂ ಹಾಗೆ ಮಾಡಿ ಆ ಕೋಮಲ ಹೃದಯಕ್ಕೆ ಅಪಚ್ಚು ನೋವು ಮಾಡಿದೆನೊ ಎಂದೂ ಮಹಾತ್ಮಾಜಿ ಪಶ್ಚಾತ್ತಾಪವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಗಾಂಧಿಜಿಯು ಈ ಕಾಮದ ಪಿತ್ತಜ್ವರವನ್ನು ವಾಸಿಮಾಡಿದ್ದು ಕಸ್ತೂರಿಬಾನ ಸಹನೆಯಿಂದ ಕೂಡಿದ ಮೂಕ ತಪಸ್ಸು. ಈಗ ಸುಮಾರು ನಾಲ್ವತ್ತು ವರ್ಷಗಳ ಕೆಳಗೆ ಗಾಂಧಿಜಿ ಬ್ರಹ್ಮಚರ್ಯ ವ್ರತ ತೊಟ್ಟಾಗ ಕಸ್ತೂರಿಬಾ ಸಂತೋಷದಿಂದ ಸಹಕರಿಸಿದರು. ಈ ಸಮಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ಶಾರದಾಮಣಿದೇವಿಯ ಅಪ್ಪಣೆ ಪಡೆದು ಸಂನ್ಯಾಸಿಯಾದುದು ಜ್ಞಾಪಕಕ್ಕೆ ಬರುತ್ತದೆ. ಕಾಮದ ವಿಕಾರಗಳೆಲ್ಲಾ ಸುಟ್ಟು ಬೋಧದ ಕೊಳೆಯನ್ನೆಲ್ಲಾ ತೊಳೆದು ಬಾಳನ್ನು ಪವಿತ್ರವಾಗಿ ಮಾಡಿಕೊಂಡ ದಿನ ಅದು. ಅಂದಿನಿಂದ ಗಾಂಧಿ-ಕಸ್ತೂರಿಬಾರ ಸಂಬಂಧ ಅಣ್ಣ-ತಂಗಿಯರದು. ಕಸ್ತೂರಿಬಾರ ಈ ತ್ಯಾಗ ಅಮೋಘವಾದುದು ಎಂದು ಮನಸಾರ ಹೊಗಳಿದಾರೆ ಗಾಂಧೀಜಿ. ದೈಹಿಕ ಸಂಬಂಧ ನಿಜವಾದ ಆತ್ಮಸಂಬಂಧವಾಗಿ ಪರಿಣಮಿಸಿ ಇಬ್ಬರ ಜೀವಗಳೂ ಒಂದುಗೂಡಿ ತ್ಯಾಗಮಯವಾಯಿತು. ಅಂದಿನಿಂದ ಕಸ್ತೂರಿಬಾರ ಬಾಳು ಗಾಂಧೀಜಿಯ ಬಾಳಿನೊಡನೆ ಹಾಸುಹೊಕ್ಕಾಗಿ ಬೆರೆತು ತಾದಾತ್ಮ್ಯವನ್ನು ಹೊಂದಿತು. ಗಾಂಧೀಜಿಯ ವಿಶಾಲವಾದ ವ್ಯಕ್ತಿತ್ವದಲ್ಲಿ ಲೀನವಾಗಿ ಹೋದ ದಿನ ಅದು.

ಬ್ರಹ್ಮಚರ್ಯ ಪ್ರತಿಜ್ಞೆಯಲ್ಲಿ ಅಡಕವಾಗಿರುವ ಕಠೋರ ಸಂಯಮ, ನಿಯಮ ನಿಷ್ಠುರತೆಯನ್ನು ಕಾಪಾಡಿಕೊಂಡು ಬಂದರು. ಇಬ್ಬರೂ ತಮ್ಮ ಜೀವವನ್ನು ದೇಶಸೇವೆಗೋಸ್ಕರ ಮುಡಿಪಾಗಿಟ್ಟರು.

ಸತ್ಯಶೋಧಕನ ಬಾಳು ಹರಿತವಾದ ಕತ್ತಿಯ ಅಂಚಿನ ಮೇಲೆ ನಡೆದಂತೆ. ಯಾವಾಗಲೂ ಅಗ್ನಿಪರೀಕ್ಷೆ. ಎಚ್ಚರತಪ್ಪಿದರೆ ವ್ರತಭಂಗವಾದಂತೆಯೆ. ನಿರ್ಮಲವಾದ ಮನಸ್ಸಿನಿಂದ, ಭಕ್ತಿಯಿಂದ ತುಂಬಿದ ಹೃದಯದಿಂದ ಸತ್ಯವನ್ನು ಆರಸಬೇಕು. ಈ ಸತ್ಯಾರಾಧನೆ ಸಂತತವಾಗಿ ನಡೆದಿದೆ.

ಕಸ್ತೂರಿಬಾರ ಜೀವನದಲ್ಲಿ ಎದ್ದು ಕಾಣುವ ತತ್ವ—ಪ್ರೇಮಯೋಗ. ಆ ಪ್ರೇಮಕ್ಕೆ ಅತಂಕವಿಲ್ಲ; ಕಳಂಕವಿಲ್ಲ; ಸಹನೆಯಿದೆ, ಸಿದ್ಧಿಯಿದೆ. ಹಾಗಲ್ಲದಿದ್ದರೆ ಗಾಂಧೀಜಿಯಂತಹ ಆತ್ಮವನ್ನು ಸೂರೆಗೊಳ್ಳಲು ಸಾಧ್ಯವಾಗುತ್ತಿತ್ತೆ? ಪೂಜ್ಯ ಮಹಾತ್ಮಾಜಿಯವರು ಈ ಪ್ರೇಮ-ಯೋಗಿಗೆ ಶರಣು ಹೋಗಿದರು. ಅಹಿಂಸೆಯ ಪಾಠವನ್ನು ಮೊದಲು ಕಲಿತದ್ದು ಕಸ್ತೂರಿಬಾಯಿಯಿಂದ. ಕಸ್ತೂರಿಬಾ ತನ್ನ ಗುರು ಎಂದು ಹೆಮ್ಮೆಯಿಂದ ಹೇಳಿಕೊಂಡರು. ಗಂಡನಿಗೆ ಹೆಂಡತಿಯೂಗಿ ಮಣಿದಿದ್ದವಳು ಮಹಾತ್ಮನಿಗೆ ಗುರುವಾಗಿ ಗೆದ್ದಳು. ಇದಕ್ಕಿಂತ ಕೀರ್ತಿಶಾಲಿನಿಯೂ ಗಲು ಯಾರಾದರೂ ಬಯಸಬಹುದೆ?

—ಗಾಂಧೀಜಿ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: 'ನನ್ನ ಹೆಂಡತಿಯು ಹಾಗೆ ನನ್ನನ್ನು ಪಡಿಯಬಲ್ಲ ಹೆಣ್ಣು ಈ ಜಗತ್ತಿನಲ್ಲೆ ಯಾರೂ ಇಲ್ಲ. ಹೀಗೆಂದರೆ ಅಕೆಯಲ್ಲಿ ದೋಷವಿಲ್ಲವೆಂದಲ್ಲ. ಹಿಂದೂ ಧರ್ಮದ ಬಗ್ಗೆ ನನಗೆ ಅದೇ ತರದ ಭಾವನೆಯಿದೆ'. ಗಾಂಧೀಜಿ ಧರ್ಮಕ್ಕೆ ಯಾವ ಬೆಲೆಯನ್ನು ಕೊಟ್ಟಿದ್ದಾರೊ ಕಸ್ತೂರಿಬಾಗೂ ಅಷ್ಟೇ ಪೂಜ್ಯತೆಯನ್ನು ತೋರಿದ್ದಾರೆ.

* * *

ಕಸ್ತೂರಿಬಾ ಸಂಪ್ರದಾಯಪ್ರಿಯಳು. ಹಿಂದಿನ ಆಚಾರವಲ್ಲಿ ಮಮತೆ ಹೆಚ್ಚು. ಗಾಂಧಿಯೊಪರೊ ಕ್ರಾಂತಿಕಾರಿ. ಇಡೀ ಜಗತ್ತಿಗೆ ಹೊಸ ದಾರಿ ತೋರಿಸಿಕೊಟ್ಟ ಯುಗಪ್ರವರ್ತಕ. ಅವರೂ ಗಂಡನಿಂದ ಬಂದ ಯಾವ ಮಾತಿಗೂ 'ನ' ಕಾರವಿಲ್ಲ. ಜೊತೆಜೊತೆಗೆ ಹೆಜ್ಜೆ ಹಾಕಿದಳು. ಆದರೆ ಪ್ರತಿಸಲ ಹಾಗೆ ಮಾಡಬೇಕಾದಾಗ ಮನಸ್ಸಿನಲ್ಲಿ ತಿಕ್ಕಾಟವಾಗಿರಬೇಕು. ತೀವ್ರ ವೇದನೆಯೊಗಿರಬೇಕು.

ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಒಂದು ದೊಡ್ಡ ಕಳಂಕ; ವ್ಯಾಯಶ್ಚಿತ್ತವಾಗಬೇಕು, ಹಿಂದುಗಳು ಪರಿಶುದ್ಧರಾಗಬೇಕು—ಎಂದು ಗಾಂಧೀಜಿ ಸಾರಿದಾಗ ಕಸ್ತೂರಿಬಾಗೆ ಬಹುಶಃ ಈ ಮಾತು ಕಹಿಯಾಗಿಯೇ ಕಂಡಿರಬೇಕು. ಹರಿಜನರನ್ನು ಮನೆಯೊಳಗೇ ಬರಮಾಡಿಕೊಂಡಾಗ ಕಸ್ತೂರಿಬಾಯಿಯು ಸಂಪ್ರದಾಯ ಮನೋಭಾವಕ್ಕೆ ಒಂದು ಬಲವಾದ ಪೆಟ್ಟು ಬಿತ್ತು. ವಿರಸ ಹುಳಿದುಹೋಗಿತ್ತು. ಆದರೆ ವಿನೇಕ ಬಂದು ಇಬ್ಬರನ್ನೂ ಕಾಪಾಡಿತು. ಈನೆಯ ದಿನದಿಂದ ಹರಿಜನ ಕಾರ್ಯದಲ್ಲಿ ಉತ್ಸಾಹದಿಂದ ಕೆಲಸ ಮಾಡಿದರು. ಕಸ್ತೂರಿಬಾ ಹರಿಜನ ಹುಡುಗಿಯನ್ನು ಸಾಕುಮಗಳಾಗಿ ಇಟ್ಟುಕೊಂ

ಅನೇಕ ದಿನಗಳಿಂದ ಎದುರು ನೋಡುತ್ತಿದ್ದ ದ್ವಿತೀಯರಂಗವು ಕಡೆಗೊಮ್ಮೆ ತೆರೆಯಲ್ಪಟ್ಟಿತು. ಮಿತ್ರರು ತಾ. 6 ರಲ್ಲಿ ಬ್ರಿಟಿಷ್ ಕಾಲುಪಡೆಯನ್ನು ದಾಟಿ ಉತ್ತರ ಫ್ರಾನ್ಸಿನಲ್ಲಿ ಕಾಲಿಟ್ಟಿದ್ದಾರೆ. ಜನರಲ್ ಈಸೆನ್ ಹೋವರರವರು ಈ ಧಾಳಿಯ ಮುಖ್ಯ ನಾಯಕರಾಗಿದ್ದಾರೆ. ಜನರಲ್ ಮಾಂಟಿಗೋಮರಿಯವರು ಈಸೆನ್ ಹೋವರರ ಕೈಕೆಳಗಿನ ಬ್ರಿಟಿಷ್ ಸೇನೆಗಳ ನಾಯಕರಿದ್ದಾರೆ. ಸರ್ ಆರ್ಥರ್ ಟೆಡ್ಡರ್‌ರವರು ಎರಡನೆ ಮುಖ್ಯ ನಾಯಕರಿದ್ದಾರೆ. ಜರ್ಮನಿಯ ಕಡೆಯಲ್ಲಿ ಹಿಟ್ಲರನು ಸರ್ವಸೇನೆಗಳ ಚಾಲನೆ ಜವಾಬ್ದಾರಿಯನ್ನು ಕೈಕೊಂಡಿರುವನು. ಫೀಲ್ಡ್ ಮಾರ್ಷಲ್ ರಾಂಕೆ ಫ್ಲಸ್ಸರ್ ಜನರಲ್ ಸ್ಟ್ರಿಪೆಪನ್‌ಬರ್ಗ್ ಮೊದಲಾದವರು ಇತರ ಸೇನಾನಾಯಕರಿದ್ದಾರೆ. ಇಷ್ಟಕೆಲವಲ್ಲಿಯೂ ಮಹಾಧೀರ ಯೋಧರು ಸೈನ್ಯ ನಡೆಯುತ್ತಿರುವರು. ಮಿತ್ರರು ಸೀನ್‌ನದಿ ಮುಖದಲ್ಲಿ ವಿನೂತನ ಮೂಲಕ ಕೊತ್ತಲೈಮೂನಿಕರನ್ನು ಇಳಿಸಿದರು. ನೌಕಾದಳದ ಮೂಲಕ ಸೇನೆಗಳು ಸರಬರಾಯಿಗಳೂ ಬಂದಿಳಿದವು. ಲಿಹಾರ್ವೆ ಬಂದರಿನ ಮೇಲೆ ಪ್ರಚಂಡ ಬಾಂಬುವೃಷ್ಟಿಯಾಗಿದೆ. ಮಿತ್ರರು ಹನ್ನೆರಡು ಪೈಲುಗಳಷ್ಟು ಒಳನುಗ್ಗಿದ್ದಾರೆ. ಅಲ್ಲಿ ಅತ್ಯಂತ ಉಗ್ರಕದನ ನಡೆಯುತ್ತಿದೆ.

'ಉತ್ತರ ಫ್ರಾನ್ಸಿನಲ್ಲಿ ಬಂದಿಳಿಯುವ ಕಾರ್ಯದಲ್ಲಿ 4000 ಹಡಗುಗಳಿಂದ ಮತ್ತು ಅನೇಕ ಸಾವಿರ ಚಿಕ್ಕ ದೋಣಿಗಳಿಂದ ಕೂಡಿದ ಭಯಂಕರ ನೌಕಾಗಡಣೆಯು ಭಾಗವಹಿಸಿತ್ತು. ಕರಾವಳಿಯಲ್ಲಿನ್ನಿದ್ದ ಜರ್ಮನ್ ತೋಪುಗಳ ಮೇಲೆ ಬಾಂಬುಗರೆದು ಅವರ ನಿದ್ದೆಗೆಡಿಸಲಾಗಿತ್ತು. ದಾರಿಯಲ್ಲಾ ನಾವು ಊಹಿಸಿದ್ದಷ್ಟು ಕಷ್ಟ ತೋರಲಿಲ್ಲ. ಅಮೇರಿಕಾ ಬ್ರಿಟಿಷರ ನೇತೃತ್ವದಲ್ಲಿ ಈಗ 11,000 ವಿಮಾನಗಳು ಕಾರ್ಯಾಚರಣೆಗೆ ತಯಾರಿವೆ' ಜೀಗೇಮು ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಹೇಳಿದ್ದಾರೆ.

ಮಿತ್ರರು ಯೋಗ್ಯ ಸ್ಥಳವನ್ನು ಹುಡುಕಿ ದಂಡಯಾತ್ರೆ ಕೈಕೊಂಡಿರುವರು. ಆ ಮಾರ್ಗವಾಗಿ ಬರ್ಲಿನಿಗೆ ಬಹು ಹತ್ತಿರದ ದಾರಿ. ಇವರು ಅಲ್ಲಿಂದ ಸ್ವಲ್ಪ ಮುಂದರಿದರೆ ಫ್ರಾನ್ಸಿನ ಜೀವಾಳ ನದ್ದು ರಾಜಧಾನಿಯೂದ ವ್ಯಾರಿಸ್ಸು ಬೊರೆಯುವದು. ಇದು ಜರ್ಮನಿಗೆ ಎಷ್ಟು ಹತ್ತಿರವ ದಾರಿಯೋ ಅಷ್ಟೇ ಮಿತ್ರರಿಗೆ ಗಂಡಾಂತಕಾರಿಯಾದುದು. ಎಂದೂ ಮನುಷ್ಯನು ಕಟ್ಟದಂಥಾ ಅಭೇದ್ಯ ಸೈನ್ಯಗೋಡೆಗಳು ಇಲ್ಲಿವೆ. ಯುದ್ಧದ ಆವಶ್ಯಕತೆಗಾಗಿ ಅತುರದಿಂದ ಕಟ್ಟಿದ ಗೋಡೆಗಳು ಇವಲ್ಲ. ಶಾಂತಿಯ ಕಾಲದಲ್ಲಿ ಕಟ್ಟಿದವು. ಇವನ್ನು ಮುರಿಯಲು ಸಾಧ್ಯವಿದೆಯೇ ಎಂಬುವನ್ನು ಪರೀಕ್ಷಿಸಿ ನಿರ್ಬಲವಾಗಿದ್ದಲ್ಲಿ ಬಲಗೊಳಿಸಲಾಗಿದೆ. ಜನರಲ್ ರೋಮೆಲ್ಲನು ಇಷ್ಟು ದಿನಗಳ ವರೆಗೆ ಮಾಡುತ್ತಿದ್ದ ಕಾರ್ಯ ಇದೇ ಎಂದೂ ಹೇಳಬಹುದು. ಹಿಟ್ಲರನ ಶಕ್ತಿ ಇರುವದೇ ಇಲ್ಲಿ. ಆದ್ದರಿಂದ ಇಲ್ಲಿ ಅತನನ್ನು ಸೋಲಿಸುವ ಕೆಲಸವು ಬಹು ಕಠಿಣವಾದುದೆಂಬುದರಲ್ಲಿ ಸಂಶಯವಿಲ್ಲ. ಆದರೆ ಮಿತ್ರರು ಇತರ ರಣರಂಗಗಳಲ್ಲಿ ಕಲಿತ ಜಾತವನ್ನು ಮುಂದಟ್ಟು ಮಾಡಿಕೊಂಡು ಅದಕ್ಕೆ ಸರಿಯಾದ ವಿಚಾರಿಡುಗಳನ್ನು ಹೊಂದಿಸಿಕೊಂಡು ಈ ಧಾಳಿ ಮಾಡಿದ್ದಾರೆ. ರಷ್ಯನರು ದ್ವಿತೀಯರಂಗ ತೆರೆಯಬೇಕೆಂದು ಕೂಗಿಕೊಂಡರೂ ತಕ್ಕ ಸಿದ್ಧತೆ ಆ ಕಾಲದಲ್ಲಿ ಇಲ್ಲದ ಕಾರಣ ಈ ಗಂಡಾಂತರಕಾರಕ ಯತ್ನದಲ್ಲಿ ಅವರು ಈವರೆಗೆ ಕೈಹಾಕಲಿಲ್ಲ. ಆದರೆ ಈಗ ಮಿತ್ರರು ಆ ಕಾರ್ಯ ಕೈಕೊಂಡಿದ್ದಾರೆ. ಈ ಧಾಳಿಯಿಂದ ಹಿಟ್ಲರನಿಗೆ ಗಾಬರಿಯೂಗಿರಲು ಸಾಕು. ರಕ್ಷಣಾಗೋಡೆಯನ್ನು ಆತನು ಸಿದ್ಧಪಡಿಸಿಟ್ಟಿದ್ದರೂ ತನ್ನ ಸೇನೆಗಳನ್ನು ಒಂದಲ್ಲ ನಾನಾಪ್ರೇಕ್ಷಗಳಲ್ಲಿ ಉಪಯೋಗಿಸಬೇಕಾಗಿ ಬಂದಿದೆ. ಮುಂದೆ ಈ ಕಠಿಣ ಪ್ರಸಂಗಗಳನ್ನು ಆತನು ಹೇಗೆ ಎದುರಿಸುವನೆಂಬುದನ್ನು ನೋಡಬೇಕಿದೆ.

ಇಟಲಿಯಲ್ಲಿ ಈ ವಾರ ಆಕ್ಸರಾಷ್ಟ್ರಗಳಿಗೆ ಬಹು ದೊಡ್ಡ ಪೆಟ್ಟು ಬಿದ್ದಿದೆ. ಇಟಲಿಯ ರಾಜಧಾನಿಯೂಪ ರೋಮ್ ಪಟ್ಟಣವು ಮಿತ್ರರ ವಶವಾಯಿತು. ಜನರಲ್ ಕೆಸರ್‌ಲಿಂಗನು ರೋಮನ್ನು ತೆರವಿಟ್ಟು ಪಟ್ಟಣವೆಂದು ಸಾರಿ ಹಿಂತೆಗೆದುಕೊಂಡಿರುವನು. ಮಿತ್ರರು ರೋಮ್‌ನಗರವನ್ನು ಧಾಟಿ ಜರ್ಮನರನ್ನು ಹಿಮ್ಮೆಟ್ಟಿಸಿ ನಡೆಬಡೆಯಲು ಮುಂದೆ ಸಾಗಿದರೂ ಜರ್ಮನರು ತೀವ್ರ ಪ್ರತಿಭಟನೆಯನ್ನು ಮಾಡದೆ ಖಾಲಿಯೇ ಹಿಂಜರಿಯುತ್ತಿರುವರು. ಮಿತ್ರರ ಪಂಚೆಯದಳವು ಟೈಬರ್‌ನದಿಯನ್ನು ಧಾಟಿ ಮುಂದೆ ಸಾಗುತ್ತಿದೆ. ರೋಮ್ ನಗರವನ್ನು ಯಾವ ನಷ್ಟವಿಲ್ಲದೆ ರಕ್ಷಿಸಲಿಕ್ಕಾಗಿ ತಾವು ಅಲ್ಲಿ ಯುದ್ಧ ನೂಡದೆ ಹಿಂತೆಗೆದುಕೊಂಡುದೆಂದು ಜರ್ಮನರು ಹೇಳುತ್ತಿದ್ದಾರೆ. ಇಟಲಿಯು ರಾಜರಾದ ವಿಕ್ಟರ್ ಇಮ್ಯಾನ್ಯುವೆಲ್‌ರವರು ತಮ್ಮ ರಾಜಾಧಿಕಾರವನ್ನು ತಮ್ಮ ಮಗ ಅಂಬರ್ಟೋ ರವರಿಗೆ ವರ್ಗಾಯಿಸಿರುವರು. ಇಟಲಿಯ ಆರ್ಮಿಯೇ ಯುದ್ಧದಲ್ಲಿ ಮಿತ್ರರ ಕಡೆಯಲ್ಲಿ 20,000 ಜನರೂ, ಜರ್ಮನರ 25000 ಜನರು ಸತ್ತರಂತೆ. ಆಂತು ಇಟಲಿಯಲ್ಲಿ ಮಿತ್ರರ ಕೈ ಮೇಲಾಗಿ ಜನರಲ್ ಅಲೆಕ್ಸಾಂಡರರು ಮುಂದೆ ನುಗ್ಗುತ್ತಿರುವರು.

'ಜಪಾನರಿಗೆ ಎಲ್ಲೆಲ್ಲೂ ನಷ್ಟವಾಗುತ್ತಿದೆ. ಅವರಿಗೆ ಪಲಾಯನ ಮಾರ್ಗಗಳು ಹಿಡಿತವಿಲ್ಲ. ಮಳೆಗಾಲದಲ್ಲಿ ಅವರು ಹೇಳದೆ ಕೇಳದೆ ಈ ಗಡಿಯಿಂದ ಹಿಂತೆಗೆದುಕೊಳ್ಳದಿದ್ದರೆ ಮಿತ್ರರ ಕೈಯಲ್ಲಿ ನಾಶವಾಗುವರು' ಎಂಬರ್ಥದ ಹೇಳಿಕೆಯೊಂದು ಮಿತ್ರಕೇಂದ್ರದಿಂದ ಹೊರಟಿದೆ. ಇದು ಕೇವಲ ಅಪಪ್ರಚಾರ ಯೂ ಆತಾವಚನವಲ್ಲದೆ ಬೇರಿಲ್ಲ. ಜಪಾನರು ಎಲ್ಲೆಲ್ಲಿ ಹೋರಾಡುತ್ತಿದ್ದಾರೊ ಅಲ್ಲಲ್ಲಿ ಮಳೆಗಾಲದಲ್ಲಿ ಉಪಯೋಗಿಸಬಹುದಾದ ಮಾರ್ಗಗಳು ಇವೆ. ಟಾಮು, ಟಿಡ್ಡಿಮ್ ಮತ್ತು

(6ನೇ ಪುಟ ನೋಡಿ)

ದ್ವಿತೀಯ ರಂಗ

ರೋಮ್ ನಗರದ ಪತನ.

—೦೦—

ಮಾರ್ಷಲ್ ಕಾರ್ಲ್ ರನ್ಸ್‌ಡೆಯವರು ಪ್ರತಿಭಟನಾ ಸೇನೆಯ ಮುಖ್ಯ ಸೇನಾನಾಯಕರು. ಸೈನ್ಯ ಸಮೂಹದ ಮುಖ್ಯಸ್ಥರು ಫೀಲ್ಡ್ ಮಾರ್ಷಲ್ ರೋಮೆಲ್ ಮತ್ತು ಫೀಲ್ಡ್ ಮಾರ್ಷಲ್ ಟ್ಯಾಸ್ಸೋವಿಟ್ಸರುಗಳು. ವಿಮಾನ ದಳದ ಮುಖ್ಯಸ್ಥರಾಗಿ ಫೀಲ್ಡ್ ಮಾರ್ಷಲ್ ಹ್ಯೂಗೊ ಸ್ಪೆರ್ಲ್ ಇದ್ದಾರೆ. ಎಡ್ಮಿರಲ್ ರಾಂಕೆ, ಫ್ಲಸ್ಸರ್ ಜನರಲ್ ಸ್ಟ್ರಿಪೆಪನ್‌ಬರ್ಗ್ ಮೊದಲಾದವರು ಇತರ ನಾಯಕರಿದ್ದಾರೆ. ಇಷ್ಟಕೆಲವಲ್ಲಿಯೂ ಮಹಾಧೀರ ಯೋಧರು ಸೈನ್ಯ ನಡೆಯುತ್ತಿರುವರು. ಮಿತ್ರರು ಸೀನ್‌ನದಿ ಮುಖದಲ್ಲಿ ವಿನೂತನ ಮೂಲಕ ಕೊತ್ತಲೈಮೂನಿಕರನ್ನು ಇಳಿಸಿದರು. ನೌಕಾದಳದ ಮೂಲಕ ಸೇನೆಗಳು ಸರಬರಾಯಿಗಳೂ ಬಂದಿಳಿದವು. ಲಿಹಾರ್ವೆ ಬಂದರಿನ ಮೇಲೆ ಪ್ರಚಂಡ ಬಾಂಬುವೃಷ್ಟಿಯಾಗಿದೆ. ಮಿತ್ರರು ಹನ್ನೆರಡು ಪೈಲುಗಳಷ್ಟು ಒಳನುಗ್ಗಿದ್ದಾರೆ. ಅಲ್ಲಿ ಅತ್ಯಂತ ಉಗ್ರಕದನ ನಡೆಯುತ್ತಿದೆ.

'ಉತ್ತರ ಫ್ರಾನ್ಸಿನಲ್ಲಿ ಬಂದಿಳಿಯುವ ಕಾರ್ಯದಲ್ಲಿ 4000 ಹಡಗುಗಳಿಂದ ಮತ್ತು ಅನೇಕ ಸಾವಿರ ಚಿಕ್ಕ ದೋಣಿಗಳಿಂದ ಕೂಡಿದ ಭಯಂಕರ ನೌಕಾಗಡಣೆಯು ಭಾಗವಹಿಸಿತ್ತು. ಕರಾವಳಿಯಲ್ಲಿನ್ನಿದ್ದ ಜರ್ಮನ್ ತೋಪುಗಳ ಮೇಲೆ ಬಾಂಬುಗರೆದು ಅವರ ನಿದ್ದೆಗೆಡಿಸಲಾಗಿತ್ತು. ದಾರಿಯಲ್ಲಾ ನಾವು ಊಹಿಸಿದ್ದಷ್ಟು ಕಷ್ಟ ತೋರಲಿಲ್ಲ. ಅಮೇರಿಕಾ ಬ್ರಿಟಿಷರ ನೇತೃತ್ವದಲ್ಲಿ ಈಗ 11,000 ವಿಮಾನಗಳು ಕಾರ್ಯಾಚರಣೆಗೆ ತಯಾರಿವೆ' ಜೀಗೇಮು ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಹೇಳಿದ್ದಾರೆ.

ಮಿತ್ರರು ಯೋಗ್ಯ ಸ್ಥಳವನ್ನು ಹುಡುಕಿ ದಂಡಯಾತ್ರೆ ಕೈಕೊಂಡಿರುವರು. ಆ ಮಾರ್ಗವಾಗಿ ಬರ್ಲಿನಿಗೆ ಬಹು ಹತ್ತಿರದ ದಾರಿ. ಇವರು ಅಲ್ಲಿಂದ ಸ್ವಲ್ಪ ಮುಂದರಿದರೆ ಫ್ರಾನ್ಸಿನ ಜೀವಾಳ ನದ್ದು ರಾಜಧಾನಿಯೂದ ವ್ಯಾರಿಸ್ಸು ಬೊರೆಯುವದು. ಇದು ಜರ್ಮನಿಗೆ ಎಷ್ಟು ಹತ್ತಿರವ ದಾರಿಯೋ ಅಷ್ಟೇ ಮಿತ್ರರಿಗೆ ಗಂಡಾಂತಕಾರಿಯಾದುದು. ಎಂದೂ ಮನುಷ್ಯನು ಕಟ್ಟದಂಥಾ ಅಭೇದ್ಯ ಸೈನ್ಯಗೋಡೆಗಳು ಇಲ್ಲಿವೆ. ಯುದ್ಧದ ಆವಶ್ಯಕತೆಗಾಗಿ ಅತುರದಿಂದ ಕಟ್ಟಿದ ಗೋಡೆಗಳು ಇವಲ್ಲ. ಶಾಂತಿಯ ಕಾಲದಲ್ಲಿ ಕಟ್ಟಿದವು. ಇವನ್ನು ಮುರಿಯಲು ಸಾಧ್ಯವಿದೆಯೇ ಎಂಬುವನ್ನು ಪರೀಕ್ಷಿಸಿ ನಿರ್ಬಲವಾಗಿದ್ದಲ್ಲಿ ಬಲಗೊಳಿಸಲಾಗಿದೆ. ಜನರಲ್ ರೋಮೆಲ್ಲನು ಇಷ್ಟು ದಿನಗಳ ವರೆಗೆ ಮಾಡುತ್ತಿದ್ದ ಕಾರ್ಯ ಇದೇ ಎಂದೂ ಹೇಳಬಹುದು. ಹಿಟ್ಲರನ ಶಕ್ತಿ ಇರುವದೇ ಇಲ್ಲಿ. ಆದ್ದರಿಂದ ಇಲ್ಲಿ ಅತನನ್ನು ಸೋಲಿಸುವ ಕೆಲಸವು ಬಹು ಕಠಿಣವಾದುದೆಂಬುದರಲ್ಲಿ ಸಂಶಯವಿಲ್ಲ. ಆದರೆ ಮಿತ್ರರು ಇತರ ರಣರಂಗಗಳಲ್ಲಿ ಕಲಿತ ಜಾತವನ್ನು ಮುಂದಟ್ಟು ಮಾಡಿಕೊಂಡು ಅದಕ್ಕೆ ಸರಿಯಾದ ವಿಚಾರಿಡುಗಳನ್ನು ಹೊಂದಿಸಿಕೊಂಡು ಈ ಧಾಳಿ ಮಾಡಿದ್ದಾರೆ. ರಷ್ಯನರು ದ್ವಿತೀಯರಂಗ ತೆರೆಯಬೇಕೆಂದು ಕೂಗಿಕೊಂಡರೂ ತಕ್ಕ ಸಿದ್ಧತೆ ಆ ಕಾಲದಲ್ಲಿ ಇಲ್ಲದ ಕಾರಣ ಈ ಗಂಡಾಂತರಕಾರಕ ಯತ್ನದಲ್ಲಿ ಅವರು ಈವರೆಗೆ ಕೈಹಾಕಲಿಲ್ಲ. ಆದರೆ ಈಗ ಮಿತ್ರರು ಆ ಕಾರ್ಯ ಕೈಕೊಂಡಿದ್ದಾರೆ. ಈ ಧಾಳಿಯಿಂದ ಹಿಟ್ಲರನಿಗೆ ಗಾಬರಿಯೂಗಿರಲು ಸಾಕು. ರಕ್ಷಣಾಗೋಡೆಯನ್ನು ಆತನು ಸಿದ್ಧಪಡಿಸಿಟ್ಟಿದ್ದರೂ ತನ್ನ ಸೇನೆಗಳನ್ನು ಒಂದಲ್ಲ ನಾನಾಪ್ರೇಕ್ಷಗಳಲ್ಲಿ ಉಪಯೋಗಿಸಬೇಕಾಗಿ ಬಂದಿದೆ. ಮುಂದೆ ಈ ಕಠಿಣ ಪ್ರಸಂಗಗಳನ್ನು ಆತನು ಹೇಗೆ ಎದುರಿಸುವನೆಂಬುದನ್ನು ನೋಡಬೇಕಿದೆ.

ಇಟಲಿಯಲ್ಲಿ ಈ ವಾರ ಆಕ್ಸರಾಷ್ಟ್ರಗಳಿಗೆ ಬಹು ದೊಡ್ಡ ಪೆಟ್ಟು ಬಿದ್ದಿದೆ. ಇಟಲಿಯ ರಾಜಧಾನಿಯೂಪ ರೋಮ್ ಪಟ್ಟಣವು ಮಿತ್ರರ ವಶವಾಯಿತು. ಜನರಲ್ ಕೆಸರ್‌ಲಿಂಗನು ರೋಮನ್ನು ತೆರವಿಟ್ಟು ಪಟ್ಟಣವೆಂದು ಸಾರಿ ಹಿಂತೆಗೆದುಕೊಂಡಿರುವನು. ಮಿತ್ರರು ರೋಮ್‌ನಗರವನ್ನು ಧಾಟಿ ಜರ್ಮನರನ್ನು ಹಿಮ್ಮೆಟ್ಟಿಸಿ ನಡೆಬಡೆಯಲು ಮುಂದೆ ಸಾಗಿದರೂ ಜರ್ಮನರು ತೀವ್ರ ಪ್ರತಿಭಟನೆಯನ್ನು ಮಾಡದೆ ಖಾಲಿಯೇ ಹಿಂಜರಿಯುತ್ತಿರುವರು. ಮಿತ್ರರ ಪಂಚೆಯದಳವು ಟೈಬರ್‌ನದಿಯನ್ನು ಧಾಟಿ ಮುಂದೆ ಸಾಗುತ್ತಿದೆ. ರೋಮ್ ನಗರವನ್ನು ಯಾವ ನಷ್ಟವಿಲ್ಲದೆ ರಕ್ಷಿಸಲಿಕ್ಕಾಗಿ ತಾವು ಅಲ್ಲಿ ಯುದ್ಧ ನೂಡದೆ ಹಿಂತೆಗೆದುಕೊಂಡುದೆಂದು ಜರ್ಮನರು ಹೇಳುತ್ತಿದ್ದಾರೆ. ಇಟಲಿಯು ರಾಜರಾದ ವಿಕ್ಟರ್ ಇಮ್ಯಾನ್ಯುವೆಲ್‌ರವರು ತಮ್ಮ ರಾಜಾಧಿಕಾರವನ್ನು ತಮ್ಮ ಮಗ ಅಂಬರ್ಟೋ ರವರಿಗೆ ವರ್ಗಾಯಿಸಿರುವರು. ಇಟಲಿಯ ಆರ್ಮಿಯೇ ಯುದ್ಧದಲ್ಲಿ ಮಿತ್ರರ ಕಡೆಯಲ್ಲಿ 20,000 ಜನರೂ, ಜರ್ಮನರ 25000 ಜನರು ಸತ್ತರಂತೆ. ಆಂತು ಇಟಲಿಯಲ್ಲಿ ಮಿತ್ರರ ಕೈ ಮೇಲಾಗಿ ಜನರಲ್ ಅಲೆಕ್ಸಾಂಡರರು ಮುಂದೆ ನುಗ್ಗುತ್ತಿರುವರು.

'ಜಪಾನರಿಗೆ ಎಲ್ಲೆಲ್ಲೂ ನಷ್ಟವಾಗುತ್ತಿದೆ. ಅವರಿಗೆ ಪಲಾಯನ ಮಾರ್ಗಗಳು ಹಿಡಿತವಿಲ್ಲ. ಮಳೆಗಾಲದಲ್ಲಿ ಅವರು ಹೇಳದೆ ಕೇಳದೆ ಈ ಗಡಿಯಿಂದ ಹಿಂತೆಗೆದುಕೊಳ್ಳದಿದ್ದರೆ ಮಿತ್ರರ ಕೈಯಲ್ಲಿ ನಾಶವಾಗುವರು' ಎಂಬರ್ಥದ ಹೇಳಿಕೆಯೊಂದು ಮಿತ್ರಕೇಂದ್ರದಿಂದ ಹೊರಟಿದೆ. ಇದು ಕೇವಲ ಅಪಪ್ರಚಾರ ಯೂ ಆತಾವಚನವಲ್ಲದೆ ಬೇರಿಲ್ಲ. ಜಪಾನರು ಎಲ್ಲೆಲ್ಲಿ ಹೋರಾಡುತ್ತಿದ್ದಾರೊ ಅಲ್ಲಲ್ಲಿ ಮಳೆಗಾಲದಲ್ಲಿ ಉಪಯೋಗಿಸಬಹುದಾದ ಮಾರ್ಗಗಳು ಇವೆ. ಟಾಮು, ಟಿಡ್ಡಿಮ್ ಮತ್ತು

(6ನೇ ಪುಟ ನೋಡಿ)

ಹು ಪ್ರೀತಿಯಿಂದ ಬೆಳೆಸಿದಳು. ಪ್ರೇಮವೇ ಈ ಪರಿವರ್ತನೆಯ ಗುಟ್ಟು.

* * *

ಸೀತೆ, ದಮಯಂತಿ, ಚಂದ್ರಮತಿ, ಸಾವಿತ್ರಿಯರ ಪ್ರಸ್ಥಾನಕ್ಕೆ ಸೇರಿಲು ಕಸ್ತೂರಿಬಾ. ಗಾಂಧೀಜಿಯ ಜೀವನದಲ್ಲಿ ಬರ ನೂತನ ಸ್ಫೂರ್ತಿಯಾಗಿ ಕೆಲಸ ಮಾಡಿ, ಆಶ್ರಮದಲ್ಲೆಲ್ಲಾ ತನ್ನ ಶಾಂತಿಯನ್ನು ಪಸರಿಸಿ, ಲೋಕಕ್ಕೆಲ್ಲಾ ಮೂಗರಿ ಮಹಿಳೆಯಾಗಿ ಮೆರೆದು ಮೂರು ತಿಂಗಳ ಹಿಂದೆ ಇಹ-ಲೋಕಯಾತ್ರೆಯನ್ನು ಮಗಿಸಿದರು. ಆಗಾಖಾನ್ ಅರಮನೆ ಯಾತ್ರಾ ಸ್ಥಳವಾಯಿತು. ಅತಪನೀಯ ಹಿಂದೆಯೇ ಎರಡು ಸುಂದರವಾದ ಸಸೂಧಿಗಳು–ಒಂದು ಮಹದೇವ ದೇಸಾಯಿಯರ ದು, ಇನ್ನೊಂದು ಕಸ್ತೂರ್‌ಬಾರದು. ಗಾಂಧೀಜಿಯವರೆ ಸ್ವತಃ ಕೈಯಿಂದ ಶಂಖದ ಚಿಪ್ಪಿನಲ್ಲಿ ಕಸ್ತೂರಿಬಾನ ಸಮಾಧಿಯ ಮೇಲೆ 'ಹೇ ರಾಮ' ಎಂದು ಕೆತ್ತಿದ್ದಾರೆ. ಸ್ವಶಾಂತವಾದ ವಾತಾವರಣದಲ್ಲಿ ಆ ಧ್ವನಿ ಮೊಳಗುತ್ತಿದೆ. ಪ್ರತಿಯೊಬ್ಬ ಭಾರತೀಯನ ಹೃದಯನ ತಂತಿಯೂ ಇದಕ್ಕೆ ಉತ್ತರವಾಗಿ 'ಹರೇ–ರಾಮ' ಎಂದು ಮಿಟುತ್ತಿದೆ.

* * *

'ಕಸ್ತೂರಿಬಾ ಕೈಲಾಸವಾಸಿಯೂದರು; ಕಸ್ತೂರಿಬಾ ಚಿರಂಜೀವಿಯೂಗಿ ಬಾಳಲಿ.'

ನಮ್ಮ ತಾಯಿಯ ನೆನಪನ್ನು ಸಾರ್ಥಕ ಮಾಡುವುದು ಹೇಗೆ? ಮಾತಿನಿಂದಲ್ಲ, ಬರೀ ದುಡ್ಡಿನಿಂದಲ್ಲ, ಯಾವ ದಿವ್ಯ ಆದರ್ಶಕ್ಕಾಗಿ ಅವನು ಕಡೆಯ ಉಸಿರಾಡುವ ವರೆಗೂ ಹೋದಾಡಿದರೊ ಅದಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿ ಕೆಲಸ ಮಾಡುವೆವು ಎಂಬ ಭೀಷ್ಮಪ್ರತಿಜ್ಞೆಯಿಂದ ಈ ಹೃದಯ ಕಾಣಿಕೆಯನ್ನು ಸಲ್ಲಿಸಿ ಆಮೂಸವಲ್ಲವಂತೆ ದುಡಿಯಬೇಕು.

ನಾಳಿನ ಸ್ವತಂತ್ರರಾಷ್ಟ್ರ ಕಟ್ಟುವ ಕೆಲಸಕ್ಕೆ ಮಂಗಳಮೂರ್ತಿ ಕಸ್ತೂರಿಬಾರ ಆದರ್ಶಾವದವಿದೆ. ಹಿರಿಯರ ಹರಕೆ ಹೊತ್ತು ಕೆಲಸ ಮಾಡುವುದಲ್ಲವೆ ಕಿರಿಯರ ಭಾಗ್ಯ? 'ಕ. ವಿ.'

ಕೊಡಗು

ತಾ. ೯-೬-೧೯೪೪ನೇ ಶುಕ್ರವಾರ

ಗಾಂಧಿಯವರನ್ನು ಪುನಹ ಬಂಧಿಸುವರೇ ?

1942 ನೇ ಆಗಸ್ಟಿನಲ್ಲಿ ಕಾಂಗ್ರೆಸ್ಸನ್ನು ಮಾಡಿದ ತೀರ್ಮಾನವನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರವು ನುಡಿಯುತ್ತಿದೆ. ಮಹಾತ್ಮರು ಸ್ಪಷ್ಟ ವಚನಗಳಿಂದ 'ಆವೇ ನನ್ನೆ ಜೀವನದ ಉಸಿರು' ಎಂದಿದ್ದಾರೆ. ಈ ಗೊತ್ತುವಳಿಯು ದೇಶದಲ್ಲಾದ ಘಟನೆಗಳಿಗೆ ಕಾರಣವೆಂದು ಹೇಳಲಾಗುವದಿಲ್ಲ. ಮುಖಂಡರ ಅನಿರೀಕ್ಷಿತ ಬಂಧನವೇ ಅವ್ಯವಸ್ಥೆಗೆ ಕಾರಣವೆಂದು ಸಮಂಜಸ ಬುದ್ಧಿಯ ಜನರು ಹೇಳುತ್ತಿದ್ದಾರೆ. ಅಂದ ಮೇಲೆ ಈ ನಿರುಪದ್ರವಿ ಠರಾವನ್ನು ಹಿಂತೆಗೆದುಕೊಂಡರೇನೇ ದೇಶದ ಬಿಕ್ಕಟ್ಟಿನ ಬಗ್ಗೆ ಆಲೋಚಿಸಲಾಗುವದೆಂದು ಸರಕಾರವು ನುಡಿಯುವದರಲ್ಲಿ ಸರಕಾರದ ಮೊಂಡತನವಲ್ಲದೆ, ಸಮಂಜಸ ಕಾರಣಗಳು ಕಂಡುಬರುವದಿಲ್ಲ. ಗಾಂಧೀಜಿಯವರು ಠರಾವನ್ನು ಹಿಂತೆಗೆಯಲು ತಯಾರಿಲ್ಲ. ಯಾಕೆ? ವರ್ಕಿಂಗ್ ಸಮಿತಿಯ ಸದಸ್ಯರೊಡನೆ ಪರ್ಯಾಲೋಚಿಸದೆ ಹಿಂತೆಗೆಯುವದೂ ಸಾಧ್ಯವಿಲ್ಲ. ಈ ಪರಿಸ್ಥಿತಿಯಲ್ಲಿ ಮತ್ತೆ ಗಾಂಧಿಯವರನ್ನು ಖಾಯಿಲೆ ವಾಸಿಯಾದ ನಂತರ ದಸ್ತಗಿರಿ ಮಾಡುವರೇ ಎಂಬ ಸಂಶಯಬರುತ್ತೆ. ಹಾಗೆ ಬಂಧಿಸಿದ್ದಾದರೆ ದೇಶದಲ್ಲಿ ಉಂಟಾದ ಒಂದು ಬಗೆಯ ಅನುಕೂಲ ವಾತಾವರಣವನ್ನು ಹಾಳು ಮಾಡಿದಂತಾಗಿ, ದೇಶದಲ್ಲಿ ಪುನಹ ಕ್ಷೋಭೆಯುಂಟಾಗಬಹುದು. ಈ ರೀತಿ ಮಾಡದೆ ಕಾಂಗ್ರೆಸಿನ ಉಳಿದ ಮುಂದಾಳುಗಳನ್ನು ಬಿಟ್ಟು ಪರಿಸ್ಥಿತಿಯನ್ನು ಪೂರ್ಣ ವಿಮರ್ಶೆ ಮಾಡಲು ಮುಂದಾಳು ಗಳಿಗೆ ಅನುಮತಿಕೊಡಬೇಕಾದುದು ಸರಕಾರದ ಕರ್ತವ್ಯ.

'ಆಗಷ್ಟ್ ಠರಾವನ್ನು ಹಿಂತೆಗೆಯಲಾರೆ'

ಖಾಯಿಲೆ ಗುಣವಾದೊಡನೆ ಸರಕಾರವು ಪುನಹ ನನ್ನನ್ನು ಬಂಧಿಸಬಹುದು.

—ಜಯಕರರಿಗೆ ಮಹಾತ್ಮರ ಪತ್ರ—

ಪ್ರಿಯ ಡಾ. ಜಯಕರ್,

ದೇಶವು ನನ್ನಿಂದ ಅಪಾರವಾದುದನ್ನು ನಿರೀಕ್ಷಿಸುತ್ತಿದೆ. ಈ ಜಿಡುಗಡೆಯ ಬಗ್ಗೆ ನೀವು ಏನಭಿಪ್ರಾಯಪಡುವಿರೋ ನನಗೆ ತಿಳಿಯದು. ನನಗೆ ಇದರಿಂದ ಸುತರಾಂ ಸಂತೋಷವಿಲ್ಲ. ಬದಲು ನನಗೆ ನಾಚಿಗೆಯೂಗುತ್ತಿದೆ. ನಾನು ಖಾಯಿಲೆಯಲ್ಲಿ ಬೀಳಬಾರದಿತ್ತು. ಖಾಯಿಲೆ ಬೀಳಬಾರದೆಂದು ನಾನು ಪ್ರಯತ್ನಿಸಿದೆ. ಆದರೆ ಜಯಶೀಲನಾಗಲಾರದಾದೆ. ಈ ಗಿನ ನನ್ನ ದುರ್ಬಲತೆಯಿಂದ ನಾನು ಗುಣ ಹೊಂದಿದೊಡನೆ ಅವರು ನನ್ನನ್ನು ದಸ್ತಗಿರಿ ಮಾಡುವರೆಂದು ನನಗನಿಸುತ್ತದೆ. ಅವರು ನನ್ನನ್ನು ದಸ್ತಗಿರಿ ಮಾಡದಿದ್ದರೆ ನಾನೇನು ಮಾಡಬಲ್ಲೆ ?

ಆಗಸ್ಟ್ ಠರಾವನ್ನು ನಾನು ಹಿಂತೆಗೆದುಕೊಳ್ಳಲಾರೆ. ನೀವು ಹೇಳುವಂತೆ ಅದು ನಿರುಪದ್ರವಿಯೂಗಿದೆ. ಆದರೆ ಮಟ್ಟಿಗೆ ನೀವು ಭಿನ್ನಾಭಿಪ್ರಾಯನಿರುವನವರಾಗಿರಬಹುದು. ಆದರೆ ಅದು ನನ್ನ ಜೀವನದ ಉಸಿರಾಗಿದೆ. ತಾ. 29ರ ವರೆಗೆ ಮೌನದಿಂದಿರುವೆನು. ಈ ಮಧ್ಯೆ ವ್ಯಾರೆಲಾಲರನ್ನು ಕಳುಹಿಸಲೇ ? ಅದು ನಿಮ್ಮ ಆರೋಗ್ಯದ ಮೇಲೆ ನಿಂತಿದೆ. ನೀವು ಆರೋಗ್ಯದಿಂದಿಲ್ಲವೆಂದು ನನಗೆ ತಿಳಿದಿದೆ.

ನಿಮ್ಮವನು,
ಎಂ. ಕೆ. ಗಾಂಧಿ.

ವಾರ್ತಾತರಂಗ.

ಒಳದೇಶ.

ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದ, ಸಿದ್ದಾಪುರದಲ್ಲಿರುವ ಪಿ. ಡಬ್ಲ್ಯು. ಡಿ. ಇಲಾಖೆಯ ಓವರ್‌ಸಿಯರ್ ಶ್ರೀ. ಬಿ. ಎಸ್. ರಘುನಾಥಯ್ಯನವರ ಪುತ್ರಿ ಶ್ರೀಮತಿ ಬಿ. ಆರ್. ಕಾವೇರಮ್ಮನವರು ಕಳೆದ ಬಿ. ಎ. (ಆನರ್ಸ್) ಪರೀಕ್ಷೆಯಲ್ಲಿ ತೇರ್ಗಡೆಯೂಗಿರುವರು. ಕೊಡಗಿನ ಪ್ರಮುಖ ಬ್ರಾಹ್ಮಣರ ಮಹಿಳೆಯರಲ್ಲಿ ಬಿ. ಎ. (ಆನರ್ಸ್) ವರೆಗೆ ವ್ಯಾಸಂಗಮಾಡಿ ತೇರ್ಗಡೆಯೂಮವರು ಇದೇ ಪ್ರಥಮ.

ಕೊಡಗಿನಲ್ಲಿ ಮಳೆಗಾಲವು ಪ್ರಾರಂಭವಾದಂತೆ ತೋರುತ್ತಿದೆ; ಆದರೆ ದನಗಳ ಕಾಯಿಲೆಯು ಹಲವು ಕಡೆ ಹರಡಿದೆಯೆಂದು ಸುದ್ದಿ.

ಮಡಿಕೇರಿ.

ತಾ. 5-6-44 ರಲ್ಲಿ ಇಲ್ಲಿ ಮಧ್ಯಾಹ್ನ 2-20 ಗಂಟೆಗೆ ಸ್ವಲ್ಪ ಭೂಕಂಪವಾಯಿತು.

ಶ್ರೀ. ಚೆನ್ನಿರ ಕಾಶಾಲಪ್ಪನವರು ಈ ತಾ. 1 ರಲ್ಲಿ ಮದ್ರಾಸು ಪ್ರಾಂತ್ಯಕ್ಕೆ ವರ್ಗವಾಗಿ ವಾಪಸು ಹೋದ ಶ್ರೀ. ಯಂ. ಎಸ್. ರಂಗಸಾಮಿ ಐಯ್ಯರವರಿಂದ ಕೊಡಗಿನ ಚೀಫ್ ಫಾರೆಸ್ಟ್ ಆಫೀಸರ ಹುದ್ದೆಯ ಚಾರ್ಜನ್ನು ವಹಿಸಿಕೊಂಡರು.

ಪ್ಲಾಂಟರು ಶ್ರೀ. ಎಸ್. ಬಸಪ್ಪನವರು ಕೊಡಗು ಎಜ್ಜೆಟ್ಟಿಕ್ ಎಸೋಸಿಯೇಶನಿನವರ ಆಶ್ರಯದಲ್ಲಿ ತಮ್ಮ ಮಗ ಚೇಟ್ ಶಂಕರಪ್ಪನ ಹೆಸರಿನಲ್ಲಿ ಶಾಲ್ಟೆಂಡಿನ ಪಂದ್ಯಾಂಟ ನಪೆಸಲಿಕ್ಕಾಗಿ ರೂ. 250—ಬೆಲೆ ಬಾಳುವ ಬೆಳ್ಳಿಯ ಕಪ್ಪನ್ನು ಕೊಟ್ಟಿರುವರು. ಅಲ್ಲದೆ ಗೆದ್ದವರಿಗೆ ಕೊಡಲು 11 ಮೆಡಲುಗಳನ್ನು ಕೊಟ್ಟಿರುವರು.

ಸ್ಕೂಲ್ ಫೈನಲ್ ಪರೀಕ್ಷೆ ಫಲಿತಾಂಶ.

ಮಡಿಕೇರಿ ಹೈಸ್ಕೂಲು 40 ರಲ್ಲಿ 31.

ಶ್ರೀಗಳಾದ ಮಂಡಿರ ಸಿ. ಐಯ್ಯಣ್ಣ, ವಕ್ಕಲಿಗರ ಸುಬ್ಬಯ್ಯ, ಕೊಕ್ಕಲೆರ ಟಿ. ಬೋಪಯ್ಯ, ಘಾಟೆ ಶತಗೋಪಾಚಾರಿ ಗರುಮಲಾಚಾರಿ, ಎಂ. ಎಸ್. ಚಂದ್ರಶೇಖರ, ರಬೀಂದ್ರನಾಥ ಪೂಂಜ, ಕೆ. ಎಂ. ಮೊಚಯ್ಯ, ಎಸ್. ಎಂ. ಬಾಬು, ಕೆ. ಎ. ಐಯ್ಯಪ್ಪ, ಇ. ಎಸ್. ಕೃಷ್ಣಪ್ಪ, ಸಿ. ಎಸ್. ಚಂಗಪ್ಪ, ಎಸ್. ಪಿ. ಗಣೇಶ್, ಇ. ಕೆ. ಈಶ್ವರಪ್ಪ, ಕೆ. ಕೆ. ನಂಜಿಪ್ಪ, ಟಿ. ಐ. ಸುಬ್ಬಯ್ಯ, ಕೆ. ಸಿ. ಅಪ್ಪಯ್ಯ, ಪಿ. ಪಿ. ಐಯಣ್ಣ, ಎಂ. ಪಿ. ಮುತ್ತಣ್ಣ, ಬಿ. ಎಸ್. ರಾಜಪ್ಪ, ಟಿ. ಡಿ. ತಮ್ಮಯ್ಯ, ಸಿ. ಎಂ. ಉತ್ತಯ್ಯ, ಸಿ. ಬಿ. ಶಾಂತಪ್ಪ, ಪಿ. ಸಿ. ಸೋಮಯ್ಯ, ಯು. ಕೆ. ಚಂದ್ರಶೇಖರ, ಗುಡ್ಡಾಂಡ ಸೋಮಣ್ಣ, ಎಂ. ಎಸ್. ಚಂದ್ರಶೇಕರ, ಎಂ. ಎ. ಮೊದಪ್ಪ, ಎನ್. ಕೆ. ಮುತ್ತಪ್ಪ, ಎನ್. ಎಂ. ಬಾಲಕೃಷ್ಣ ಮತ್ತು ಶ್ರೀಮತಿಯರಾದ ಬಿದ್ದಂಡ ಸೀತಾದೇವಿ, ಪಟ್ಟಡ ಯು. ಸರೋಜ ಇವರುಗಳು. ಖಾಸಗಿಯಾಗಿ ಪರೀಕ್ಷೆಗೆ ಕೂತ ಶ್ರೀ. ಡಬ್ಲ್ಯು. ಎಂ. ಕರುಂಬಯ್ಯ ಮತ್ತು ಕುಟ್ಟೇಟೀರ ಪೂವಯ್ಯ ಇವರುಗಳೂ ತೇರ್ಗಡೆಯೂಗಿರುವರು.

ಮಡಿಕೇರಿ ಹುಡುಗಿಯರ ಹೈಸ್ಕೂಲು 27 ರಲ್ಲಿ 24.

ಶ್ರೀಮತಿಯರಾದ ಎಚ್. ಟಿ. ಲಕ್ಷ್ಮಿ, ಎನ್. ಎ. ಸೀತಮ್ಮ, ಪಿ. ಎಂ. ಕಾವೇರಿ, ಕೆ. ಎಸ್. ಕಾವಮ್ಮ, ಎಂ. ಎಸ್. ಧರಣಿ, ಎ. ಬಿ. ಸೀತಾ, ಬಿ. ಸಿ. ಮುತ್ತಮ್ಮ, ಎನ್. ಪಿ. ತಾಂತಿ, ಬಿ. ಕೆ. ಪಾರ್ವತಿ, ಪಿ. ಎಂ. ಪೂವಮ್ಮ, ಎ. ಎಸ್. ಮೂಲತಿ, ಸಿ. ಎಂ. ಮುತ್ತಮ್ಮ, ಎನ್. ಯು. ಅಕ್ಕಮ್ಮ, ಬಿ. ಜೆ. ಸೀತಮ್ಮ, ಪಿ. ಟಿ. ಸೀತಾ, ಗ್ರೇಸಿ ಲೋಪೆಸ್, ಕೆ. ಎ. ಅಕ್ಕಮ್ಮ, ಎ. ಎಂ. ಕಾವೇರಿ, ಸಿ. ಕೆ. ಕನಿಕೆ, ಸಿ. ಜಿ. ಬೊಳ್ಳಮ್ಮ, ಕೆ. ಎಂ. ಅಚ್ಚಮ್ಮ, ಯು. ಎ. ಚಿಣ್ಣಮ್ಮ, ಬಿ. ಸಿ. ಪೂವಮ್ಮ ಮತ್ತು ಕೆ. ಎಂ. ಶೀಲ ಇವರುಗಳು ಉತ್ತೀರ್ಣರಾಗಿರುವರು.

ವೀರಾಜಪೇಟೆ 46 ರಲ್ಲಿ 22.

ಶ್ರೀಗಳಾದ ಪುಚ್ಚಿಮಾಡ ಎನ್. ಬಿದ್ದಪ್ಪ, ಪಾಲೇಕಂಡ ಪಿ. ಐಯ್ಯಪ್ಪ, ಡಿ. ಕೆ. ನಾರಾಯಣ, ಬೊಪ್ಪಂಡ ಎನ್. ಕಾಳಪ್ಪ, ಕಡೇಮಾಡ ಎ. ಗಣಪತಿ, ಬಿದ್ದಂಡ ಎ. ಅಚ್ಚಯ್ಯ, ಕುಪ್ಪಂಡ ಸಿ. ಐಯ್ಯಣ್ಣ, ಐಚೆಟ್ಟಿರ ಯಂ. ಐಯ್ಯಪ್ಪ, ವಕ್ಕಲಿಗರ ಎಸ್. ರಾಮಯ್ಯ, ಕೆ. ಎನ್. ತಿಪ್ಪರಾಮ, ಚೇಂದಂಡ ಟಿ. ಅಪ್ಪಯ್ಯ, ಪಣ್ಣಂಡ ಕೆ. ಕುಶಾಲಪ್ಪ, ಎಸ್. ಎನ್.

ತಿವನಂಜಪ್ಪ, ಪಿ. ಕೆ. ಪರಮೇಶ್ವರ, ಪುಲಿಯಂಡ ಡಬ್ಬ್ಯೂ. ಗಣಪತಿ, ಬೊವ್ವೇರಿಯಂಡ ಸಿ. ನಾಣಯ್ಯ, ಮೂಡೇರ ಬೋಪಯ್ಯ, ಪೊನ್ನಕಚ್ಚಿರ ಜಿ. ನಂಜಪ್ಪ, ಕಾಡ್ಯನೂಡ ಕೆ. ಪೊನ್ನಪ್ಪ, ಕರ್ನಂಡ ಕೆ. ಮಂದಪ್ಪ, ಕುಪ್ಪಂಡ ಎನ್. ಕುಟ್ಟಯ್ಯ, ಇಟ್ಟಿರ ಎನ್. ಅಪ್ಪಾಜಿ. ಇವರುಗಳು ಪಾಸಾಗಿದ್ದಾರೆ.

ಪೊನ್ನಂಪೇಟೆ.

ಇಲ್ಲಿ ಹೈಸ್ಕೂಲಿನ ಪ್ರಥಮ ಹೆಜ್ಜೆಯಾಗಿ 4 ನೇ ಫಾರಂನ್ನು ತಾ. 2-6-44 ನೇ ಶುಕ್ರವಾರ ದಿನ ಸ್ವಾಮಿ ವಿಶ್ವಂಬರಾನಂದಜೀಯವರ ಅಧ್ಯಕ್ಷತೆಯಲ್ಲಿ ತೆರೆಯಲಾಗಿದೆ. ಆ ದಿನ ಹದಿನಾಲ್ಕು ವಿದ್ಯಾರ್ಥಿಗಳಿದ್ದರು. ಈ ಹೈಸ್ಕೂಲನ್ನು ಶ್ರೀ ರಾಮಕೃಷ್ಣಾಶ್ರಮದವರಿಗೆ ಪಹಿಸಿ ಅವರ ಆಶ್ರಯದಲ್ಲಿ ನಡೆಸುವಂತೆಯೂ, ಇದಕ್ಕಾಗಿ ತಕ್ಕ ಹುಕುಂ ತರಲು ಸ್ವಾಮಿ ವಿಶ್ವಂಬರಾನಂದಜೀಯವರು ಮತ್ತು ಶ್ರೀ. ಪಿ. ಜಿ. ಮುಸ್ಸಣ್ಣಯ್ಯನವರು ಶ್ರೀ ರಾಮಕೃಷ್ಣಾಶ್ರಮದ ಮುಖ್ಯ ಕೇಂದ್ರವಾದ ಕಲ್ಕತ್ತಾದ ಬೇಲೂರಿಗೆ ಹೋಗಿರುವರು.

ನಿಧನವಾರ್ತೆ.

ಪೊನ್ನೆಬೆಟ್ಟದ ಶ್ರೀ. ಕೂತಂಡ ಜೋಯಪ್ಪನವರು ಈ ತಾ. 8 ರಲ್ಲಿ ವೀರಾಜಪೇಟೆ ಆಸ್ಪತ್ರೆಯಲ್ಲಿ ನ್ಯುಕರಾದರೆಂದು ತಿಳಿಯುತ್ತೇನೆ.

ಕಸ್ತೂರಿಬಾ ನಿಧಿ.

ಧನ ಸಹಾಯ ನೂಡಿದವರ ಹೆಸರು.

ಮಡಿಕೇರಿ.

ಶ್ರೀ ಕೊಂಗೆಟ್ಟಿರ
ಪಿ. ಅಪ್ಪಯ್ಯನವರು 125
,, ಸಿ. ಎನ್. ನೆಂಕಪ್ಪಯ್ಯ ,, 50
,, ಸಿ. ಎಂ. ರಾಮರಾವ್ ,, 25
,, ಎನ್. ಆರ್. ಗೋಪಾಲಕೃಷ್ಣ ,, 25
,, ಕೆ. ಶಕುನಯ್ಯಟಿಟ್ಟಿರವರು 25
ಕೊಡಂದೆರ ಮಂದಣ್ಣ ನವರ ಮಕ್ಕಳು 15
ಮಿಸ್ಟರ್ & ಮಿಸೆಸ್ ಉದಿಯೂಂಡ ಅಣ್ಣಯ್ಯನವರು 10
ಶ್ರೀ ಪಿ. ಎಸ್. ಗಣಪತಿ ,, 10 (ನೀಲಗಿರಿ)
ಶ್ರೀಮತಿ ಟಿ. ದೇಚಮ್ಮ ,, 10

ರೂಪಾಯಿ ಫರಂತೆ ಕೊಟ್ಟವರು–(ಮಡಿಕೇರಿ) ಶ್ರೀ ಗಳಾದ ಆಜ್ಜಮಾಡ ಚಿಂಗಪ್ಪ, ಮತ್ತಂಡ ಬಿದ್ದಯ್ಯ, ಮುಂಚಾಂದಿರ ವಯ್ಯಪ್ಪ, ಬಲ್ಲಚಂಡ ಎ. ಬೆಳ್ಳಪ್ಪ. ವೀರಾಜಪೇಟೆ–ಕೂತಂಡ ಜಿ. ಮಾಚಯ್ಯ, ಸೋಮಯಂಡ ಎನ್. ಮೇದಪ್ಪ, ಬಲ್ಲುಡ ನಂಜಪ್ಪ, ಕೆ. ಎಂ. ಐಯ್ಯಣ್ಣ (ನೀಲಗಿರಿ), ಬಿ. ಜಿ. ಕಾರ್ಯಪ್ಪ (ಕೂನೂರು), ಕೊಳ್ಳಂಡ ಪೂವಪ್ಪ (ಶೈಕೇರಿ), ಮಿಸೆಸ್ ದೇವಮ್ಮ ಗಣಪಯ್ಯ (ಮೂಡಾಪುರ) ಇವರುಗಳು.

ರೂ. 3ರಂತೆ ಕೊಟ್ಟವರು–ಶ್ರೀ ತಿವಾಚಾರದ ಬಸಪ್ಪ(ಮೂಡಾಪುರ) ಮತ್ತು ಶ್ರೀ ಕೆ. ಬಿ. ಐಮಡಿಕುಟ್ಟಿ ಇವರುಗಳು.

ರೂ. 2ರಂತೆ ಕೊಟ್ಟವರು–(ಮೂಡಾಪುರ) ಶ್ರೀ ಗಗಳಾದ ನೆಲ್ಲಿರ ನಂಜಪ್ಪ ಮತ್ತು ಪಾಸುದನಂಜಪ್ಪ, (ವೀರಾಜಪೇಟೆ) ನಾಣಮಂಡ ಸುಬ್ಬಯ್ಯ, ಐಚೆಟ್ಟಿರ ಕೆ. ಚಂಗಪ್ಪ, ಕೊಂಗಂಡ ಸಿ. ಸೋಮಯ್ಯ, (ಮಡಿಕೇರಿ) ಸಿ. ಕೆ. ಮುತ್ತಣ್ಣ ಇವರುಗಳು.

ರೂ. 1ರಂತೆ ಕೊಟ್ಟವರು–ಶ್ರೀ ಗಳಾದ ಮುಕ್ಕಾಟಿರ ಪೊನ್ನಪ್ಪ, ಮೂಕಂಡ ಪೂವಯ್ಯ, ಪೊನ್ನಕಚ್ಚಿರ ಐಯ್ಯಪ್ಪ, ಮುಕ್ಕಾಟಿರ ಸುಬ್ಬಯ್ಯ, ನಾಯಕಂಡ ಕರುಂಬಯ್ಯ, ಮುಕ್ಕಾಟಿರ ಕಾವೇರಪ್ಪ, ಕೆ. ಗಣಪತ್ತಿ, ಬಿ. ಎನ್. ನಾರಾಯಣ ಭಟ್ಟ, ಜೆ. ರಾವ್, ಕೆ. ಕುಟ್ಟಪ್ಪ, ಕೆ. ಡಿ. ಕುಟ್ಟಪ್ಪ, ಎನ್. ಎಂ. ಮೇದಪ್ಪ, ಸಿ. ಎನ್. ಉಚ್ಚಪ್ಪ, ಎಲ್. ಡಿ. ಸಿಕೇರ, ಎನ್. ಸಿ. ಕೃಷ್ಣಪ್ಪ, ಕೆ. ಎಂ. ಅಬು ಬೋಕರ್, ಸಿ. ಜಂಗಪ್ಪ–ಇವರುಗಳು.

ಈ ವರೆಗೆ ಒಟ್ಟು ರೂ. 2,156 ಜಮೆಯಾಗಿದೆ.

ಮೂರಾಟಕ್ಕಿದೆ.

ನನ್ನ ಹೆಸರಿನಲ್ಲಿ ಜಮೂಬಂದಿ ಇದ್ದು ನನ್ನ ಅನುಭವ ಸ್ವಾಧೀನದಲ್ಲಿರುವ ಶ್ರೀ ಮಂಗಲಾಡಿನ ಕೋತೂರು ಗ್ರಾಮದ 525 ಬಟ್ಟಿ ಒಳ್ಳೆ ನೀರಾವರಿ ಭೂಮಿ, ಅಂದಾಜು 30 ಎಕ್ರೆ ಉತ್ತಮ ಜಾಗ, ವಾಸಕ್ಕೆ ಹಂಚಿಹಾಕಿದ ಮನೆಯೂ ಮತ್ತು ಅದೇ ಗ್ರಾಮದಲ್ಲಿ ಬೇರೆ 300 ಬಟ್ಟಿ ನೀರಾವರಿ ಉತ್ತಮ ಭೂಮಿ ಮತ್ತು ಕಾಫಿ ಕಿತ್ತಳೆ ವ್ಯವಸಾಯಕ್ಕೆ ಅನುಕೂಲವಾದ ಈ ಮೊದಲು ಯಾವ ವ್ಯವಸಾಯವನ್ನೂ ಮಾಡದ ಫಲವತ್ತಾದ 17 ಎಕ್ರೆ ಜಾಗವೂ ಮಾರಾಟಕ್ಕಿದೆ. ಈ ಎರಡು ಸ್ವತ್ತುಗಳನ್ನು ಒಟ್ಟಾಗಿಯೂಗಲಿ, ಪ್ರತ್ಯೇಕ ಪ್ರತ್ಯೇಕವಾಗಿಯಾಗಲೀ ಮಾರಾಟಮಾಡಲಾಗುವುದು. ಖರೀದಿದಾರರು ಹೆಚ್ಚಿನ ವಿವರಗಳಿಗೆ ಈ ಅಡ್ರೆಸಿಗೆ ಬರೆದು ತಿಳಿದುಕೊಳ್ಳಬಹುದು.

ಕೊಡಂಡೇರ ಎಂ. ಕಾರ್ಯಪ್ಪ,
3–1 ಲಕ್ಕುಂದತೋಟ,
ಕುಟ್ಟ.

The Coorg Central Co-operative Bank, Ltd., Mercara, Dated 8-6-1944.

WANTED.

30 candidates (3 or 4 seats reserved for ladies) who are natives of Coorg of S. S. L. C. or equivalent qualification (minimum) for training in Co-operation and allied subjects for 7 months at Mercara from 10th July 1944 under the directions of the Registrar of Co-operative Societies, Coorg. Applications in candidats' own writing together with credentials and certificates in original should be sent up so as to reach not later than 25-6-1944. All candidates should come up for an interview at their cost to the Registrar's Office on 5-7-1944 at 11 A. M.

15 selected candidates will be given a stipend of Rs. 10/-per mensum under cerhain conditons.

For further particulars apply to this Office or the Registrar of Co-operative Societies, Coorg.

I. P. Cariappa,
President,
Central Bank.

—೦೦—

ನನಗೂ ದಮ್ಮು ಇತ್ತು ಆದರೆ ಈಗ ಅದರ ನೆನಪು ಸಹ ಇಲ್ಲ.

ದಮ್ಮು ಒಮ್ಮೆಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳನ್ನು ತೆಕ್ಕೊಳ್ಳುತ್ತಾರೆ. ಆದರಿಂದ ತಾತ್ಕಾಲಿಕ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. 'ಪುರೋಹಿತ ಶ್ವಾಸ ಹಾರಿ'ಯು ಮೂತ್ರ ದಮ್ಮಿಗೆ ಉತ್ಕೃಷ್ಟ ಔಷಧಿಯಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೋಡಿಸದೆ ಬೇರು ಸಹಿತ ಕಿತ್ತೊಗೆದು ಗುಣ ಮಾಡುತ್ತದೆ. ಅದನ್ನು ತೆಗೆದುಕೊಳ್ಳ ಬೇಕಾದ ಕೂಡಲೇ ಕೆಮ್ಮು ನಿಲ್ಲುವದು. ಔಷಧದ ಕೊಂಪರೆ ಉಳಿಯುವುದಿಲ್ಲ. ಪಥ್ಯದ ಕ್ರಮೆ ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಷ್ಟಿಸ ಗಟ್ಟಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವುದು.

ರೂ. 3-6-0, ರೂ. 5-12-0, ರೂ. 10-0-0ಗಳಿಗೆ ಸಣ್ಣ ಸಣ್ಣ ಬಾಟ್ಲೆಗಳು ಎಲ್ಲಾ ಕಡೆಗಳಲ್ಲೂ ಸಿಗುತ್ತವೆ.

ಪತ್ರ:– ಡಾ. ಪುರೋಹಿತ ಫಾರ್ಮಸಿ,
ಕೊಲ್ಲಾಪುರ.

Madras Stockists,
M/S Appah & Co
China Bazar,
Madras.

(3ನೇ ಪುಟದಿಂದ ಸಾಗಿದ್ದು.)

ಇಂಫಾಲ್ ಈ ಕಡೆಯ ರಸ್ತೆಗಳು ಉತ್ತಮವಾಗಿವೆ. ಆದ್ದರಿಂದ ಉತ್ತರ ಬರ್ಮಾದಲ್ಲಿಯೂಗಲೀ, ಕೋಹಿಮಾ ಗಡಿಯಲ್ಲಾಗಲೀ ರಸ್ತೆಯ ತೊಂದರೆಯಿಲ್ಲ. ಮಳೆಗಾಲದಲ್ಲಿ ಜಪಾನರಿಗೆ ಆಹಾರಪದಾರ್ಥ ವಿಲ್ಲದಾಗುತ್ತದೆಯೆಂದು ಮತ್ತೊಂದು ಮೂಲ. ಮಿತ್ರರು ಪ್ರಚಾರಮಾಡುತ್ತಿರುವ ವಾರ್ತೆಯ ಪ್ರಕಾರ ಅಲ್ಲಲ್ಲಿ ಮಿತ್ರದಳಗಳು ಜಪಾನರ ಆಹಾರ ಸಂಗ್ರಹಣೆಮಾಡಿದ ಠಾಣೆಗಳನ್ನು ನಾಶಪಡಿಸಿದ್ದು ತಿಳಿದುಬಂದಿದೆ. ಜಪಾನರು ಮುಂದಾಲೋಚನೆಯಿಂದ ಆಹಾರ ಸಂಗ್ರಹಿಸಿರುವರೆಂಬುದು ಇವರಿಂದಲೇ ವ್ಯಕ್ತವಾಗುತ್ತದೆ. ಮಿತ್ರರು ಜಪಾನರೊಡನೆ ಬಹು ಕಠಿಣ ರೀತಿಯ ಯುದ್ಧ ಮಾಡಬೇಕಿದೆ. ಹಾಗಿರುವಾಗ ಜಪಾನರಲ್ಲಿ ಶಕ್ತಿಯಿಲ್ಲವೆಂದು ಪ್ರಚಾರಮಾಡಿ ಜಪಾನರನ್ನು ಸೋಲಿಸಲು ಮಿತ್ರಸೇನೆಗಳು ಮಾಡಿದ ಧೀರ ಪ್ರಯತ್ನದ ಕಥೆಯನ್ನು ಕಡಿಮೆ ಮಾಡಲೇಕೆ?

ಉತ್ತರ ಬರ್ಮಾದ ಮಿಟ್ಕಿಯಾನ ಕ್ಕಾಗಿ ಬಹು ಉಗ್ರ ಕದನ ಇನ್ನೂ ನಡೆದಿದೆ. ಮಿಟ್ಕಿಯಾನದ ದಕ್ಷಿಣ ಭಾಗದಲ್ಲೂ ಪ್ರಬಲವಾದ ಕದನ ನಡೆಯುತ್ತಾ ಇದೆ. ಇದರ ತೀರ್ಮಾನ ಇನ್ನೂ ಆಗಿಲ್ಲ. ಕೋಹಿಮಾ ಗಡಿಯಲ್ಲಿ ಮಿತ್ರರು ಕೆಲವೊಂದು ವಿಜಯ ಸಂಪಾದಿಸಿರುವರೆಂದು ವರದಿಯಾಗಿದೆ. ಆದರೆ ನಾಗಾ ಬೆಟ್ಟದಲ್ಲಿಯ ಜಪಾನರ ಹಿಡಿತ ಬಿಟ್ಟಿರುವುದಿಲ್ಲ. ಇಂಫಾಲಿನ ಮೇಲೆ ಜಪಾನರ ಅತ್ಯುಗ್ರ ಧಾಳಿ ನಡೆಯುತ್ತಿದೆ. ಮಿತ್ರರು ಬಿಗಿಹಿಡಿದು ಜಪಾನರನ್ನು ಎದುರಿಸಿದ್ದಾರೆ. ಬಿಶನ್‌ಪುರ, ಪಾಲೆಲ್ ರಸ್ತೆಯಲ್ಲಿ ಅತಿ ಘೋರ ಕದನವಾಗುತ್ತಿದೆ. ಜಪಾನರು ಹೊಸ ಸೇನೆಗಳನ್ನು ತಂದು ಈ ಭಾಗದಲ್ಲಿ ಹೋರಾಡುತ್ತಿದ್ದಾರೆ. ಬರ್ಮಾ ಗಡಿಯಲ್ಲಿ ಮಳೆಗಾಲ ಪ್ರಾರಂಭವಾಗಿದೆ. ಆದರೂ ಯುದ್ಧ ಹಿಂದಿಗಿಂತಾ ಬಿರುಸಿನಿಂದ ನಡೆಯುತ್ತಿದೆ. ಇಕ್ಕಟ್ಟಿನಲ್ಲಿರೂ ಆತಾಯುತ್ತರಾಗಿ ಮಹೋಗ್ರ ಕದನದಲ್ಲಿ ತೊಡಗಿದ್ದಾರೆ.

—೦೦—

ನವಯೌವನ

ಕೊಬ್ಬು ಧಾತುಪುಷ್ಟಿಯನ್ನುಂಟುಮಾಡಿ, ವಿವಾಹಿತರಿಗೆ ಸಂತೃಪ್ತಿಯನ್ನೂ, ಪರಮಾನಂದವನ್ನೂ ಕೊಡಲು ಮದನಮಂಜರಿ ಪೂತ್ರೈಗಳು ದಿವ್ಯೌಷಧ.

ಡಬ್ಬಿ ಒಂದಕ್ಕೆ 1 ರೂಪಾಯಿ.

ಮದನಮಂಜರಿ ಫಾರ್ಮಸಿ,
184, ಬೈಕಾಖಾನಾರ್ ರೋಡ್,
ಮದ್ರಾಸ್.

ಮಡಿಕೇರಿ—ಡಾ. ಕೆ. ಜೆ. ಕರುಂಬಯ್ಯ,
ಸೋಮವಾರಪೇಟೆ—ಡಾ. ಜಿ. ಎ. ಐಯ್ಯ,
ವೀರಾಜಪೇಟೆ—ಡಾ. ಕೆ. ರಾಮಕೃಷ್ಣರಾವ್.

"ಟ್ರಾಪಿಕಲ್"

ಕಂಪೆನಿಯಲ್ಲಿ ನಿಮ್ಮ ಮೂಡುವದೇ

ಯೋಗ್ಯವೆಂದು ನಿಮ್ಮ 1944ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಪತ್ರಾಲ್ಯ ರೂ. 91,99,125.

ಹಿಂದೂದೇಶದ ಹಿರಿಯಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ:—ಹೊಸ ದಿಲ್ಲಿ.

ಹೆಚ್ಚಿನ ಮಾಹಿತಿಗೆ ಈ ಪತ್ರಿಗೆ ಬರೆಯಿರಿ:—

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

22)

ದಿ ಬಾಂಬೆ ಮ್ಯೂಚುವಲ್ ಲೈಫ್ ಅಷ್ಯೂರೆನ್ಸು ಸೊಸೈಟಿ, ಲಿಮಿಟೆಡ್.

ಸ್ಥಾಪಿತ ವರ್ಷ—೧೮೭೧) (ಹೆಡ್ ಆಫೀಸ್—ಬೋಂಬೆ.

ಎಸೆಟ್ಸ್—೩.೧೬ ಕೋಟಿ. ಲೈಫ್ ಫಂಡು—೨.೯೫ ಕೋಟಿ.

ಪರಸ್ಪರ ಸಹಾಯಕ ಸಂಘ:—ಎಲ್ಲಾ ವಿಮೇದಾರರಿಗೂ ಸಮಾನಾಧಿಕಾರ. ಲಾಭದ ವಾಲುಗಾರರಾಗಿರತಕ್ಕ ಭಾಗೆದಾರರಿಲ್ಲ. ಆಕಸ್ಮಿಕ ಅಪಾಯದಿಂದಾಗಲೀ ಯಾ ಬೇನೆಯಿಂದಾಗಲಿ ಜೀವಾವಧಿ ಅಸಮರ್ಥನಾದರೆ ವಿಮೇದಾರನಿಗೆ ಮುಂದಿನ ಪೀಮಿಯಂ ರಿಯಾಯಿತಿ. ಅಲ್ಲದೆ ಇತರ ಸಂಸ್ಥೆಗಳ ಸಾಕಾರ್ಯಗಳನ್ನೊಳಗೊಂಡಿದೆ—ಈ ಸಹಕಾರ ಸಂಸ್ಥೆಯಲ್ಲಿ ವಿಮೆ ಮಾಡಿ, ಕುಟುಂಬಗಳನ್ನು ಆಕಸ್ಮಿತ ದುರ್ದೈವಗಳಿಂದ ರಕ್ಷಿಸಿ. ಮುಂದೆ ಬರುವ ಸುದ್ದಿನಗಳಿಗೆ ಹಣ ಗಳಿಸಿ—ಹೆಚ್ಚಿನ ಮಾಹಿತಿಗೆ ಸ್ಥಳೀಯ ಏಜಂಟರುಗಳಿಗಾಗಲಿ ಯಾ ಚೀಫ್ ಏಜನ್ಸಿಗಾಗಲಿ ಬರೆಯಿರಿ.

ಎಫ್. ಎಕ್ಸ್. ಡಿಸೋಜ ಅಂಡ್ ಸನ್ಸ್,
ಚೀಫ್ ಏಜೆಂಟ್ಸ್,
172-23 ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

26-17

ಸತಿ ಸೋಫಿಯೂ ವಾಡಿಯೂ, ಶ್ರೀ ವಾಡಿಯೂ ಮತ್ತು ನನ್ನ ಪತ್ನಿ ಇಷ್ಟು ಜನರೊಂದಿಗೆ ನಾನು ಜುಹುಗೆ ಬರುವ ವೇಳೆಗೆ ಸಂಜೆ 7 ಗಂಟೆ ಹೊಡೆಯುವುದರಲ್ಲಿತ್ತು. ಗಾಂಧೀ ಗ್ರಾಮದಲ್ಲಿ ನಮ್ಮನ್ನು ಮೊದಲು ಕಂಡವನು ಶ್ರೀಮತಿ ಸರೋಜಿನಿ ದೇವಿಯವರ ಕಾರು ಡ್ರೈವರು. ಅನಂತರ ಸ್ವಯಂ ಸೇವಕನೊಬ್ಬನು ನಮ್ಮ ಕಾರಿಗೆ ಶ್ರೀಮತಿ ಸರೋಜಿನಿ ದೇವಿಯವರಿರುವ ಗುಡಿಸಿಲಿನ ದಾರಿ ತೋರಿದ. ಕೊಂಚ ಕಾಲದಿಂದ ನಾನು ಆಕೆಯನ್ನು ಕಂಡಿರಲಿಲ್ಲ. ಇದಲ್ಲದೆ ಮತ್ತೊಬ್ಬ ಆಪ್ತ ಮಿತ್ರರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನೂ ಮತ್ತು ಶ್ರೀ ಹತೀ ಸಿಂಗರನ್ನೂ ಕಾಣುವ ಅವಕಾಶ ಬೇರೆ ಸಿಕ್ಕಿತು. ಶ್ರೀಮತಿ ಸರೋಜಿನಿ ದೇವಿಯವರೊಂದಿಗೆ ಕೊಂಚ ಹೊತ್ತು ಸುಖ ದುಃಖ ಮಾತಾಡಿದ ಮೇಲೆ, ಮಹಾತ್ಮಾಜಿಯವರು ವಾಸ ಮಾಡುವ ಕುಟೀರದ ಕಡೆಗೈತೋರಿದರು.

ಅಷ್ಟರ ವೇಳೆಗೆ ಒಬ್ಬ ಮಹಾರಾಣಿ ಮತ್ತು ಆಕೆಯ ಹೆಣ್ಣು ಮಕ್ಕಳು ಬಂದರು. ಬೆಲೆ ಬಾಳುವ ಪುಷ್ಪ ಮಾಲಿಕೆಗಳೇನು, ತುರಾಯಿಗಳೇನು, ಬುಟ್ಟಿಗಳ ತುಂಬ ಹಣ್ಣುಗಳೇನು ಅಸಾಧ್ಯವಾಗಿದ್ದುವು. ಪುಷ್ಪ ಮಾಲಿಕೆಗಳಿಗೆಲ್ಲ ಚಿನ್ನದ ಲೇಸನ್ನು ಹಾಕಿ ಅಲಂಕರಿಸಲಾಗಿತ್ತು! ಮಹಾತ್ಮರಿಗೋಸ್ಕರ ಮಹಾರಾಣಿ ತಂದ ಕಾಣಿಕೆಗಳವು.

'ಇವೆಲ್ಲ ಮಹಾತ್ಮಾಜಿಯವರ ಗುಡಿಸಲಿಗೆ ಹೋದರೆ, ಅವರೀಗ ಜಾಗವಿಲ್ಲದಂತಾದೀತು' ಎಂದರು ಸರೋಜಿನಿ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು 'ಇವೆಲ್ಲ ಬಂಗಾಳಕ್ಕೆ ಹೋಗುವುದೇ ಮನಸು ಸಂತೋಷಗೊಳ್ಳುತ್ತಿತ್ತು' ಎಂದರು.

ನನ್ನಲ್ಲೇ ಉಸುರಿದೆ–'ಬಹುಶಃ, ಗಾಂಧಿಜಿ ಬೊಂಬಾಯಿಗೆ ಬಂದ ದಿನ ಒಬ್ಬ ಚಿಕ್ಕ ಬಾಲಕ ತಂದ ಆ ಒಂದೇ ಒಂದು ಫಲ ಇವೆಲ್ಲವುಗಳಿಗಿಂತಲೂ ಮಹತ್ವಪೂರ್ಣವಾಗಿದ್ದಿರಬೇಕು'. ಆನಂತರ ಸರೋಜಿನಿ ನಮ್ಮನ್ನು ಮಹಾತ್ಮರ ಗುಡಿಸಿಲಿಗೆ ಅಟ್ಟಿದರು.

ಮಹಾತ್ಮರ ಗುಡಿಸಿಲಿಗೆ ಕಾಲಿಡುತ್ತಿದ್ದಾಗ ಕೊಂಚ ಮೈ 'ಜುಂ' ಎಂದಿತು. ಕೆ. ಕೇ. ಪಂಚನು ಜಾರ್ಜರು ನನ್ನೊಡನೆ ಕೈ ಕುಲುಕಿಸಿದಾಗ ಸಹ ನನಗೆ ಆ ಅನುಭವ ಆಗಿರಲಿಲ್ಲ. ಬಾಂಬುಗಳಿಗೆ, ಗುಂಡುಗಳಿಗೆ ಎದೆಯೊಡ್ಡಬೇಕಾಗುವ ಸಂದರ್ಭಗಳಲ್ಲಿ ಸಹ ನಾನು ಎದೆಗೆಟ್ಟವನಲ್ಲ.

ನಾ ಒಳಹೊಕ್ಕಾಗ ಮಹಾತ್ಮಾಜಿಯವರು ಕುಳಿತಿದ್ದರು. ಸಂತೋಷ ಉಕ್ಕಿ ಬಂತು. ಅಧುನಿಕ ವಿಶ್ವದ ಮಹಾವ್ಯಕ್ತಿಯ ಮುಂದೆ ನಿಂತಿದ್ದೆ ನಾನು. ಬಡಕಲು ದೇಹ; ಕುಗ್ಗಿದ ಶರೀರ. ಇದರೇನು? ಸಾಮ್ರಾಜ್ಯಗಳೆಲ್ಲೆಲ್ಲ ಅತ್ಯಂತ ಬಲಯುತವಾದುದನ್ನು ಎದುರಿಸಿ, ತಮ್ಮ ಅಹಿಂಸೆ ಮತ್ತು ಪ್ರೇಮದ ಬಲದಿಂದ ಅದರ ಅಸ್ತಿಭಾರವನ್ನೇ ಅಲ್ಲಾಡಿಸಿದ ಜೀವ ಕಾಣಬರುತ್ತಿತ್ತು. ಗಾಂಧೀಜಿ ಹಾಕುವ ಮೋಡಿಯೇ ಅಂಥದು. ಎಷ್ಟೇ ಜನ ಪೊಲೀಸರು ಬರಲಿ, ಎಷ್ಟೇ ಮಂದಿ ಮಿಲಿಟರಿಯವರು ಬರಲಿ ಆ ಅಪೂರ್ವ ಶಿಸ್ತನ್ನು ನೆಲೆಗೊಳಿಸಲಾರರು. ವಾತಾವರಣವೆಲ್ಲ ಮಹಾತ್ಮರ ಪ್ರಭಾವದಿಂದ ಪ್ರಜ್ವೋದಿತವಾಗಿತ್ತು. ಎತ್ತರವಾದ ನೇವಿಕೆಯಲ್ಲಿ ಮಹಾತ್ಮರು ಧ್ಯಾನಾಸಕ್ತರಾಗಿ ಕುಳಿತಿದ್ದರು. ಅವರ ಕೈಲ್ಲಿದ್ದ ಬೀಸಣಿಗೆ ಮುಖಕ್ಕೆ ಸರಳುಕೊಡುತ್ತಿತ್ತು. ಮುಳುಗುತ್ತಿದ್ದ ಸೂರ್ಯನ ಕಿರಣಗಳು, ವಿಶಾಲವಾದ ಅರೇಬಿಯನ್ ಸಮುದ್ರವ ಅಲೆಗಳೊಂದಿಗೆ ಸೇರಿ ಮಹಾತ್ಮರಿಗೆ ನನ್ನ ಜೀ ಮೂಡುತ್ತಿದ್ದಂತೆ ತೋರಿತು.

21 ಮೆ. ಕೆ. ಕರುಂಬಯ್ಯನವರು 'ಕೊಡಗಿನ ವ್ಯವಸಾಯಗಾರರ ಸಾಲವನ್ನು ನಿವಾರಿಸಲು ಇಂಡಿಯಾ ಸರ್ಕಾರದಿಂದ ಪ 30 ಲಕ್ಷ ರೂಪಾಯಿ ಸಾಲ ಪಡೆಯಲು ಈ ಸಭೆಯು ಚೀಫ್ ಕಮಿಷನರಿಗೆ ಎ ಫಾರಸ್ಸು ಮಾಡುತ್ತದೆ' ಎಂಬ ರಠಾವನ್ನು ಮಂಡಿಸಿ, ಕಳೆದ ವರ್ಷಗಳ ಹಿಂದೆ ಆರ್ಥಿಕ ವಿಚಾರಣಾ ಕಮಿಟಿಯವರು ಕೊಡಗಿನ ರೈತರ ಒಟ್ಟು ಸಾಲವು 75 ಲಕ್ಷವಿರಬಹುದೆಂದು ಅಂದಾಜು ಮಾಡಿದ್ದರು. ಆದರೆ ಇತ್ತೀಚೆಗೆ ಇದು ವಿರಿ ! ಕೋಟಿಗೆ ತಲಪಿರಬಹುದು. ರೈತರಿಗೆ ದೀರ್ಘ ಕಂತಿನ ಸಾಲ ಕೊಡುವ ಪಕ್ಷ ಅವರು ತಮ್ಮ ಭೂಮಿ, ಮನೆ, ಪುರಗಳನ್ನು ಕಳಕೊಂಡು ಅನಾಧರಾಗಬಹುದು. ಆದ್ದರಿಂದ ರೈತರ ಉನ್ನತಿಗಾಗಿ ಸರ್ಕಾರವು ಇಂಡಿಯಾ ಸರ್ಕಾರದಿಂದ ಸಾಲ ಕೇಳುವುದು ಆವರ ಕರ್ತವ್ಯವೇ ಆಗಿದೆ ಎಂದರು.

ಮೆ. ಪಿ. ಜಿ. ಮುದ್ದಮ್ಮಯ್ಯನವರು ಅನುಮೋದಿಸಿದರು.

ಫೈನಾನ್ಸು ಮೆಂಬರು ಇಂಡಿಯಾ ಸರ್ಕಾರವು ಇಷ್ಟು ದೊಡ್ಡ ಸಾಲ ಕೊಡಲು ಶಕ್ತವಲ್ಲವೆಂದೂ, ರಠಾವಿ ಮತ್ತು ಭೂಮಿ ರೂಪಿತಕ್ಕಾಗಿ ದೊಡ್ಡ ಹಣ ಕೊಟ್ಟಿರುವರಲ್ಲದೆ ಈಗಲೂ 50,000 ರೂಪಾಯಿ ಸಾಲ ತೀರಿಸಲು ಹಣ ಕೊಟ್ಟಿರುವದರಿಂದ ಇಂಡಿಯಾ ಸರ್ಕಾರವನ್ನು ಕೇಳಲು ಅಸಾಧ್ಯವೆಂದೂ, ಆ ಪ್ರಯುಕ್ತ ರಠಾವನ್ನು ನಿರೋಧಿಸುತ್ತೇನೆಂದೂ ಹೇಳಿದರು.

ಮೆ ಬಿ. ಯಂ. ಕಾರ್ಯಪ್ಪನವರು ರಠಾವನ್ನು ಸಮರ್ಥಿಸಿ ಮಾತಾಡಿದರು.

ಮೆ. ಯಂ. ಯಂ. ಬೈಯ್ಯಪ್ಪನವರು ರಠಾವನ್ನು ವಿರೋಧಿಸಿದರು

ಮೆ. ಕೆ. ಸಿ. ಕರುಂಬಯ್ಯನವರು ಉತ್ತರವಿತ್ತರು.

ಫೈನಾನ್ಸು ಮೆಂಬರು ಇಂಡಿಯಾ ಸರ್ಕಾರವು ಈ ಹಣವನ್ನು ಕೊಡಲಶಕ್ತವಿಲ್ಲ ವೆಂಬುದಾಗಿ ಮತ್ತೆ ಮಾತಾಡಿದ ನಂತರ ರಠಾವನ್ನು ಓಟಿಗೆ ಎಂಕಲಾಗಿ ಕಾಂಗ್ರೆಸ್ ಮೆಂಬರರು ಮತ್ತು ಆಯರು ಮೆಂಬರುಗಳು ಪರವಾಗಿಯೂ, ಸರಕಾರ ಮೆಂಬರರು, ಯಂ. ಯಂ ಬೈಯ್ಯಪ್ಪನವರು ಮತ್ತು ಚೌರ್ಮನ್ ಕಾಳಪ್ಪನವರು ವಿರೋಧವಾಗಿಯೂ ಓಟು ಮಾಡಿದರು. ರಠಾವು ಸಾಯಿತು.

22 'ಫೈನ್ಸಂಪೆಟೆನ್ಸಿನ ಪೆನಗೂರು, ಕೊಟ್ಟಗೇರಿ, ಸಿಟ್ಟೂರು, ಬಾಳೆಲೆ, ಬೆಳೂರು ಮತ್ತು ದೇವಸೂರು ಗ್ರಾಮಗಳಲ್ಲಿ ಮಳೆಯ ಅಭಾವದಿಂದ ಬೆಳೆ ಸರಿಯಾಗಿ ಆಗದ್ದರಿಂದ ಅಲ್ಲಿಗೆ ನೀರಿನ ಸರಬರಾಯಿ ಮಾಡಿಸುವ ಬಗ್ಗೆ ರೂ. 15,000 ಪನ್ನು ಸಹನೆ ಖರ್ಚು ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ರಠಾವನ್ನು ಮಂ. ಎಚ್. ಬಿ. ಸಿದ್ದಯ್ಯನವರು ಮಂಡಿಸಿ, ಜಸ್ಟಿ ಚೌರ್ಮನ್ ವಹಿಸ್ತ ಸರಿ ಮಾಡುವನ್ನು ನಿಶ್ಚಯಿಸುವ ವಿಷಯ ಸ್ವಂತ ಪ್ರತ್ಯಾಗಿರುವ ದೇರೇಯ ಚಿತ್ತ ಚಿಕ್ಕ ಬಸ್ ಸರ್ವಿಸುಗಳು ದೊಡ್ಡ ಸರ್ವಿಸುಗಳೊಡನೆ ಪೈಪೋಟಿ ನಡೆಸಲಾರದೆ ಮಾಯವಾಗುವ ಪಂಥಾ, ದೊಡ್ಡ ಸರ್ವಿಸುಗಳು ಒಂದು ಲೈನಿನಲ್ಲಿ ಪೈಪೋಟಿ ನಡೆಸಿ ಮತ್ತೊಂದರಲ್ಲಿ ಲಾಭ ಪಡೆಯುವಂಥಾ, ಹೀಗೆ ಸಣ್ಣ ಸರ್ವಿಸುಗಳನ್ನು ನುಂಗಿ ಫುಣಃ ಲೈನಿನಲ್ಲಿ ಯೆಥಾ ಪ್ರಕಾರ ದರವನ್ನು ಹೆಚ್ಚಿಸಿ ಜನರನ್ನು ಕಪ್ಪಕ್ಕೀಡುಮಾಡುವ ಸಂಭವ ವಿದಯೆಂದೂ, ಕನಿಷ್ಟ ದರವನ್ನು ನಿಶ್ಚಯಿಸಿದರೆ ಚಿಕ್ಕ ಸರ್ವಿಸುಗಳು ಜೀವಿಸಲು ಅನುಕೂಲವಾಗುವದೆಂದೂ ಮಾತಾಡಿದರು.

ಮೆ. ಅಜ್ಜಮಾಡ ಮೂವಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರು ಈ ಪ್ರಸ್ತೆಯು ಕೆಲವು ಸಮಯದ ಹಿಂದೆ ಆಲೋಚಿಸಲ್ಪಟ್ಟು ಮಾಸಾ ಪರಿಮಾಣದ ದರವನ್ನು ನಿ ಲ್ಲಿಡಲಾಗಿದೆ. ಗ್ರಾಮಾಭಿವೃದ್ಧಿ ಫಂಡಿನಿಂದ ಇದಕ್ಕೆ ಹಣ ಸಹಾಯ ಮಾಡಬಹುದು ಆವರೆ ಗ್ರಾಮಸ್ಥರು ಆವರ ಮೂರರಲ್ಲಿ ಒಂದು ಭಾಗ ಚಂದಾವೆತ್ತಿ ಕೇಳಿರಿಸಬೇಕಾಗುತ್ತೆ ಎಂದು ಹೇಳಿದರು.

ಓಟಿಗೆ ಹಾಕಲು, ಪರವಾಗಿ ಎಲ್ಲಾ ಚುನಾಯಿತ ದೇರೇಯ ಮೆಂಬರುಗಳು ಓಟು ಮಾಡಿದರು. ರಠಾವು ಸಾಯಿತು.

22. 'ಪರೆ ಅಳೆಯುವಾಗ 1½ ಇಂಚಿನ ಚಿಚ್ಚೌಕ ಮರದ ದೊಣ್ಣೆಯನ್ನು ಉಪಯೋಗಿಸುವಂತೆ ನಿರ್ಣಯಿಸಲು ಈ ಕೌನ್ಸಿಲು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ರಠಾವನ್ನು ಎಚ್. ಬಿ. ಸಿದ್ದಯ್ಯನವರು ಸೂಚಿಸಿ, ವ್ಯಾಪಾರಸ್ಥರು ಈಗಿರುವ ಉರುಟು ಕೋಲಿನಿಂದ ಅಳೆಯುವಾಗ ಕೋಲನ್ನು ಉರುಳಿಸಿ ಪರೆಯಲ್ಲಿ ಹೆಚ್ಚು ಬತ್ತ ಹಿಡಿಯುವಂತೆ ಮಾಡಿ ರೈತರಿಗೆ ಕೊಂದರೆ ಕೊಡುವರೆಂದೂ, ಚಚ್ಚೌಕ ಕೋಲಾದರೆ ಉರುಳಿಸಲು ಮನಸ್ಸಾಧ್ಯವಾದ್ದರಿಂದ ಈ ನಷ್ಟ ರೈತರಿಗಾಗಲಾರದೆಂದೂ, ಇದರಿಂದ ಸರಕಾರವು ರೈತರ ಹಿತವನ್ನು ಸಾಧಿಸಿದಂತಾಗುವದೆಂದೂ ಮಾತಾಡಿದರು.

ಮೆ ಅಜ್ಜಮಾಡ ಮೂವಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರರು ಸೂಚಕರು ಹೇಳಿದ ರೈತರ ತೊಂದರೆಗಳನ್ನು ನಾನು ಒಪ್ಪುತ್ತೇನೆಂದೂ ಆ ವಿಷಯ ಆಲೋಚನೆಯಲ್ಲಾಗುವದೆಂದೂ ಹೇಳಿದರು.

ರಠಾವನ್ನು ಓಟಿಗೆ ಹಾಕಲಾಗಿ ಎಲ್ಲಾ ಚುನಾಯಿತ ದೇರೇಯ ಮೆಂಬರುಗಳು, ಅಬ್ದುಲ್ ರಹಿಮಾನ್ ಸಾಹೇಬರು ಇವರಾಗಿ ಓಟು ಮಾಡಿದ್ದರಿಂದ ರಠಾವು ಸಾಯಿತು.

23. 'ಕೊಡಗಿನ ಜನ ಚಾರ್ಜಿನ ಮಹಾ ಸರಿಯಾಣ ಮತ್ತು ಕನಿಷ್ಟ ಸರಿ ಮಾಣಗಳ ವಿವರವನ್ನು ನೈಲಿಗೆ 1 ಆಣೆ ಮತ್ತು ನೂರು ಭೂಗಳಂತೆ ನಿರ್ಣಯಿಸಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ರಠಾವನ್ನು ಮಂ. ಎಚ್. ಬಿ. ಸಿದ್ದಯ್ಯನವರು ಮಂಡಿಸಿ, ಜಸ್ಟಿ ಚಾರ್ಜಿನ ವಸಿಷ್ಟ ಸರಿ ಮಾಣವನ್ನು ನಿಶ್ಚಯಿಸುವ ವಿಷಯ ಸ್ವಂತ ಪ್ರತ್ಯಾಗಿರುವ ದೇರೇಯ ಚಿತ್ತ ಚಿಕ್ಕ ಬಸ್ ಸರ್ವಿಸುಗಳು ದೊಡ್ಡ ಸರ್ವಿಸುಗಳೊಡನೆ ಪೈಪೋಟಿ ನಡೆಸಲಾರದೆ ಮಾಯವಾಗುವ ಪಂಥಾ, ದೊಡ್ಡ ಸರ್ವಿಸುಗಳು ಒಂದು ಲೈನಿನಲ್ಲಿ ಪೈಪೋಟಿ ನಡೆಸಿ ಮತ್ತೊಂದರಲ್ಲಿ ಲಾಭ ಪಡೆಯುವಂಥಾ, ಹೀಗೆ ಸಣ್ಣ ಸರ್ವಿಸುಗಳನ್ನು ನುಂಗಿ ಫುಣಃ ಲೈನಿನಲ್ಲಿ ಯೆಥಾ ಪ್ರಕಾರ ದರವನ್ನು ಹೆಚ್ಚಿಸಿ ಜನರನ್ನು ಕಪ್ಪಕ್ಕೀಡುಮಾಡುವ ಸಂಭವ ವಿದಯೆಂದೂ, ಕನಿಷ್ಟ ದರವನ್ನು ನಿಶ್ಚಯಿಸಿದರೆ ಚಿಕ್ಕ ಸರ್ವಿಸುಗಳು ಜೀವಿಸಲು ಅನುಕೂಲವಾಗುವದೆಂದೂ ಮಾತಾಡಿದರು.

ಮೆ. ಅಜ್ಜಮಾಡ ಮೂವಪ್ಪನವರು ಅನುಮೋದಿಸಿದರು.

ಫೈನಾನ್ಸು ಮೆಂಬರು-ಕೊಡಗಿನಲ್ಲಿ ನೀರಿನ ಯೋಜನೆಗಾಗಿ 4900 ಬಡ್ಡಿಟನ

ಶ್ಚಿಸಲಾಗಿದೆ ಆ ಸಮಯದಲ್ಲಿ ಮೆ ದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮೋಟಾರು ವಾಹನಗಳ ಆಕ್ಟನ್ನು ತಿದ್ದುಪಡಿ ಮಾಡುವ ರಠಾವಿದ್ದರಿಂದ ಕನಿಷ್ಠ ಪರಿಮಾಣವನ್ನು ನಿಶ್ಚಿಸಲಿಲ್ಲ. ಈ ವಿಚಾರ ಆಲೋಚಿಸಲಾಗುವುದೆಂದರು

ಓಟಿಗೆ ಹಾಕಲಾಗಿ ಎಲ್ಲಾ ಕಾಂಗ್ರೆಸ್ ಮಂಬರರು ಸರವಾಗಿ ಓಟು ಮಾಡಿದ್ದರಿಂದ ರಠಾವು ಮಂಜೂರಾಯಿತು. ಬಾಕಿ ಯಾರೂ ಓಟು ಮಾಡಲಿಲ್ಲ

23 'ಸರ್ಜಿ ಮತ್ತು ಜೆಂಬು ಗ್ರಾಮಗಳ ರೈತರು ಸೈನಾರಿ ಜಾಗವಲ್ಲಿ ವಿಕರಿಗೆ ೬ ಟಿಜ ಕಂಡಾಯದ ಮೇರೆ ಹತ್ತು ವಿಕರಿಗಳ ಪರೆಗೆ ಕರ ನೆಲಲು ಮಾಡುವಂತ ಅನುಮತಿ ಕೊಡಬಹುದಾಗಿ ಈಸ ಭಯುಬ್ಬಿಫ್ ಕನುಪಸರಿಗೆ ವಿಶಾರಸ್ಸು ಸೂದುತ್ತದೆ' ಎಂಬ ರಠಾವನ್ನು ಮೆ ಎನ್. ಸೂಮಣ್ಣನವರು ಸೂಚಿಸಿ-ಪೊದಲು ಈ ಸ್ಥಳಗಳಲ್ಲಿ ಜೀರಿಗೆ ಬೆಳೆಸಲು ಬಿಡುತ್ತಿದ್ದರು ಆದರೆ ಇತ್ತಲಾಗಿ ತಮು ನಿಲ್ಲಿಸಲ್ಪಟ್ಟಿತು ಮರಗಳನ್ನು ಕೆಗಯುವುದರಿಂದ ಮಳೆ ಕಡಿಮೆಯಾಗುವದೆಂದು ವೇಳುತ್ತಾರೆ ಆದರ ಈ ವಹಿಸಿ ಹೆಚ್ಚು ಮಳೆಯಾಗಿದೆ ಅಲ್ಲದೆ ರೈತರಿಗೆ ಯಾವುದಾದರೊಂದು ವಿಧವ ಸಹಾಯಕ ವ್ಯವಸಾಯ ಸಲಕರ್ತನ್ನು ಕೊಡದಿದ್ದಲ್ಲಿ ಇವರ ಸ್ಥಿತಿಯೂ ಶೋಚನೀಯವಾಗುವುದು ಎಂದರು

ಮೆ. ಕೆ. ಪಿ ಕರುಂಬಯ್ಯನವರು ಆನುಮೋದಿಸಿದರು.

ಫೈನಾನ್ಸು ಮೆಂಬರು, ಈ ವ್ಯವಸಾಯ ಮಾಡಲು ಮರಗಳನ್ನು ಕೆಗಯುವೇ ಕಾದ್ದರಿಂದ ಭೂಮಿಯು ಬಂಜರು ಬೀಳ ಬಹುದಲ್ಲದೆ ಮಳೆಯೂ ಖಂಡಿತಾ ಪಮ್ಮೆ ಯಾಗುತ್ತದೆ ಮರಕಡಿಯುಗಳಿಲ್ಲದೆ ಫಾಗಗಳನ್ನು ವ್ಯವಸಾಯಕ್ಕೆ ಕೊಡಬಹುದು. ಆದ್ದರಿಂದ ರಠಾವನ್ನು ವಿರೋಧಿಸುತ್ತೇನೆಂದರು.

ಫಾರಗನ್ನು ಮಂಬರರು ಈ ವ್ಯವಸಾಯಕ್ಕಾಗಿ ಕಾಡುಗಳನ್ನು ಕೆಗಿರ ಜೀರಿಗೆ ಆರ್ಥಿಕ ಬಾಬಗೆ ಪಟ್ಟು ಎಂದೆಂತೆ ಎಂದು ಹೇಳಿ ರಠಾವನ್ನು ವಿರೋಧಿಸಿದರು

ಸೂಚಕರು ರಬ್ಬರು ವ್ಯವಸಾಯಕ್ಕಾಗಿ ಅನೇಕ ವಿಕರುಗಳು ಧನಿಕರಿಗೆ ಕೊಡಲ್ಪಡುತ್ತಿವೆ ಆವಗ ಬಡ ರೈತರಿಗೆ ಯಾವ ಸಲಕರಣೆಯನ್ನೂ ಕೂಡ್ಲಿಲ್ಲವೆಂದರು.

ಡಿ. ಮೇಜಿಸ್ಟ್ರೇಟರು ಕಾಡನ್ನು ತೆಗೆಯುವವರಿಂದ ಭೂಮಿಯು ಬಂಜರು ಬೀಳುವದರಿಂದ ರಠಾವನ್ನು ವಿರೋಧಿಸುತ್ತೇನೆಂದರು

ಓಟಿಗೆ ಹಾಕಲಾಗಿ ಎಲ್ಲಾ ಜುನಾಯಿತ ದೇಶೀಯರು ಪರವಾಗಿ ಓಟು ಮಾಡಿದ್ದರಿಂದ ರಠಾವು ಪಾಸಾಯಿತು.

24. 'ಕೋವಿ ಲೈಸೆನ್ಸು ಕೊಡಲು ತಮ್ಮ ಜಾಗದಲ್ಲಿರುವ ಲಂತಾನ ತೆಗೆದಿರಬೇಕೆಂಬ ಶರತ್ತನ್ನು ಹಾಕದೆ, ಗುಂಡು ಹೊಡೆದ ವಿಚಾರ ಕ್ರಿಮಿನಲ್ ತಕ್ಸೀರಿಗೆ ಒಳಗಾಗದ ಪ್ರಯೊಬ್ಬ ಸಾಗು ಆರ್ಜಿದಾರನಿಗೂ ಲೈಸೆನ್ಸು ಕೊಡಬೇಕೆಂದು ಈ ಸಭೆಯು ಜೀಫ್ ಕಮಿಷನರಿಗೆ ಶಿಪಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಎಸ್. ಸೂಮಣ್ಣನವರು ಸೂಚಿಸಿ, ತಮ್ಮ ಮತ್ತು ದನಸ ಫಾಗ್ಯಗಳರಪ್ಪಜಿ ಬಗ್ಗೆ ಕೊಂಡಿ ಎಲ್ಲರಿಗೂ ಆನಂದ ಪಂಪಾ, ಒಬ್ಬ ಸುತ್ತು ಸಗಂಬ ಈ ಭೇಧ ಬ ಪದಿಂದ ನಗುರ್ತರಿಗೆ ತೊಂದರೆಯಾಗಿದೆಯೆಂದೂ, ಲೈಸನ್ಸು ಕೊಡಲು ಶಿಂತ ನ ಚಾಯಿಜೀಕಂಬ ರಿಂದ ಪ ಕೂಡದೆಂದೂ ಹೇಳಿದರು

ಸು ಎಸ್ ರ ಸ್ಯರ್ಕಾರ್ಯ ರು ಅನುಮೋದಿಸಿದರು

ಡಿ ಮೇಜಿಸ್ಟ್ರೇಟರು ಈ ವರೆಗೆ ಲೈಸೆನ್ಸುಗಳನ್ನು ಧಾರಾಳವಾಗಿ ಕೊಡಲಾಗಿದೆಯೆಂದೂ, 1957 ರಸರೆಗೆ ಬರೇ ರೆತ್ಯಾಲಿಕ ಲೈಸನ್ಸಿಇತ್ತೆಂದೂ, ಅಂದರೆ ಆ ನಿಶ್ಚಿತ ಸಸಯ ನುಗಿದ ನಂತರ ಕೂಲಿಯನ್ನು ಪುನ್ ಪಾಪ್ತು ಕೊಡಬೇಕಿತ್ತೆಂದರೂ, ಈಗ ಲೈಸನ್ಸೆ ಯಾಯಂ ಮಾಡಿರುತ್ತಾರಂತಲೂ, ಲಂತಾನ ತೆಗೆಯಬೇಕೆಂಬ ಶರತ್ತಿರುವುದು ಬಹು ಪ್ರಯೋಜನಕಾರಿಯೆಂತಲೂ, ಆದರಿಂದ ರಠಾವನ್ನು ಪರೋಧಿಸುತ್ತೇನೆಂದೂ ಹೇಳಿದರು

ಮೆ ಸೂಂಜಣ್ಣನವರು ಸಂಯುಕ್ತ ಪ್ರಾಂತದ ಕಾಂಗ್ರೆಸ್ ಸರಕಾರವು ಸುಮಾರು ಲೈಸೆನ್ಸು ಕೊಡುತ್ತಿದೆಯೆಂದೂ, ಇದ್ದರಿಂದ ಇಲ್ಲಿ ಶರತುಗಳನ್ನು ತೆಗೆದು ಹಾಕುವುದೆಂದೂ ಹೇಳಿದರು.

ಡಿ ಮೇಜಿಸ್ಟ್ರೇಟರು-ಸಂಯುಕ್ತ ಪ್ರಾಂತದಲ್ಲಿ ಅಂದಾ ನನಲ್ಲರುವುದು ಸರ್ಕಾರದ ಗೂಜಿಂಕ್ಕೆ ಬಂದಿಲ್ಲವೆಂದೂ, ನ್ಯಾಯಬಾಹಿರರಾದವರಿಗೆ ಲೈಸೆನ್ಸು ಕೊಡುವದು ಹಿತವಲ್ಲವೆಂದೂ ಹೇಳಿದರು.

ಓಟಿಗೆ ಹಾಕಲಾಗಿ ಎಲ್ಲಾ ಜುನಾಯಿತ ದೇಶೀಯರು ಬೆಂಬಲಿಗಳು, ಅಬ್ಬುಲ್ ರಹಮಾನ್ ಪಾವನು ಪರವಾಗಿ ಒಟು ಮಾಡಿದ್ದರಿಂದ ರಠಾವು ಪಾಸಾಯಿತು

25 'ಸಿವಿಲ್ ಕೋರ್ಟಿನವರು ಜಪ್ತಿ ಮಾಡಿದ ಚಿರಸ್ಥಾಪ್ತಿನ್ನು ಸರ್ಕಾರದವರು ಕಂದಾಯ ಯ ರಕಾವಿಸಾಲು ನಗರಗಳ ಬಾಕಿಗಾಗಿ ಕೆನಿಸ್ಟೂ ಆಗಿಕಂಗಳಿಂದ ಪುನಃ ಒಪ್ಪಿ ಮಾಡಿಸಿಜಂರಮ್' ಎಂಬ ರಠಾವನ್ನು ಮಾ ಎನ್ ಸೂಮಣ್ಣನವರು ಸೂಚಿಸಿ, ಈಗ ಇರುವ ರೀತಿ ಸರಿ ಸರಕಾರದವರು ಕೆನುಪದ ಜಪ್ತಿ ಮಾಡುವಿಕೆ ನಿಷ್ಕ್ರಿಪಡಿಪವರೆನ್ನು ಸಾಲಗಾರರು ಮೋಸಮಾಡಲು ಅನುಕೂಲಮಾಡಿಕೊಟ್ಟಂತಾಗುತ್ತ. ಸರಕಾರದವರಿಗೆ ನಲ್ಲಿಕ್ಕ ಹಣದ ವಸೂಲಾತಿಗಾಗಿ ಎಲ್ಲಾ ಸ್ವತ್ತುಗಳ ಮೇಲೆ ಸರ್ಕಾರಕ್ಕೆ ಮೊಲಿಲನೇ ಹಕ್ಕಿದ್ದರೂ ಕೂಡ ಸಿವಿಲ್ ಕೋರ್ಟಿಗೆ ಹಕ್ಕಿಲ್ಲವ ಬೇರೆ ಸ್ವತ್ತುಗಳಿಂದ ಸರ್ಕಾರದವರು ವಸೂಲು ಮಾಡಿಕೊಳ್ಳಬಹುದು ಆದ್ದರಿಂದ ಈ ರಠಾವನ್ನು ಪಾಸು ಮಾಡುವದು ಅವಶ್ಯವಾಗಿದೆ.

ಮೆ. ಯಂ. ಯಂ. ಬೆಳ್ಯಪ್ಪನವರು ಅನುಮೋದಿಸಿದರು

ಡಿ ಮೇಜಿಸ್ಟ್ರೇಟರನರು-ರಠಾವನ್ನು ವಿರೋಧಿಸುತ್ತಾ ಸರ್ಕಾರದ ಬಾಕಿಯನ್ನು ವಸೂಲು ಮಾಡುವದು ಅಧಿಕಾರಿಗಳ ಕರ್ತವ್ಯ. ಜಪ್ತಿ ಮಾಡಿದ ಸೊತ್ತಿನಿಂದ ಸರ್ಕಾರದ ಬಾಕಿ ಕೆಮೆ ಉಳಿಕೆಯಾದ ದ್ದನ್ನು ಡಿಕ್ರಿದಾರರಿಗೆ ಕೊಡಲಾಗುತ್ತೆ. ಆದುದರಿಂದ ಈಗಿರುವ ರೀತಿಯನ್ನು ಬದಲಾಯಿಸುವ ಅವಶ್ಯಕತೆ ಇಲ್ಲ.

ಮೆ ಪಿ. ಐ. ಬೆಳ್ಯಪ್ಪನವರು-ಸಿವಿಲ್ ಕೋರ್ಟಿನಿಂದ ಜಪ್ತಿಯಾದ ಚಿರಸ್ಥಾಪ್ತಿನ್ನು ಸರ್ಕಾರದವರು ತಮ್ಮ ಬಾಕಿಗಾಗಿ ಪುನಹ ಜಪ್ತಿ ಮಾಡಬಾರದೆಂದರೆ ರೈತರ ಸ್ಥಿರಾಸ್ತಿಗಳನ್ನು ಸರ್ಕಾರದವರು ತಮ್ಮ ಬಾಕಿಗಾಗಿ ಹರಾಜು ಮಾಡಲಾಗುವುದು. ಇದರಿಂದ ಕಲವು ರೈತರು ತಮ್ಮ ಭೂಮಿಯನ್ನು ಕಳಕೊಳ್ಳಬೇಕಾಗುವುದು. ಆದ್ದರಿಂದ ಈಗಿರುವ ಸ್ಥಿತಿಯನ್ನು ಬದಲಾಯಿಸುವುದು ಯುಕ್ತವಲ್ಲವೆಂದು ಹೇಳಿ ರಠಾವನ್ನು ವಿರೋಧಿಸಿದರು.

ಮಾ ಗಳಾದ ಕೆ ಮಲ್ಲಪ್ಪನವರು, ಎನ್. ರಾಮಸೂರ್ತಿಯವರು ಬೆಂಬಲಿಸಿ ಯಾಗಿಯೂ ಮಾ ಬಿ ಯಂ ಕಾರ್ಯಪ್ಪನವರು ವಿರೂಧಾರ್ಥಿಯಾಗಿಯೂ ಮಾತಾಡಿದರು.

ಸೂಚಕರು ಮತ್ತು ಡಿ ಮೇಜಿಸ್ಟ್ರೇಟರ ಜವಾಬಾದ ಮಾತಿ ರಠಾವನ್ನು ಓಟಿಗೆ ಹಾಕಲಾಗಿ ಮೂರು ಲಾಯೆರು ಮೆಂಬರು ಗಳು ಮತ್ತು ಯಂ ಯಂ ಸೈನ್ಯವನರು ಪರವಾಗಿಯೂ, ಇಬ್ಬರು ಯಾರೂ ಲಿಯನ್ ವ್ಲಾಂಬರ್ ಮೆಂಬರುಗಳಲ್ಲಿಯ ಬಾಕಿಯವರು ವಿರೋಧವಾಗಿಯೂ ಓಟು ಮಾಡಿದ್ದರಿಂದ ರಠಾವು ಪಾಸಾಗಿಲಿಲ್ಲ.

26 'ಕೊಡಗಿನ ಶಾಲೆಗಳಲ್ಲಿ ಒಂದನೇ ಸ್ಟಾಂಡರ್ಡಿನಿಂದ ಹೈರಿಸಿ ಘಾರಿಸಿನ ವರೆಗೆ ಒಂದು ಭಾಷೆಯನ್ನು ಪಿಡ್ಡಾಯವಾಗಿ ಕಲಿಸಬೇಕೆಂದು ಈ ಸಭೆಯು ಏಸಾತನ್ನು ಮಾಡುತ್ತದೆ' ಎಂಬ ರಠಾವನ್ನು ಮೆ. ಕೆ ಯಂ. ಪಿ ವಯ್ಯನವರು ಸಭೆಯ ಮುಂದಿಟ್ಟು ಹಿಂದಿಯೆ ಹಿಂಮಸ್ತಾನದ ಏಕ ಭಾಷೆಯಾಗಲಿಕ್ಕಿದೆ. ಭಾರತೀಯರಿಗೆ ರಾಷ್ಟ್ರಭಾಷೆಯ ಆನರ್ಜಕತೆಯ ಮಾಬಾ ಇವ ಏಕ ಭಾಷೆಯಿಂದ ಭಾರತೀಯರಿಗೆ ಬಗ್ಗೆಪ್ಪಿಗೆ ಸಹಾಯವಾಗುತ್ತದೆ. ಜೀರೆ ಎಲ್ಲಾ ಸ್ಥಾನಗಳಲ್ಲಿಯೂ ಹಿಂದಿಯ ವಿದ್ಯಾಯನವಾಗಿ ಕಲಿಸಲ್ಪಡುತ್ತಿರುವದರಿಂದ ಇಲ್ಲಿಯೂ ಕಲಿಸಲ್ಪಡಬೇಕೆಂದು ಸುತಾಗಿ ಹೇಳಿದರು.

ಮಾ ಐ ಪಿ ಕಾರ್ಯಪ್ಪನವರು ಅನುಮೋದಿಸಿದರು

ಶಾಲಾ ಇನ್ಸ್ಪೆಕ್ಟರೆವರು-ದೇಶವನ್ನು ರಾಷ್ಟ್ರೀಯವಾಗಿ ಬೆಳೆಸುವ ಆಭಿಪ್ರಾಯವಿಲ್ಲ ಇವನ್ನು ಹೊಸ ಜುಬಾವಿಯಿಂದ ಈಗ ಸಾಧಿಸಲು ಸಾಧ್ಯವಿಲ್ಲ. ಎಂದು ಜೀವಿಸಿದರೋ ಧಿಸಿದರು

ಮೆ ಪಿ ಐ ಬೆಳ್ಯಪ್ಪನವರು ರಠಾವಿಗೆ ಒತ್ತಾನೆಯಾಗಿಯೂ, ಮೆ ಅಬ್ದುಲ್ ರಹಮಾನ್ ಪಾಂಡರವರು ವಿರೋಧವಾಗಿಯೂ ಮಾತಾಡಿದರು.

ರಠಾವನ್ನು ಓಟಿಗೆ ಹಾಕಲಾಗಿ ಎಲ್ಲಾ ಕಾಂಗ್ರೆಸು ಮೆಂಬರುಗಳು ಮತ್ತು ಮೂರು ಲಾಯರು ಮೆಂಬರುಗಳು ಪರವಾಗಿ ಓಟು ಮಾಡಿದ್ದರಿಂದ ರಠಾವು ಪಾಸಾಯಿತು.

27. 'ಸಿಬ್ಬಂದಿ ಯೋಜನೆಯಲ್ಲಿ ಯಾವ ನಾಡು ಏಜೀರಿಯನ್ನೂ ತೆಗೆಯಬಾರದು' ಎಂಬ ರಠಾವನ್ನು ಮೆ ಪಿ. ಐ. ಬೆಳ್ಯಪ್ಪನವರು ಸೂಚಿಸಿ ಹೀಗೆಂದರು-ಸರ್ಕಾರಿ ಆಫೀಸುಗಳ ಫೈಕಿ ರೈತರಿಗೆ ಅತ್ಯನತ್ಯವಾದುದು ನಾಡು ಏಜೀರಿಯ ಕಿ ಆಲ್ಲಿಗೆ ರೈತರು ಆಗಾಗ ಹೋಗಬೇಕಾಗುವುದು. ಅನಕಾರಣ ನಾಡು ಏಜೀರಿಯನ್ನು ತೆಗೆದರೆ ರೈತರಿಗೆ ತುಂಬಾ ನಷ್ಟ ಕಷ್ಟ ಉಂಟಾಗುತ್ತದೆ. ರೈತರ ಕಷ್ಟ ಸುಖಗಳನ್ನರಿಯುವಂಥ ಉದ್ಯೋಗಿ ಸ್ಥರೇ ನಾಡು ಏಜೀರಿಯವರು ಒಬ್ಬರಿಂದ ನಾಡು ಏಜೀರಿಯಲ್ಲಿನ ಸಂಖ್ಯೆಯನ್ನು ಕಡಿಮೆ ಮಾಡುವುದರಿಂದ ಬಡವರು ಪಾರಿಪತ್ಯಗಾರರ ಸಂಬಳ ಕಡಿಮೆ ಮಾಡಿ ನೋಡಲಿದ್ದಂತೆ ನಾಡು ಏಜೀರಿಗಳನ್ನು ದಚ್ಚಿಸುವುದು ಉತ್ತಮ

ಮಾ. ಐ ಪಿ. ಕಾರ್ಯಪ್ಪನವರು ಆನುಮೋದಿಸಿದರು

ಫೈನಾನ್ಸು ಮೆಂಬರು-ಹಣದ ಆಭಾವದಿಂದ ಎರಡು ನಾಡು ಏಜೀರಿಗಳನ್ನು ತೆಗೆಯಲೇ ಬೇಕಾಗಿದೆ ಇದರಿಂದ ಕೆಲವು ಜನರಿಗೆ ಸ್ವಲ್ಪ ತೊಂದರೆಯಾಗಬಹುದು ಆದರೆ ಅದನ್ನು ಅಪಹಿಸ್ಯ ಕಡಿಮೆ ಮಾಡಲು ತಕ್ಕ ವ್ಯವಸ್ಥೆ ಮಾಡಲಾಗುವುದು ಹೀಗೂ ರಠಾವನ್ನು ವಿರೋಧಿಸಿದರು.

ರಠಾವನ್ನು ಓಟಿಗೆ ಹಾಕಲಾಗಿ ಜುನಾಯಿತ ದೇಶೀಯ ಮೆಂಬರುಗಳೆಲ್ಲರೂ ಪರವಾಗಿ ಓಟು ಮಾಡಿದ್ದರಿಂದ ರಠಾವು ಪಾಸಾಯಿತು

28 'ಪ್ರಜಾವಾಣಿ ಹೋಬಳಿ ಏಜೀರಿಯನ್ನು ತೆಗೆಯಕೂಡದೆಂಬ ರಠಾವನ್ನು ಮೆ. ಮಲ್ಲಪ್ಪನವರು ಸೂಚಿಸಿ ಹೀಗೆಂದರು-ಫ್ರೈಜರ್ ಸೇಟೆ ಹೋಬಳಿಯ ಸ್ಥಿತಿಯು ಕೊಡಗಿನ ಇತರ ನಾಡುಗಳ ಸ್ಥಿತಿಗಿಂತ ಸೂಕ್ಷ್ಮತರವಾಗಿದೆ. ಅಲ್ಲಿ ಎರಡು ಸೋಪಿಫ್ಟಿಡ್ ಏರಿಯಾಗಳೂ, ಕೊಡಗಿನ ಅತಿ ದೊಡ್ಡ ಗ್ರಾಮವೂ ಇವೆ. ಈ ಒಳ ಏಜೀರಿಯನ್ನು ಎಜಾಮಿಡಿವ್ವರೆ ಎಲ್ಲಯ ಜೆಟ್ಟಾಗಿರುವ ವಳ್ಳಿಗೆ ಬಂದು ಮಂಜಿನ ಮೇಲೆ ಸುಂಟಿರಾಣಿಸಿದ ಸೌಲಭ್ಯವನ್ನು ಜೋಗುವುದು ಬಹು ಒಳ್ಳೆ ಹೊಂದು ಬಿದ್ದ ಹೋಬಳಿಯಾಗಿದೆ. ನಾಡು ಏಜೀರಿ ತೆಗೆದಲ್ಲಿ ರೈತರು ಇಲ್ಲಿಯವರು ಮತ್ತಷ್ಟು ಹಿಂದ ಬೀಳುವರು.

ಮೆ ಎನ್ ಸೋಮಣ್ಣನವರು ಅನುಮೋದಿಸಿದರು

ಫೈನಾನ್ಸು ಮೆಂಬರು-ಸಿಬ್ಬಂದಿಯೋಜನೆಗಾಗಿ ಹೇಗೂ ಎರಡು ನಾಡು ಏಜೀರಿಗಳನ್ನು ತೆಗೆಯಬೇಕಾಗಿದೆ ಆದರೆ ಯಾವ ನಾಡು ಏಜೀರಿಗಳನ್ನು ತೆಗೆಯುವದೆಂಬುದು ನಿಶ್ಚಯವಾಗಿರುವುದಿಲ್ಲ. ನಿಶ್ಚಯಿಸುವಾಗ ಸೂಚಕರು ಹೇಳಿವ ವಿಷಯಕ್ಕೆ ಗಮನ ಕೊಡಲಾಗುವುದು.

ಮೆ ಜೌಡ್ಲು ಕಾಳಪ್ಪನವರು-ಅಮ್ಮತ್ತಿ ಮತ್ತು ಸಂಟಿಕೊಪ್ಪನಾಡು ಕಛೇರಿಗಳನ್ನು ತೆಗೆಯಬೇಕಲ್ಲದೆ ಫ್ರೇಜರ್‌ಪೇಟೆಯ ಕಚ್ಚೇರಿಯನ್ನೆಂದಿಗೂ ತೆಗೆಯಬಾರದೆಂದರು.

ಮೆ. ಸಿದ್ದಯ್ಯನವರು-ಸರ್ಕಾರದವರು ಈ ವಿಚಾರ ಇನ್ನೂ ಆಲೋಚನೆಯಲ್ಲಿರುವಾಗ್ಯೆ ಅಮ್ಮತ್ತಿಯನ್ನೇ ತೆಗೆಯಬೇಕೆಂದು ಒಬ್ಬ ಮೆಂಬರರು ಹೇಳುವದು ಯುಕ್ತವಲ್ಲವೆಂದರು.

(8 ನೇ ಪುಟಕ್ಕೆ ಹಾಗಿದೆ)

ಕೊಡಗು

ನವಂಬರ್ ತಾರೀಖು ೧೯ನೇ ಶುಕ್ರವಾರ ೧೯೩೮

ಸ್ಕೂಲ್ ಫೀಜು ಏರಿಸುವಿಕೆ.

ಕೊಡಗಿನ ಸರ್ಕಾರಿ ಹೈಸ್ಕೂಲುಗಳ ಫಾರಂನಿಂದ VI ಫಾರಮಿನ ವರೆಗೆ ಇಪ್ಪತ್ತರ ವರೆಗಿದ್ದ ರೂ 22 ವಾರ್ಷಿಕ ಸ್ಕೂಲ್ ಫೀಜನ್ನು 1939 ನೇ ಏಪ್ರಿಲ್ ನಿಂದ ರೂ. 34/-ಕ್ಕೂ, I ಫಾರಂನಿಂದ III ಫಾರಮಿನ ವರೆಗೆ ರೂ 18 ರಿಂದ 22 ಕ್ಕೂ, ಹೈಯರ್ ಎಲಿಮೆಂಟರಿ ತಾಲೆಗಳ ಎಂಟನೇ ಸ್ಟೇಂಡಾರ್ಡಿಗೆ ರೂಪಾಯಿ 10ರವರೆಗೂ, ಮಾಮಿಲತಾ ಫೀಜನ್ನು ಕೆಳ ಫಾರಮುಗಳಿಗೆ ರೂ 1½ ಯಂತೆಯೂ, ಮೇಲಿನ ಫಾರಮುಗಳಿಗೆ ರೂ 2 ರಂತೆಯೂ ಏರಿಸಲಾಗುವದೆಂದು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾಗಿದೆ.

ಈ ರೀತಿ ಸ್ಕೂಲ್ ಫೀಜನ್ನು ಏಕಡ 50 ರಷ್ಟು ಏರಿಸಿದ್ದರಿಂದ ಕೊಡಗಿನ ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಧಕ್ಕೆ ತಗಲುವ ಸಂಬುವರಲ್ಲಿ ವಿಸಾಂಮಾ ಸಂಶಯವಿಲ್ಲ. ಗ್ರಾಮದ ರೈತರ ಆರ್ಥಿಕ ಸ್ಥಿತಿಯು ದಿನೇ ದಿನೇ ಹೀನಾವಸ್ಥೆಗೆ ಬರುತ್ತಿದೆ. ಈ ದೆಸೆಯಿಂದಲೇ ರೈತರಿಗೆ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಬಿಡಲು ಹಲವು ತರಹ ತೊಂದರೆಗಳುಂಟಾಗುತ್ತಿವೆ ಎನ್ನೋ ಜನರು ಇದಕ್ಕಾಗಿ ಸಾಲಸೂಲಿ ಅದನ್ನು ನುರುಸಾವತಿ ಮಾಡಲಾರದೆ ಕಷ್ಟದಲ್ಲಿ ನರಳುತ್ತಿರುವರು ಅದರೊಂದಿಗೆ ಸ್ಕೂಲ್ ಫೀಜನ್ನು ಹೆಚ್ಚು ಮಾಡುವದರಿಂದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬಾರದೆಂಬಂತ್ತಿದ್ದಾ ಮಾಡಿದಂತಾಗುವ ಮೂ ಕೊಡಗಿನಲ್ಲಿ ಇಪ್ಪತ್ತರ ವರೆಗೆ ಸ್ಕೂಲ್ ಫೀ ಜು ಕಡಿಮೆಯಾಗಿರುವ ಪಟ್ಟು ತಾಲೆಗಳು ಗ್ರಾಮಸ್ಥರಿಗೆ ಸಮೀಪವಿರುವ ಅನುಕೂಲತೆಗಳಿಂದ ಈ ಭ್ರಾಂತ್ಯದಲ್ಲಿ ನಿ ದ್ಯಾಭ್ಯಾಸವು ಬೇರೆ ಕಡಗಳಿಗಿಂತ ಹೆಚ್ಚು ಮುಂದುವರಿದಿತ್ತು. ಈಗ ಸ್ಕೂಲ್ ಫೀ ಜನ್ನು ಬಡ ರೈತರು ಕೊಡಲ ರವರ್ಷನಿ ಏರಿಸಿರುವ ಕಾರಣ ಹಲವರು ತಮ್ಮ ಮಕ್ಕ ಳನ್ನು ಶಾಲೆಗೆ ಕಳುಹಿಸದೆ ಬ ಕೆ ಕೂಡ ಬೇಕಾಗುವದೆಂಬುದರಲ್ಲಿ ಸಂಶಯವಿಲ್ಲ ಇದರಿಂದ ಕೆಲವು ಕಡೆ ಶ ಲೆಗಳಲ್ಲಿ ವಿ ಕ್ಕಳ ಸಂಖ್ಯೆಯು ಕಡಿಮೆಯಾಗಿ, ಅಲ್ಲಿಯ ಶಾಲೆಗಳ ಆವಶ್ಯಕತೆಯೇ ಇಲ್ಲದಂತಾಗು ವ ಸಂಭವ್ಯವು ಬಿಲ್ಲಬಹುದು. ಇದರಿಂ ದ ಸ್ಕೂಲ್ ಫೀಜಿಂದ ಸರಕಾರವರಿಗೆ ದೊರೆಯುತ್ತಿರುವ ಉತ್ಪತ್ತಿಯು ಕಡಿಮೆ ಯಾಗುವದೆಂಬುದರಲ್ಲಿ ಅನುಮಾನವಿಲ್ಲ. ಹಣದ ಅಭಾವದ ಕಾರಣ ಸರಕಾರವವರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳ ಬೇಕೆಂಬ ದೃಷ್ಟಿಯಿಂದ ಸ್ಕೂಲ್ ಫೀಜನ್ನು ಏರಿಸುವ ಕಾರ್ಯವನ್ನು ಕೈಕೊಂಡಿದ್ದರೆ, ಅವರ ಉದ್ದೇಶವು ನೆರವೇರುವಂತೆ ತೋರು ವುದಿಲ್ಲ. ಮತ್ತಲ್ಲ ಇದರಿಂದ ದೇಶದಲ್ಲಿ ವಿದ್ಯಾಭ್ಯಾಸವು ಅಭಿವೃದ್ಧಿಗೊಳ್ಳುವದರ ಬದಲು ಹಿಂದಕ್ಕೆ ತಳ್ಳಲ್ಪಟ್ಟಂತಾಗುವುದು. ಇದು ಜನರ ಹಿತವನ್ನು ಸಾಧಿಸಬೇಕೆಂದರುವ ಸರಕಾರದವರ ಧರ್ಮಕ್ಕೆ ಸಂಪೂರ್ಣ ವಿರೋಧವಾಗುವುದು

ಸರ್ಕಾರದವರ ಆದಾಯ ವೆಚ್ಚವನ್ನು ಸರಿಪಡಿಸಲು ಅನರು ಈಗ ಕೈಕೊಂಡಿರುವ ಸಿಬ್ಬಂದಿ ಯೋತೆಯ ಜೊತೆಗೆ ಜನರ ಮೇಲೆ ಈ ರೀತಿಯ ಹೆಚ್ಚಿನ ತೆರಿಗೆಯನ್ನು ಹಾಕದೆ ಸಾಧ್ಯವಿಲ್ಲವೆಂದು ಅಧಿಕಾರಿಗಳು ವಾದಿಸಬಹುದು ಆದರೆ ಕೊಡಗಿನ ಸರ್ಕಾರವು ತಲೆಭಾರವೆ ಸರ್ಕಾರವೆಂದು ಲೋಕವಿಧಿತವಾದ ವಿಚಾರವಾಗಿದೆ ಈ ಸರ್ಕಾರದ ಖರ್ಚನ್ನು ಹೋತೆ ಮಾಡಬೇಕಾದದ್ದು ಅವಶ್ಯ ಅದನ್ನು ದೇಶದ ಜನರ ಪ್ರತಿನಿಧಿಗಳ ಸಲಹೆಯಂತೆ ಮಾಡಿದ್ದೇಯಾದರ ಈಗಿರುವ ದುಂದುಗಾರಿಕೆಯ ಖರ್ಚುನ್ನು ಕಡಿಮೆ ಮಾಡಿ ಸಾಕಷ್ಟು ಉಳಿತಾಯ ಮಾಡಬಹುದಾಗಿದೆ. ಅದರ ಬದಲು ದೇಶದ ಒನರ ಅಭಿಪ್ರಾಯಕ್ಕೆ ಗಣನೆ ಕೊಡದೆ, ಬರೀ ಚಿಕ್ಕ ಉದ್ಯೋಗಳನ್ನು ಹೋತೆ ಮಾಡುವ ಯತ್ನ ದಲ್ಲಿ ಸರ್ಕಾರದವರು ಹೆಚ್ಚಿನ ಹಣವನ್ನು ಉಳಿತಾಯ ಮಾಡಲಾರದವರಾಗಿ ಜನರ ಮೇಲೆ ಸ್ಕೂಲ್ ಫೀಸ ಹೆಚ್ಚಿಸುವಂತ ಹೊಸ ತೆರಿಗೆಯನ್ನು ಹಾಕುತ್ತಿರುವದು ಖಂಡನೀಯವಾಗಿದೆ

ದೇಶದವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಯಾವುದೊಂದೂ ಪ್ರಯತ್ನ ಮಾಡದ ಆವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವದು ಎಂದೂ ನ್ಯಾಯವಲ್ಲ.

ಇತರ ಕಡೆಗಳಲ್ಲಿ ಸ್ಕೂಲ ಫೀಸ ಇಲ್ಲಿಗಿಂತ ದೆಚ್ಚಾಗಿದಯೆಂದು ಸರ್ಕಾರದವರು ಹೇಳಿಹೊದು ಆವರ ಕೂಡಿಗಿನ ಸ್ಥಿತಿಗತಿಗಳಿಗೂ ಹೊರಗಿನವುಗಳಿಗೂ ದೊಡ್ಡ ತಾರತಮ್ಯ ಇದೆ ಎಂದು ಪ್ರಾಂತ್ಯದಲ್ಲಿ ಕೊಡಗಿಗಿಂತ ಹೆಚ್ಚಿನ ಸ್ಕೂಲ್ ಫೀಸ ಇರಯೆಂಬುವುದು ನಿಜ ಈ ಕಾರಣವಿಂದಲೇ ಅಲ್ಲಿಯ ನಿರ್ವಾಹಕರು, ಪಟ್ಟಣಗಳಲ್ಲಿ ವಿದ್ಯಾಭ್ಯಾಸದಲ್ಲಿ ಮುಂದುವರಿತು ಗ್ರಾಮಸ್ಥರು ಹಿಂದುಬಿದ್ದಿರುವದಾಗಿದೆ. ಆದರೆ ಕೊಡಗಿನಲ್ಲಿ ಸ್ಕೂಲ್ ಫೀಸ್ ಕಡಿಮೆಯಾಗಿರುವುದರಿಂದಲೂ, ಗ್ರಾಮಾಂತರಗಳಲ್ಲಿ ಎಲ್ಲೆಲ್ಲಿ ಶಾಲೆಗಳು ಸ್ಥಾಪಿಸಲ್ಪಟ್ಟಿರುವುದರಿಂದಲೂ ಇಲ್ಲಿಯ ರೈತರು ಪಟ್ಟಣಿಗರಂತೆಯೇ ವಿದ್ಯಾಭ್ಯಾಸದಲ್ಲಿ ಮುಂದುವರಿಯಲು ಕಾರಣವಾಗಿದೆ. ಈ ತರವ ಅನುಕೂಲತೆಗಳು ಮುಂದಕ್ಕೂ ಇರಬೇಕೆಂದೇ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇಟ್ಟುಕೊಳ್ಳಬೇಕೆಂಬ ಹಲವರು ಅಭಿಪ್ರಾಯಪಡುತ್ತಿರುವದಾಗಿದೆ ಆದ್ದರಿಂದ ಮದ್ರಾಸು ಪ್ರಾಂತ್ಯದ ಸ್ಕೂಲ್ ಫೀಸಿನ ದರವನ್ನು ಹೋಲಿಸಿ ಇಲ್ಲಿಯದನ್ನು ಹೆಚ್ಚಿಸುವದರಲ್ಲಿ ಆರ್ಥವಿಲ್ಲ. ಇಲ್ಲಿಯ ಸರ್ಕಾರದವರು, ಕೊಡಗು ವಿದ್ಯಾಭ್ಯಾಸದಲ್ಲಿ ಮುಂದುವರಿದಿದೆಯೆಂಬ ಕೀರ್ತಿಯನ್ನು ಮುಂದಕ್ಕೂ ಕಾಪಾಡಬೇಕೆಂದಿದ್ದರೆ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಹೆಚ್ಚಿಸುವ ವಿಚಾರವನ್ನು ನೋಡುವುದು ಯುಕ್ತವಲ್ಲ. ಯಾವ ಸರ್ಕಾರವೇ ಆಗಲಿ ದೇಶದ ಮುಂದಿನ ಜನತಾಂಗದ ಅಭಿವೃದ್ಧಿಯ ದೃಷ್ಟಿಯಿಂದ ಆವರ ವಿದ್ಯಾಭಿವೃದ್ಧಿಗೆ ಹೆಚ್ಚಿಚ್ಚಿನ ಅನುಕೂಲತೆಗಳನ್ನು ಮಾಡಿಕೊಡುವದು ಅವರ ಕರ್ತವ್ಯವಾಗಿದೆ. ಆದರೆ ಬದಲು ವಿದ್ಯಾಭ್ಯಾಸಕ್ಕೆ ದೊಡ್ಡ ಅಡಚಣೆ ಆಗುವಂತಾ ವಿಚಾರವನ್ನು ಇಲ್ಲಿಯ ಸರ್ಕಾರದವರು ಕೈಕೊಳ್ಳುವುದು ಶೋಚನೀಯವಾಗಿದೆ. ಇನ್ನಾದರೂ ಸಮ್ಮಂಧಪಟ್ಟ ಅಧಿಕಾರಿಗಳು ಚೆನ್ನಾಗಿ ಆಲೋಚಿಸಿ ಸ್ಕೂಲ್ ಫೀಸನ್ನು ಹೆಚ್ಚಿಸದೆ ಈಗಿರುವ ದರವನ್ನೇ ಇಡುವಂತೆ ನಿಶ್ಚಯಿಸುವರಾಗಿ ಆಶಿಸುತ್ತೇವೆ

ಸಂಸ್ಕೃತಕ್ಕೂ ಯೋತೆಯೇ?

ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳಲ್ಲಿ ಇರುವ ಇಬ್ಬರು ಸಂಸ್ಕೃತ ಪಂಡಿತರುಗಳಲ್ಲಿ ಯೋತೆಯನಾದರೂ ಮಾಡಲ್ಪಡುವುದೋ ಎಂದು ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ಪ್ರಶ್ನೆ ಕೇಳಿದ್ದೆ. ಈ ವಿಷಯವು ಆಲೋಚನೆ ಮಾಡಲ್ಪಡುತ್ತಿದೆಯೆಂದೂ, ಮುಸಹ ಕೇಳಿದ ಮರು ಪ್ರಶ್ನೆಗಳಿಗೆ ಸಂಸ್ಕೃತ ಭಾಷೆಯು ಮೃತ ಭಾಷೆಯೆಂದೂ, ಊರ್ದು ಭಾಷೆಯು ಆಧುನಿಕ ಜೀವಿತ ಭಾಷೆಯೆಂದೂ ಮಾಮಲಾಗಿ ವಿದ್ಯಾಇಲಾಖಾ ಮೆಂಬರರು ಕೂಚ್ಚ ಜವಾಬನ್ನು ಕುರಿತು ಕಳೆದ ವಾರ ಪ್ರಕಟಗೊಳ್ಳಿದ ಬಾತ್ಮಿಯನ್ನು ವಾಚಕ ಮಹಾಶಯರೂ, ಸರ್ಕಾರದ ಅಧಿಕಾರಿಗಳೂ ಓದಿರಬಹುದು. ಸಂಸ್ಕೃತ ಮತ್ತು ಊರ್ದು ಭಾಷೆಗಳನ್ನು ಕುರಿತು ತಾಲಾ ಇನೆಸ್ಪೆಕ್ಟರವರು ಕೊಟ್ಟ ತಮ್ಮ ವಯಕ್ತಿಕ ತಭಿಪ್ರಾಯವನ್ನು ಕುರಿತು ಕಳೆದ ವಾರದ ಬಾತ್ಮಿಯಲ್ಲಿ ಯಥೋಚಿತವಾಗಿ ರೀಕೆಸಲ್ಪಟ್ಟಿತ್ತು. ಅದನ್ನು ಕುರಿತು ಪುನಹ ಇಲ್ಲಿ ಬರೆಯುವ ಆವಶ್ಯಕತೆ ಇಲ್ಲ ಆದರೆ ಸಂಸ್ಕೃತ ಭಾಷೆಯನ್ನು ಇವರಡು ಹೈಸ್ಕೂಲುಗಳಲ್ಲಿ ಕಲಿಸಲು ಸುಮಾರು ಹದಿಮೂರು ವರ್ಷಗಳ ಹಿಂದ ವಿದ್ಯಾರ್ಥಿಸಿದ್ದು ಜಿ ಗ್ರಹಿಗೊಂಡ ಜನರ ಕೋರಿಕೆ ಮೇರೆ ಎಂಬುದನ್ನು ಸರ್ಕಾರದವರು ಮರೆಯಬಾರದು ಜನರ ಇಂಥಾ ಕೋರಿಕೆಯು ಈಗ ಮತ್ತಷ್ಟು ಬಲವಾಗಿರುವುದಲ್ಲದೆ, ಅದರ ಶಕ್ತಿಯೇನೂ ಕುಂದಿರುವುದಿಲ್ಲ. ಮುಸಲ್ಮಾನರ ಸಂಸ್ಕೃತಿಯ ಅಭಿವೃದ್ಧಿಗೆ ಊರ್ದು ಭಾಷೆಯು ಎಷ್ಟು ಸ್ವಾಮುಖ್ಯವಾದದ್ದೋ ಅಷ್ಟೇ ಸಂಸ್ಕೃತ ಭಾಷೆಯು ಹಿಂದೂಗಳ ಸಂಸ್ಕೃತಿಯ ಬೆಳವಣಿಗೆಗೆ ಅವಶ್ಯವಾದದ್ದು. ಇವೆರಡು ಶಾಲೆಗಳಲ್ಲಿ ಊರ್ದು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ 35. ಮತ್ತು ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ 153. ಸಂಸ್ಕೃತ ಕಲಿಯುವ ಮಕ್ಕಳ ಸಂಖ್ಯೆ ಹೆಚ್ಚಿದ್ದರೂ ಕೂಡ ಸಂಸ್ಕೃತ ಪಂಡಿತನೊಬ್ಬರನ್ನು ಮಾತ್ರ ಹೋತೆ ಮಾಡುವ ಆಲೋಚನೆ ನೂಡುವುದು ಎಂಬೂ ನ್ಯಾಯವೆನಲ್ಲ. ಊರ್ದು ಪಂಡಿತರನ್ನು ತೆಗೆಯಬೇಕೆಂಬ ನಮ್ಮ ಸೂಚನೆಯಲ್ಲ. ಎರಡು ಭಾಷೆಗಳನ್ನೂ ಹೈಸ್ಕೂಲು ವಿದ್ಯಾರ್ಥಿಗಳಿಗೆ ಕಲಿಸುವುದು ಆತ್ಯಗತ್ಯ ಇವೆರಡು ಭಾಸೆಗಳಿಗೂ ಏಕ ರೀತಿಯ ಪ್ರಾಮುಖ್ಯತೆಯನ್ನು ಕೊಡಬೇಕು ಒಂದು ಭಾಷೆಯ ಪಂಡಿತರನ್ನು ತೆಗೆಮು, ಇನ್ನೊಂದರ ಪಂಡಿತರನ್ನು ಇಟ್ಟುಕೊಳ್ಳುವ ಅಧಿಕಾರಿಗಳ ಭೇಧ ಭಾವವು ಖಂಡನೀಯವಾಗಿದೆ ಸರ್ಕಾರದವರ ಈ ತರಹದ ನರ್ತನೆಯು ಜನರಲ್ಲಿ ಕೋಮುವಾರು ನೈರಸ್ಯವನ್ನು ಹುಟ್ಟಿಸಲು ಅವಕಾಶ ಮಾಡಿಕೊಡುವದೋ ಎಂಬ ಸಂಶಯಕ್ಕೆ ಆಸ್ಪದಕೊಡುತ್ತೆ. ಈ ತರಹದ ಯೋತೆಯಿಂದಲಾದರೋ ದೊಡ್ಡ ಉಳಿತಾಯವೇನೂ ಆಗುವಂತಿಲ್ಲ. ಮುಂದೆ ಬರುವ ಪಂಡಿತರುಗಳ ಸಂಬಳದ ದರವು ಕಡಿಮೆಯಾಗಿರುವುದರಿಂದ ಇವಕ್ಕಾಗಿ ಹೆಚ್ಚಿನ ವೆಚ್ಚವೇನೂ ಇಲ್ಲ. ದೊಡ್ಡ ದೊಡ್ಡ ಗಜಬೆಡ್ ಉದ್ಯೋಗನ್ಥರುಗಳಿಗೆ ಸಾವಿರಗಟ್ಟಲೆ ರೂಪಾಯಿ ಸಂಬಳ ಮಾತ್ರ ವಲ್ಲ, ಹಲವು ತರವ ಎಲೋವೆನ್ಸ್‌ಗಳನ್ನು ಕೊಡಲು ದುಂದು ಖರ್ಚು ಮಾಡುವ ಸರ್ಕಾರದವರು ಹಿಂದೂ ಸಂಸ್ಕೃತಿಗೆ ಬಹು ಮುಖ್ಯವಾದ ಸಂಸ್ಕೃತ ಭಾಷೆಯನ್ನು ಕಲಿಸಲು ಬೇಕಾಗುವ ಅಲ್ಪ ಮಾಬಲಗನ್ನು ಕೂಡಲು ತಿರಸ್ಕರಿಸಂಬುದರಲ್ಲಿ ಆರ್ಥವಿಲ್ಲ ಇದರಿಂದ ದೇಶದಲ್ಲಿ ಎಂಬಾ ಅಶ್ಚರ್ಯವು ಉಂಟಾಗದಿರದು ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ, ಈ ವಿಚಾರದಲ್ಲಿ ಒಲ್ಪ ಸಾಬಲಗಿನ ಉಳಿತಾಯಕ್ಕಾಗಿ ಯೋತೆ ಮಾಡಿ ಜನರ ರನಸ್ಸನ್ನು ನೋಯಿಸಲಿಕ್ಕಿಲ್ಲವಾಗಿ ನಂಬುತ್ತೇವೆ

ಸಿಬ್ಬಂದಿ ಯೋತೆ.

ಕೊಡಗಿನ ಸರ್ಕಾರದವರು ಕೈಕೊಂಡಿರುವ ಸಿಬ್ಬಂದಿ ಯೋತೆಯ ರೀತಿಯನ್ನು ಕುರಿತು ಕೌನ್ಸಿಲಿನ ಒಳಗೂ, ಹೊರಗೂ ಬೇಕಾದಷ್ಟು ರೀತಿಗಳು ಮಾಡಲ್ಪಟ್ಟಿವೆ ಚೀಫ್ ಕಮಿಷನರಾದ ಕೌನ್ಸಿಲ್ಲಿನಲ್ಲಿಯೂ, ಪಬ್ಲಿಸಿಟಿ ಸಿಸರಿಗೂ ಹೇಳಿಕೆ ಮಾತುಗಳಿಂದ 30 ವರ್ಷಕ್ಕಿಂತ ಹೆಚ್ಚು ಸರ್ವಿಸ್ಸಿಗಿ ಸೂರ್ತಿ ಸನ್ಮಾನ ಗಳಸಿಸುವ ವರನ್ನು ಮಾತ್ರ ಯಾಲಗಿಯೂ, ಇದು ಸರಿ ಇದ್ದರೆ 25 ವರ್ಷಕ್ಕಿಂತ ಹೆಚ್ಚು ಸರ್ವಿಸಾದವರನ್ನೂ, ಉದ್ಯೋಗದಿಂದ ಬಿಡುಗಡೆ ಮಾಡಲಾಗುವದೆಂದೂ, ಕಮ್ಮಿ ಸರ್ವಿಸಿನವರನ್ನು ಎಂದಿಗೂ ತೆಗೆಯುವುದಿಲ್ಲವೆಂದೂ ಅರ್ಥವಾಗಿತ್ತು. ಈ ವಿಧಾನವನ್ನು ಸರ್ಕಾರದವರು ಕೈಕೊಂಡರೆ ಬೊಕ್ಕೂ ಹೆಚ್ಚಿನ ಅನ್ಯಾಯವಾಗಲಿಕ್ಕಿಲ್ಲವೆಂದು ಹಲವರ ಅಭಿಪ್ರಾಯವಾಗಿದೆ. ಆವರೆ ಈ ರೀತಿಯನ್ನು ಕೈಕೊಳ್ಳುವರೋ ಎಂಬ ಸಂಶಯವು ಇತ್ತಲಾಗಿ ಹುಟ್ಟಿದೆಯೆಂದು ಸುದ್ದಿ. ಸರ್ಕಾರದವರು ತಾವು ಕೊಟ್ಟ ಮಾತಿಗೆ ವಿರೋಧ ಹೋಗಲಿಕ್ಕಿಲ್ಲವೇ ದೂ, ಹೆಚ್ಚಿನ ಸರ್ವಿಸಿನವರನ್ನೇ ಮೊದಲು ರಿಟಯರ್ ಮಾಡಿಸಿ ಜನರಲ್ಲಿರುವ ಅಶ್ಚಿತ್ತಿಯನ್ನು ಹೋಗಲಾಡಿಸುವರೆಂದೂ ನಂಬುತ್ತೇವೆ.

ಕೌನ್ಸಿಲ್ ವಿಷಯಗಳು.

(5ನೇ ಪುಟದಿಂದ ಸಾಗಿದ್ದು)

ಮೆ. ಪಿ. ಐ. ಬೆಳ್ಯಪ್ಪನವರು–ಯಾವ ನಾಡು ಕಚ್ಚೇರಿಯನ್ನು ತೆಗೆಯಬಾರದೆಂಬ ಸಭೆಯವರು ಸಾಸುನೂಡಿದ ಮೇಲೆ ಇದೊಂದು ನಾಡು ಕಚ್ಚೇರಿಯನ್ನು ಮಾತ್ರ ತೆಗೆಯಬಾರದೆಂಬ ರೂಲವು ತಂದಿದ್ದರಲ್ಲಿ ಅರ್ಥವಿಲ್ಲ. ಎರಡು ನಾಡು ಕಚ್ಚೇರಿಗಳನ್ನು ತೆಗೆಯಲೇ ಬೇಕೆಂದು ಸರ್ಕಾರದವರು ಹೇಳಿದ ಮೇಲೆ ಫ್ರೇಜರ್‌ಪೇಟೆ ನಾಡು ಖಚೇರಿಯನ್ನು ತೆಗೆಯಬಾರದೆಂಬ ನಾವು ಹೇಳುವುದಾದರೆ ಉಳಿದ ಹತ್ತು ನಾಡು ಖಚೇರಿಗಳಲ್ಲಿ ಯಾವುದನ್ನಾದರೂ ತೆಗೆಯಬಹುದೆಂಬ ನಾವು ಒಪ್ಪಿಗೆ ಕೊಟ್ಟಂತಾಗುವುದು. ಆದ್ದರಿಂದ ಸೂಚಕರು ಠರಾವನ್ನು ವಾಪಸು ತೆಗೆದುಕೊಳ್ಳುವುದು ಉತ್ತಮ. ಇಲ್ಲವಾದರೆ ನಾವು ಇವನ್ನು ವಿರೋಧಿಸುವ ಕಷ್ಟಕ್ಕೀಡಾಗಬೇಕಾಗುವುದು.

ಮೆ. ಎನ್. ಸೋಮಣ್ಣನವರು–ಈ ನೊದಲು ವಾಸು ಮೂಡಿದ ಠರಾವಿಗೂ ಇದಕ್ಕೂ ವಿರೋಧವಿಲ್ಲ. ಈ ಹೋಬಳಿಯು ಬಹಳ ಹಿಂದೆ ಬಿದ್ದಿರುವ ಕಾರಣ ಇಲ್ಲಿಯ ಖಚ್ಚೇರಿಯನ್ನು ತೆಗೆಯಕೂಡದೆಂದೇ ನನ್ನ ಒತ್ತಾಸೆಯಾಗಿದೆ.

ಮೆ. ಮಲ್ಲಪ್ಪನವರು ಉತ್ತರ ಕೊಟ್ಟ ಮೇಲೆ ಠರಾವನ್ನು ಓಟಿಗೆಹಾಕಲಾಗಿ,ಮೂರುಲ್ ಯರು ಮೆಂಬರುಗಳು, ನೆ. ಯಂ. ಯಂ. ಬೆಳ್ಯಪ್ಪನವರು, ಮೆ. ಕಾಳಪ್ಪನವರು ಮತ್ತು ಅಬ್ದುಲ್ ರಹಮಾನ್ ಖಾನ್‌ರವರು ಪರವಾಗಿಯೂ, ಕಾಂಗ್ರೆಸ್ ಎಂಬು ಮೆಂಬರುಗಳು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ. [ಸಂಜೆ.

ಬಾ ತ್ತಿ.

[ಬಾತ್ಮದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ ಸಂ. ಕೊ

—೦೦—

ವೀರಾಜಪೇಟೆ ಹೈಸ್ಕೂಲು ನುರಗೆಲಸದ ಶಾಖೆ.

ಈ ನುರಗೆಲಸದ ತರಗತಿಯನ್ನು ಹಿಂದೆ ಡ್ರಿಲ್ ಮೂಡುತ್ತಿದ್ದ ಕಟ್ಟಡದೊಳಗೆ ನಡಿಸುತ್ತಿದ್ದರು. ಆಗ ಅದರೊಳಗೆ ಹಾಕಿದ ಮರಳನ್ನು ಇನ್ನೂ ತೆಗೆದಿರುವುದಿಲ್ಲ. ಇದರೊಳಗೆ ಹುಡುಗರು ಹೋಗಿ ಕೆಲಸ ಮಾಡುತ್ತಿರುವಾಗ ಯಾರಾದರೂ ಅಲ್ಲಿಗೆ ಹೋದರೆ ಎಷ್ಟು ಧೂಳು ಏಳುತ್ತದೆಂದೂ, ಆದರಿಂದ ಮುಂದಿನ ಜನಾಂಗವನ್ನು ಉದ್ಧರಿಸಲುಳ್ಳ ಶಾಲಾ ಬಾಲಕರ ಪೋಷಕರ ಬೆಳವಣಿಗೆಗೆ ಎಷ್ಟು ಹಾನಿಕರವೆಂಬ, ಎಂಥಾ ಮೂಢನಿಗೂ ತಿಳಿಯುವುದು. ನುಕ್ಕಳ ತಂದೆ ತಾಯಿಗಳು ಇದನ್ನು ಕಂಡರೆ ಅವರ ಬಾಲಕರನ್ನು ಆ ತರಗತಿಗೆ ಕಳುಹಿಸಬೇಡವೆಂದು ಹೇಳುವರೆಂದು ನಾನು ಖಂಡಿತ ಹೇಳಬಲ್ಲೆ.

ಆ ವಿಷಯವಾಗಿ ಕೌನ್ಸಿಲ್ಲಿನಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಆದಕ್ಕೆ ತಾಲೂ ಇನ್ಸ್‌ಪೆಕ್ಟರು ಕೊಟ್ಟ ಜವಾಬನ್ನು ನೋಡಿದರೆ ಮೆಂಬರುಗಳನ್ನು ಇಂಗ್ಲಿಷಿನಲ್ಲಿ 'Quibble' ಮೂಲಕ ಹೇಗೆ ಮರಳುಗೊಳಿಸಿದರೆಂಬೂ, ಕೇಳಿದ್ದನ್ನು ಬಿಟ್ಟು ಕೇಳದ್ದಕ್ಕೆ ಜವಾಬು ಕೊಟ್ಟರೆಂಬೂ ಚೆನ್ನಾಗಿ ತಿಳಿಯುತ್ತೆ. ಇನ್ನೊಮ್ಮೆ ಆ ಪ್ರಶ್ನೆಗಳನ್ನೂ ಜವಾಬನ್ನೂ ನೋಡಿದರೆ ಇನ್ಸ್‌ಪೆಕ್ಟರ್ ಸಾಹೇಬರಿಗೆ ಸಂತೋಷವಾಗದಿರದು.

ಈ ಕಟ್ಟಡವನ್ನು ಇನ್ಸ್‌ಪೆಕ್ಟರೂ ಹೆಲ್ತ್ ಆಫೀಸರೂ ನೋಡಿದ್ದಾರೋ ಎಂಬದಕ್ಕೆ ತಾನು ನೋಡಿದ್ದೇನೆಂದೂ, ಹೆಲ್ತ್ ಆಫೀಸರು ನೋಡಿದ್ದಾರೆ ಯೂ ಇಲ್ಲವೆಂಬುದನ್ನು ಹೇಳುವುದು ಬಿಟ್ಟು ತಾನು ಮತ್ತು ಎಕ್ಸಿಕ್ಯುಟಿವ್ ಇಂಜಿನೀಯರು ನೋಡಿದ್ದೇನೆ ಎಂದರು. ಎಕ್ಸಿಕ್ಯುಟಿವ್ ಇಂಜಿನೀಯರ್ ನೋಡಿದ್ದಾರೋ ಎಂದು ಕೇಳಲೇ ಇಲ್ಲ. ಇಂಥಾ ಜವಾಬು ಆಂಗಡಿಗೆ ಹೋಗಿ ಒಂದು ವಾಸನೂಸು ಇದೆಯೋ ಎನ್ನುವಾಗ ಅದಲ್ಲ ಇದದೆ ಎಂದಂತಾಯಿತು.

ಸದರಿ ಕಟ್ಟಡವನ್ನು ಧೂಳಿಲ್ಲದೆಯೂ ಕೆಲಸ ಮಾಡಲಿಲ್ಲವೆಂಬುದಕ್ಕೆ, ಯಾವ ಕಟ್ಟಡದಲ್ಲಾದರೂ ಧೂಳು ಸೇರದೆ ಮೂಡಲಿಕ್ಕಾಗುವುದಿಲ್ಲವೆಂಬ ಜವಾಬು ಬಂತು. ಈ ಸಮಾಚಾರ ಎಲ್ಲರಿಗೂ ಗೊತ್ತಿದೆಯೇ ಯೂ ಈಗ ಗೊತ್ತಾಯಿತೋ ಎಂಬ ವಾಚಕರೇ ಊಹಿಸಲಿ.

ಈ ಕಟ್ಟಡವನ್ನು ದುರಸ್ತು ಮಾಡಲು ಹಣವಿರಲಿಲ್ಲ ಎಂದು ಕತೆಗೆ ಹೇಳಿದರು. ಆದರೆ ಇಲ್ಲಿಯಣ ಹುಡುಗರು 1933ನೇ ಇಸವಿಯಿಂದಲೇ ಧೂಳು ತಿನ್ನುತ್ತಿದ್ದರೂ ಅದನ್ನು ದುರಸ್ತು ಮಾಡಲು ಹಣವಿಲ್ಲ. ಮಡಿಕೇರಿಯಲ್ಲಿ ಈ ವರ್ಷ ಸದರಿ ತರಗತಿಯನ್ನು ತೆರೆಯುವ ನೊದಲು ಅಲ್ಲಿಯ ಡ್ರಿಲ್ ಕಟ್ಟಡದ ನೆಲವನ್ನು ದುರಸ್ತು ಮಾಡಿದರಲ್ಲ, ಆವಕ್ಕೆ ಹಣ ಹೇಗೆ ಬಂತೆಂದು ಕೇಳಿದಕ್ಕೆ ಸರಿಯಾದ ಜವಾಬೇ ಇಲ್ಲ. ನೊನಲು ಕೊಟ್ಟ ಜವಾಬು ನೋಡಿಕೊಳ್ಳಿ ಎಂದು ಹೇಳಿರುವರು.

ಇಂಥಾ ಉತ್ತರದಿಂದ ಪ್ರಶ್ನೆ ಕೇಳಿದವರಿಗೆ ಎಷ್ಟು ತೃಪ್ತಿಯಾಯಿತೋ ತಿಳಿಯದು ಆದರೆ ಇಂಥಾ ಜವಾಬಿನಿಂದ ವೀರಾಜಪೇಟೆ ಶಾಲಾ ಬಾಲಕರ ತಂದೆ ತಾಯಿಗಳಿಗೆ ಮನ ನೊಂದಿದೆಯೆಂದು ಶಾಲಾ ಇನ್ಸ್‌ಪೆಕ್ಟರು ಚೆನ್ನಾಗಿ ತಿಳಿಬೇಕು. ಸರ್ಕಾರಕ್ಕೆ ಸಹ ಮುಖ್ಯ ಪಟ್ಟಣವಲ್ಲಿ ನುತ್ತು ಆದರ ಹತ್ತಿರವಿರುವವರ ಹೆದರಿಕೆಯೂ ಆವರನ್ನು ತೃಪ್ತಿಗೊಳಿಸಬೇಕೆಂಬ ಆಶೆ ಇದೆಯೆಂದೂ ಮೊರದಲ್ಲಿರುವವರ ಹೇಳಿಕೆಗೆ ಗಮನ ಕೊಡಬೇಕಾಗಿಲ್ಲವೆಂದೂ, ಅವರಿಗೂ ನ್ಯಾಯ ತೋರಿಸಬೇಕೆಂಬ ಅಪೇಕ್ಷೆ ಸರ್ಕಾರಕ್ಕೆ ಇಲ್ಲವೆಂದೂ ಈ ವಿಷಯದಿಂದ ತಿಳಿದಂತೆ ನನಗೆ ತೋರುತ್ತದೆ.

ಮಕ್ಕಳ ತಂದೆ.

COORG FOREST DEPAETMENT,
Mercara, the 31st Oct. 1938,

SALE NOTICE.

Tenders are invited for clear felling and removing junglewood & branch pieces, etc,, from 1938 Devamachi Coupe in Titthimatti Range and Begur Paisaris in Nagerhole Range. Each tender should be accompanied by Earnest Money Deposit of Rs. 100 and 50 in currency notes and reach the Divisional Forest Officer, South, on or before 12 noon on 15-11-1938.

For further particulars please apply to the Divisional Forest Officer, South Coorg, Mercara.

COORG CIVIL SURGEON'S OFFICE,
Mercara, the 26th Oct. 1938.

NOTICE.

Sealed tenders will be received at the Civil Surgeon's Office, Mercara, up to 11 a m. on Friday the 20th January 1939, for the supply by contract of all articles of diet, etc., required separately for the use of the in-patients of (1) Mercara, (2) Virajpet and (3) Somwarpet, from 1st April 1939 to 31st March 1940 (both days inclusive).

For further particulars, apply to the Medical Officer in charge of the hospital concerned.

G. P. Charlewood,
Captain, I. M. S.,
Civil Surgeon, Coorg.

ನೋಟೀಸು.

(1) ಮಡಿಕೇರಿ, (2) ಸೋಮವಾರ ಪೇಟೆ ಮತ್ತು (3) ವೀರಾಜಪೇಟೆ ಆಸ್ಪತ್ರೆಗಳಲ್ಲಿರುವ ಕಾಯಿಲೆಸ್ಥರ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕಂಟ್ರಾಕ್ಟು ಮೂಲಕ 1939ನೇ ಏಪ್ರಿಲ್ 1ರಿಂದ 1940ನೇ ಮಾರ್ಚ್ 31ರ ವರೆಗೆ (ಈ ಎರಡು ದಿನಗಳು ಸೇರಿ) ಈ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿಕೊಡಲು ಮುದ್ರೆ ಹಾಕಿದ ದರಕಾಸ್ತುಗಳು (ಟೆಂಡರ್) 1939ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವದು. ಸದರಿ ದರಕಾಸ್ತುಗಳನ್ನು ಅದೇ ದಿವಸ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವದು.

ಶರತ್ತುಗಳಿಗೂ, ಹೆಚ್ಚಿನ ವಿವರಗಳಿಗೂ ಅಸಿಸ್ಟೆಂಟ್ ಹೆಲ್ತ್ ಆಫೀಸರ್, ಕೊಡಗು, ಮಡಿಕೇರಿ ಅಥವಾ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವದು.

ಜಿ. ಪಿ. ಚಾರ್ಲಿವುಡ್,
ಕ್ಯಾಪ್ಟನ್, ಐ. ಯಂ. ಎಸ್.,
ಸಿವಿಲ್ ಸರ್ಜನ್, ಕೊಡಗು.

COORG FOREST DEPARTMENT,
SOUTH DIVISION,
Mercara, the 5th Nov. 1938.

Timber Sale Notice.

For sale by public auction on 17-11-1938 at Hunsur Depot commencing at 10 a. m. approximately, 9307 cft. of teak, 625 cft. of teak branch pieces, 1639 cft. of biti, 21 cft. of biti branch pieces, 6458 cft. of honne, 181 cft. of honne branch pieces 496 cft. of matti, 32 cft of matti branch pieces, 9018 cft. of nandi and 43 cft. of nandi branch pieces lying ex-forest depots of Titthimatti and Somwarpet Ranges.

The timber is open for inspection.

For further particulars apply to the Divisional Forest Officer, South Coorg, Mercara,

---

COORG CIVIL SURGEON'S OFFICE,
Mercara, the 26th Oct. 1938,

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1939 to 31st March 1940, will be received at the Civil Surgeon's Office, Mercara, up to 11 a. m. on Friday the 20th January 1939.

For terms and other particulars, apply to the Assistant Health Officer, Coorg, Mercara, or the Civil Surgeon's Office at Mercara.

G. P. Charlewood,
Captain, I. M. S.,
Civil Surgeon, Coorg.

ನೋಟೀಸು.

1939ನೇ ಏಪ್ರಿಲ್ 1ರಿಂದ 1940ನೇ ಮಾರ್ಚ 31ರ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಇಲಾಖೆಗೆ ಕರಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿರುವ ದರಕಾಸ್ತುಗಳು (ಟೆಂಡರ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1939ನೇ ಜನವರಿ ತಾರೀಕು 30ನೇ ಸೋಮವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವದು.

ಶರತ್ತುಗಳಿಗೂ, ಹೆಚ್ಚಿನ ವಿವರಗಳಿಗೂ ಅಸಿಸ್ಟೆಂಟ್ ಹೆಲ್ತ್ ಆಫೀಸರ್, ಕೊಡಗು, ಮಡಿಕೇರಿ ಅಥವಾ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವದು.

ಜಿ. ಪಿ. ಚಾರ್ಲಿವುಡ್,
ಕ್ಯಾಪ್ಟನ್ ಐ. ಎಂ. ಎಸ್.
ಸಿವಿಲ್ ಸರ್ಜನ್, ಕೊಡಗು.

ಬಳದೇಶ.

ತಾರೀಕು 5-11-38 ರಲ್ಲಿ ಕೊಡಗಿನ ಎಲ್ಲಾ ಸಹಕಾರಿ ಯೂನಿಯನ್ ಸೆಂಟರುಗಳಲ್ಲಿ ಅಖಿಲ ಭಾರತ ಸಹಕಾರಿ ದಿನವನ್ನು ಆಚರಿಸಲ್ಪಟ್ಟಿತು.

ಮೂರ್ನಾಡು

ಇಲ್ಲಿಯ ಹೈಯರ್ ಎಲಿಮೆಂಟರಿ ಶಾಲೆಯ ಪೋಷಕರ ದಿನೋತ್ಸವವು ತಾ. 10 ನೇ ಗುರುವಾರ ಕೊಡಗು ಶಾಲೆಗಳ ಡಿ. ಇನ್ಸ್‌ಪೆಕ್ಟರ್ ಶ್ರೀ ಬಿ. ಎಸ್. ಕುಶಾಲಪ್ಪ ಬಿ. ಎ., ಡಿ. ಇ. ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಮಡಿಕೇರಿ.

ಮೈಸೂರಿನ ಹರಿಕಥಾ ವಿದ್ವಾಂಸರೂ ಪದ್ಮಸಂಗೀತ ರತ್ನ ಶ್ರೀ ಸೀತಾರಾಮು ಶಾಸ್ತ್ರಿಯವರು ವೇದಾಂತ ಸಂಘದ ಆಶ್ರಯದಲ್ಲಿ 'ರುಕ್ಮಿಣಿ ಕಲ್ಯಾಣ'ವೆಂಬ ಹರಿಕಥೆಯನ್ನು ಸ್ವಾರಸ್ಯವಾಗಿ ಹೇಳಿದರು.

ಇಲ್ಲಿಯ ವೇದಾಂತ ಸಂಘದ ವಿಶೇಷ ಮಹಾ ಸಭೆಯು ತಾರೀಕು 13 ನೇ ಭಾನುವಾರ ಸಂಘದ ಹಾಲ್‌ನಲ್ಲಿ ಶ್ರೀ ಸಿ. ಯಂ. ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಇಲ್ಲಿ 11-9-38 ರಲ್ಲಿ ನಡೆದ ಪ್ರಾಥಮಿಕ ಹಿಂದೀ ಪರೀಕ್ಷೆಯಲ್ಲಿ ಶ್ರೀ ಐ. ಬಿ. ಮತ್ತಪ್ಪನವರೂ, ಶ್ರೀಮತಿ ಎಚ್. ಪಿ. ಎಗ್ಗಮ್ಮನವರೂ, ಮಾಧ್ಯಮಿಕ ಪರೀಕ್ಷೆಯಲ್ಲಿ ಶ್ರೀಮತಿ ಎಚ್. ಟಿ. ಲೀಲಾ, ಶ್ರೀಯುತರುಗಳಾದ ಕೆ. ವೆಂಕಟಗಿರಿರಾವ್ ಬಿ. ಎ., ಎಲ್ ಎಲ್. ಬಿ., ಯಂ. ಯನ್. ಕೇಶವಭಟ್ಟರು ಮತ್ತು ಬಿ. ಕೆ. ರಾಮಕೃಷ್ಣರನರೂ ತೇರ್ಗಡೆಯಾಗಿರುವರು.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಸಹಾಯಾರ್ಥವಾಗಿ, ಹೈಸ್ಕೂಲ್ ಹಾಲಿನಲ್ಲಿ ಕೀರ್ತನ ರತ್ನ ಕೆ. ಎಸ್. ನಿತ್ಯಾನಂದ ಶಾಸ್ತ್ರಿಯವರು ತಾ. 14 ನೇ ಸೋಮವಾರ 5-30 ಗಂಟೆಗೆ ಸಂಗೀತ ಖಚೇರಿ ನಡೆಸುವದಾಗಿ ಫಂಡಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇಲ್ಲಿ ಯಾಲಕ್ಕಿ ಮಣಿಕ್ಕೆ ರೂ. 23 ಕಾಫಿ ಖಂಡಿಗೆ ರೂ. 105 ಕ್ರಯವಿದ್ದಾಗ ತಿಳಿಯುತ್ತೇನೆ.

ಪಬ್ಲಿಕ್ ಎಕೌಂಟ್ಸ್ ಕಮಿಟಿಯ ಮಿಟಿಂಗು ಈ ತಾ. 12 ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯುವುದು. ಈ ಮಿಟಿಂಗಿನ ಉದ್ದಿಶ್ಯ ಮದ್ರಾಸು ಪ್ರಾಂತ್ಯ ಎಕೌಂಟೆಂಟ್ ಜನರಲರಾದ ಮೆ. ಪಿ. ಕೆ. ವಟ್ಟಾಲರವರು ಈ ದಿನ ಇಲ್ಲಿಗೆ ಬರಲಿರುವರು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮಿಟಿಂಗು ಈ ತಾ. 20 ರಲ್ಲಿ ಬೆಳಿಗ್ಗೆ 11 ಗಂಟೆಗ್ಕೂ, ಸುಪರ್‌ವಿಜನ್ ಬೋರ್ಡಿನ ಮಿಟಿಂಗು ಸಾಯಂಕಾಲ 3 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿವೆ.

'ಕೊಡಗು' ಕಂಪನಿಯ ಶೇರುದಾರರ ವಾರ್ಷಿಕ ಜನರಲ್ ಮಿಟಿಂಗು ಈ ತಾ. 26 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆ ಅಂಜುಮನ್ ಹಾಲ್‌ನಲ್ಲಿ ನಡೆಯುವುದು.

ವರ್ತಮಾನ ಸಂಗ್ರಹ.

ವೀಮಂಗಲ.

ಇಲ್ಲಿ ಕಳೆದ ವಾರ ಮಳೆ ಬಿದ್ದಿರುವದರಿಂದ ಬೆಳೆ ಒಣಗಿಹೋಗುವದೆಂಬ ಭಯವು ತಪ್ಪಿದೆ.

ವೀರಾಜಪೇಟೆ.

ಇಲ್ಲಿಯ ಹೈಸ್ಕೂಲ್ ಬೋರ್ಡಿಂಗನ್ನು ಬದಲಾಯಿಸುವ, ಮತ್ತು ಹುಡುಗಿಯರ ಶಾಲೆಯನ್ನು ತೆಗೆಯುವ ವಿಚಾರ ದಕ್ಷಿಣ ಕೊಡಗಿನವರು ಬೀಳ್ ಕಮಿಷನರಿಗೆ ಬರೆದ ಜ್ಞಾಪಕ ಪತ್ರಕ್ಕೆ, ಸಬ್ಬಂದಿ ಟೀಕೆಯಲ್ಲಿ, ಪತ್ರದಲ್ಲಿ ನಮೂದಿಸಿರುವ ಯೋಚನೆಯೊಂದು ತೊಂದರೆಯೂ ಬರದಹಾಗೆ ನಡೆಸಲಾಗುವದೆಂದು ಶಾಲಾ ಇನ್ಸ್‌ಪೆಕ್ಟರರು ತಿಳಿಸಿರುವರು.

ನಿಧನ ವಾರ್ತೆ.

ಮಡಿಕೇರಿಯಲ್ಲಿ ಲಾಯರಾಗಿದ್ದ ಶ್ರೀ ಎನ್ ರಾಮಯ್ಯನವರು ತಾರೀಕು 7-11-38 ರಲ್ಲಿ ಮಧ್ಯಪ್ರಾಂತದ ಬೈಹರ್ ಎಂಬಲ್ಲಿ ದೇಂಜರಾಗಿರುವ ಶ್ರೀ ಕೋಣೇರಿರ ತಿಮ್ಮಯ್ಯನವರ ಪತ್ನಿಯವರು ತಾ. 6-11-38 ರಲ್ಲೂ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ನಾಪೋಕ್ಲು.

ಇಲ್ಲಿಯ ಸಿವಿಲ್ ಆಸ್ಪತ್ರೆಯ ಡಾಕ್ಟರರು ಕಾಯಿಲಪ್ಪರಾಗಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ. ಅವರ ಬದಲಿಗೆ ಇಲ್ಲಿ ಯಾರನ್ನೂ ನೇಮಿಸದ್ದರಿಂದ ಜನರಿಗೆ ತೊಂದರೆಯಾಗಿದೆಯೆಂದೂ ತಿಳಿದುಬರುತ್ತದೆ.

ಆಪಿಲ ಕೊಡಗು ಉಪಾಧ್ಯಾಯರ 10 ನೇ ಸಮ್ಮೇಳನವು ಈ ವರ್ಷ ಇಲ್ಲಿ ಬೆಂಗಳೂರಿನ ಶ್ರೀ ಬಿ. ಯಂ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಬರುವ ತಿಂಗಳು 3, 4 ಮತ್ತು 5 ರಲ್ಲಿ ನಡೆಯುವದೆಂದೂ, ಆ ಕಾಲಕ್ಕೆ ತಾಲೂ ಬಾಲಕರ ಕೈಕೆಲಸದ ಸಾಮಾನುಗಳ ಪ್ರದರ್ಶನವೂ ಮತ್ತು ಎಂದಿನಂತೆ ಆಟೋಟಗಳ ಸ್ಪರ್ಧೆಯೂ ನಡೆಯುವದೆಂದೂ ತಿಳಿಯಬರುತ್ತದೆ.

ಆಕಸ್ಮಿಕ ಮರಣ.

ನಾಪೋಕ್ಲಿನ ಕುಂಜಿಲಗೇರಿ ಗ್ರಾಮದ ಬಿಲ್ಲವರ ಮಾಯಿಲನೆಂಬವನು ತಾ. 4 ರಲ್ಲು ಚೈನೆನುರ ಹತ್ತಿದವನು ಕಾಲು ಜಾರಿ ಬಿದ್ದು ಮೃತಪಟ್ಟಿರುವನು.

ಸೆಂಪಾಜೆ.

ಇಲ್ಲಿಯ ಮಲ್ಲೇಶ್ವರ ಸಂಘದ ಆಶ್ರಯದಲ್ಲಿ ಜನತೆಗೆ ಆಕ್ಷರಭ್ಯಾಸ ಮಾಡಿಸಲು ಎರಡು ರಾತ್ರಿ ಶಾಲೆಗಳು (Night Schools) ತಾರೀಕು 31-10-38 ರಿಂದ ತೆರೆಯಲ್ಪಟ್ಟಿರುವವೆಂದೂ, ರಾತ್ರಿ 8 ಗಂಟೆಯಿಂದ 10 ಗಂಟೆಯ ವರೆಗೆ ಪಾಠ ಹೇಳಲ್ಪಡುವದೆಂದೂ, ಈಗಾಗಲೇ 16 ವರ್ಷಕ್ಕೆ ಮೇಲ್ಪಟ್ಟು 45 ವರ್ಷದೊಳಗಿನ 45 ಜನರು ಅಭ್ಯಾಸ ಮಾಡುತ್ತಿರುವರೆಂದೂ ಸದ್ಯದಲ್ಲೇ ಇನ್ನೊಂದು ಸ್ಕೂಲ್ ಇದೇ ಸಂಘದ ಆಶ್ರಯದಲ್ಲಿ ತೆರೆಯಲ್ಪಡುವದೆಂದೂ ತಿಳಿದು ಬರುತ್ತದೆ. ಇಂಥಾ ಜನೋಪಕಾರಿ ಕಾರ್ಯ ಕೈಕೊಂಡ ಸಂಘದವರಿಗೆ ನಮ್ಮ ಅಭಿವಂದನೆಗಳವೆ.

ಪೊನ್ನಂಪೇಟೆ.

ಕಳೆದ ವಾರ ಇಲ್ಲಿ ಮಳೆಯೊದ್ದರಿಂದ ನೀರಿನ ಅಭಾವದಿಂದ ಬೆಳೆ ಒಗಿಗಿ ಹೋಗುವದೆಂದು ನಿರಾಶೆಗೊಂಡಿದ್ದವರು ಆನಂದಿತರಾಗಿರುವರು. ಈ ಮಳೆಯಿಂದ ಕೊರು ದಾಟಲು ಬಹಳ ಅನುಕೂಲವಾಗಿದೆ.

ಹಿಂದೂದೇಶ.

ಬೊಬ್ಬಿಲಿ ರಾಜರವರು ಜಸ್ಟೀಸ್ ಪಾರ್ಟಿಯ ಲೀಡರ್ ಪದವಿಗೆ ರಾಜೀನಾಮೆ ಕೊಟ್ಟಿರುವರು.

ಆಸಾಮಿನಲ್ಲಿ ಕಾಂಗ್ರೆಸಿನ ಮಂತ್ರಿತ್ವದ ಬುಡ ಗಟ್ಟಿಯಾಗುತ್ತಿದೆ. ಯೂರೋಪಿಯನರೂ, ಮುಸ್ಲಿಮರೂ ತಮ್ಮ ಮನಸ್ಸು ಬದಲಾಯಿಸುತ್ತಿದ್ದಾರೆ ಪಾನ ನಿಷೇಧ, ಆಫೀಮಿನ ಪ್ರಚಾರ ಮೊದಲಾದ ಕಾಂಗ್ರೆಸಿನ ಕಾರ್ಯಕ್ರಮಗಳು ಬೇಗನೆ ಜಾರಿಗೆ ಬರಲಿವೆ.

ಮದ್ರಾಸ್ ಸರ್ಕಾರವು ಪ್ರತಿಯೊಬ್ಬ ಜಿಲ್ಲಾಧಿಕಾರಿಗೂ ಒಂದು ನಿರೂಪಸನ್ನು ಕಳುಹಿಸಿ ಅದರಲ್ಲಿ ಅವನು ತನ್ನ ಜಿಲ್ಲೆಯಲ್ಲಿ ಓದಿಪ ನಿರುದ್ಯೋಗಿಗಳ ಸಂಖ್ಯೆಯನ್ನು ತೆಗೆಯಬೇಕೆಂಬ ಆಜ್ಞೆ ಮಾಡಿದ್ದಾರೆ. ಸರ್ಕಾರವು ಬೇಗನೆ ಓಮ ಬರಹ ಬಲ್ಲ ಶೈತರಿಗೆ ಆದರ್ಶಸ್ಥಾನಗಳನ್ನು ಕಲ್ಪಿರುವನೆರಿದ್ದಾರೆ.

ತಿರುವಾಂಕೂರು ಸಂಸ್ಥಾನದಲ್ಲಿ ಕ್ರಿ. ಲಾ. ಎ. ಆಕ್ಟ್ ಅಥವಾ ಸಾಮಾನ್ಯ ಕ್ರಿ ಲಾ. ವಿನ ಮೇರೆಗೆ ದಂಡನೆಗೆ ಗುರಿಯಾಗಿದ್ದ 300 ಮಂದಿ ಕೈದಿಗಳ ಬಿಡುಗಡೆಯಾಯಿತು. ಆದರೆ ಹಿಂಸಾ ಪ್ರಯೋಗವನ್ನು ಮಾಡಿಪ ಯಾವ ಕೈದಿಯನ್ನೂ ಬಿಟ್ಟಿಲ್ಲ. ರಾಜಕೃಪೆಯ ಸಂದೇಶವು ಅವರನ್ನು ಬಿಡುಗಡೆ ಮಾಡುವುದಾಗಿಲ್ಲ.

ಪಂಜಾಬಿನ ಲೆ. ಎಗೆಬ್ಲಿಯ ಚೀಫ್ ನ್ಯಿಪ್ಪರಾದ ಶೀಟ್ ಸುದರ್ಶನದಾಸ ಇವರು ಆಸೋರಿಯೇಟೆಡ್ ಸುದ್ದಿಗಾರನಿಗೆ ಈ ತಿಂಗಳ ತಾ. 10 ನೇ ದಿನಪ ಕೂಡಲಿರುವ ಆಸೆಂಬ್ಲಿ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದ ಸಭಾಸದರು ಭಾಗವಹಿಸುವದಿಲ್ಲವೆಂದು ತಿಳಿಸಿಸಿರುವರು. ಪಂಜಾಬ್ ಗವರ್ನರರು ಈ ಅಧಿವೇಶನದ ಅನಾವರಣ ನೆರವೇರಿಸುವರು.

ಈಗ ಬರತಕ್ಕದ್ದರುವ ಕಾಂಗ್ರೆಸ್ ಅಧಿವೇಶನ ಸಮಯದಲ್ಲಿ, ಅಂದರೆ ಅಧಿವೇಶನ ನಡೆಯುವ ನಾಲ್ಕು ದಿನಗಳಲ್ಲಿ ಎಲ್ಲಾ ಕೋರ್ಟು ಖಚೇರಿಗಳಿಗೂ ರಜೆ ಇರಬೇಕೆಂದೂ, ಯಾವ ಉದ್ಯೋಗಿಸ್ಥನೇ ಆಗಲಿ, ಅಧಿವೇಶನಕ್ಕೆ ಹೋಗಲು ಅಡಂಕ ವಿರಬಾರದೆಂತಲೂ, ಮಧ್ಯ ಪ್ರಾಂತ ಸರಕಾರದವರು ಪ್ರಾಂತೀಕ ಸರ್ಕಾರಕ್ಕೆ ಸಲಹೆ ಕೊಟ್ಟಿರುವರು.

ಮುಂದಿನ ತ್ರಿಪುರಿ ಕಾಂಗ್ರೆಸಿನ ಸಂಬಂಧ ಜಬ್ಬಲ್ಪುರ ಪ್ರಾಂತಕ್ಕೆ ಭೇಟಿ ಕೊಟ್ಟ ಸ್ವಧಾನ ಶುಕ್ಲ ಮೊದಲಾದವರ ಸಾನಿಧ್ಯದಿಂದ ಆ ಅಧಿವೇಶನಕ್ಕೆ ಕಳೆ ಏರಿದೆ. ವಂತಿಗೆ ಧಾರಾಳವಾಗಿ ಬರುತ್ತಿದೆ. ಶ್ರೀಗಳಾದ ಮೋಹನಲಾಲ್ ಹರಗೋವಿಂದಾಸ್ ಇವರು ರೂ. 5 ಸಾವಿರವನ್ನೂ, ಡೊಲಿಯ ರಾಮ ಗುಲಾಬ್‌ಚಂದ್‌ರವರು 1 ಸಾವಿರವನ್ನೂ ಇಷ್ಟರಲ್ಲಿಯೇ ನಂತಿಗೆಯಾಗಿ ಕಳುಹಿಸಿರುತ್ತಾರೆ.

ಪಂಜಾಬಿನ ಶ್ರೀ ಸಚ್ಚಿದಾನಂದ ಶರ್ಮರೆಂಬ ಕಲಾ ನಿಪುಣರೊಬ್ಬರು ಒಂದು ಪೋಸ್ಟ್ ಕಾರ್ಡಿನಲ್ಲಿ 579,000 ಆಕ್ಷರಗಳ 500 ಪಂಕ್ತಿಯನ್ನು ಬರೆದಿರುವರಲ್ಲದೆ, ರವೀಂದ್ರರ ಗೀತಾಂಜಲಿ ಹಾಗೂ ಅದರ ದೀರ್ಘವಾದ ಮುನ್ನುಡಿಯನ್ನೂ ಮತ್ತೊಂದು ಪೋಸ್ಟ್ ಕಾರ್ಡಿನ ಟ್ಲೇ ಬರೆದು ವಿಸ್ಮಯವನ್ನುಂಟುಮಾಡಿದ್ದಾರೆ. ಎರಡನೆಯ ಪೋಸ್ಟ್ ಕಾರ್ಡು ಸಿನ್ನೂ ಪ್ರದರ್ಶನದಲ್ಲಿ ತೋರಿಸಲಾಗಿದ್ದಿತು.

ಮೂರಾಟಕ್ಕೆ.

ಜೇನು ಪೆಟ್ಟಿಗೆಯ ಒಳಗಿಡುವ ಚೌಕಟ್ಟುಗಳು-8 ದೊಡ್ಡವು-8 ಚಿಕ್ಕವುಗಳು ಬರೀ ಒಂದು ರೂಪಾಯಿಗೆ ಮಾರಲ್ಪಡುತ್ತೆ.

ಎರಿಗಳು ಜೇನು ತುಂಬಿದ್ದು ಚೆಳ್ಳಗಿದ್ದರೆ ಒಳ್ಳೇ ಬೆಲೆಗೆ ಕೊಂಡುಕೊಳ್ಳಲಾಗುವುದು.

ಜೇನು ಮತ್ತು ಮೇಣ ಸಹಕಾರಿ ಸಂಘ, ವೀರಾಜಪೇಟೆ.

4-1

ನೋಟೀಸು.

1938ನೇ ಇಸವಿ ನವಂಬರು ತಾ. 26ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆಯಲ್ಲಿರುವ ಅಂಜುಮಾನ್ ಹಾಲ್‌ನಲ್ಲಿ "ಕೊಡಗು" ಕಂಪನಿಯ ಶೇರುದಾರರ ಮಹಾ ಸಭೆಯು (ಜನರಲ್ ಮಿಟಿಂಗು) ಸೇರುವುದೆಂದು ಈ ಮೂಲಕ ತಿಳಿಸೋಣಾಗಿದೆ. ಮಿಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ.

1. 1937-38ನೇ ವರ್ಷದ ಆಡಳಿತ ವರದಿಯನ್ನೂ, ಇದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರವರ ಸರ್ಟಿಫಿಕೇಟನ್ನೂ ಸಹ ಸಭೆಯ ಮುಂದೆ ಇರಿಸುವುದು.

2 1933-34 ಮತ್ತು 1934-35 ಈ ಎರಡು ವರ್ಷಗಳಲ್ಲಿ ವಸೂಲಾಗದೆ ಇರುವ ಚಂದಾ ಹಣದ ವಿಷಯ.

3. ಆಡಿಟರವರನ್ನು ನೇಮಿಸುವಿಕೆ.

4. 1937-38ನೇ ವರ್ಷಕ್ಕೆ ಆಡಿಟರರಿಗೆ ಕೊಡಬೇಕಾದ ಫೀಜು ನಿಶ್ಚಯೆ ಮಾಡುವಿಕೆ

5. ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

ಯು. ಯಂ. ಅಣ್ಣಯ್ಯ.
(ಕಾರ್ಯಾಧ್ಯಕ್ಷರು).
"ಕೊಡಗು" ಲಿಮಿಟೆಡ್,
ಮಡಿಕೇರಿ, 9-11-1938.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಕೊಡಗಿನ ಶಾಲೆಗಳು.

ವಿದ್ಯೆಯೆಂಬುದು ಮಕ್ಕಳಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜ್ಞಾನ ಸಂಪಾದನೆ ಮಾಡಿ ಮುಂದಿನ ದೇಶದ ಪ್ರಜೆಗಳನ್ನಾಗಿ ಮಾಡಬೇಕಾಗಿರುವುದರಿಂದ, ಶಾಲೆಗಳಲ್ಲಿ ದರ್ಜಿವಾರು ವಿಂಗಡಿಸಲ್ಪಟ್ಟಿರುವ ತರಗತಿಗಳಿಗೆ ಆಯಾ ತರಗತಿಗಳಷ್ಟೇ ಜ್ಞಾನ ಸಂಪಾದನೆಯುಳ್ಳ ಮತ್ತು ಅಷ್ಟೇ ತೇರ್ಗಡೆ ಹೊಂದಿರುವ ಉಪಾಧ್ಯಾಯರುಗಳನ್ನೇ ಬೋಧಕರಾಗಿ ಇಡುವುದರಿಂದ ವಿದ್ಯಾರ್ಥಿಗಳಿಗೆ ಸರಿಯಾಗಿ ಜ್ಞಾನ ಸಂಪಾದನೆಯೊಗಡೆ ಈಗಿನ ಪಾಠ ಪುಸ್ತಕಗಳನ್ನು ಕೇಂದ್ರ ಪಾಠ ಮಾಡಿಸಿ ಪರೀಕ್ಷೆ ಮಾಡಿಸುವುದೇ ಉದ್ದೇಶವಾಗಿದೆ.

ಕೊಡಗಿನಲ್ಲಿ ಎರಡೇ ಹೈಸ್ಕೂಲುಗಳಿಗೆ ಸ್ಥಳ ದೇಶದ ಬಾಲಕರೆಲ್ಲಿ ಕೇಕಡ 10 ರಷ್ಟು ಮುಂದಿನ ಮಾಧ್ಯಮಿಕ ಮತ್ತು ವೈಧ ವಿದ್ಯಾಭ್ಯಾಸದಲ್ಲಿ ಕೊಡಗೂ ಅನುಕೂಲವಿಲ್ಲವಾದ ಕಾರಣ ಕೊಡಗಿನ ಕಾಸ್ಟಿಲಿನಲ್ಲಿ ಅನೇಕ ವರ್ಷಗಳ ಹೋರಾಟದ ಫಲವಾಗಿ ಹಾಗೆಯೇ ಉಳಿಯಬಹುದಾದ ಶೇಕಡ 90 ಬಾಲಕರು ಶಾಲೆಯನ್ನು ಬಿಡುವುದೊಳಿಗಾಗಿ ಅವರಿಗೆ ಕಷ್ಟಲೋಕವ್ಯವಹಾರ ಜ್ಞಾನವಾದರೂ ಸಿಕ್ಕಬೇಕೆಂಬ ಉದ್ದೇಶದಿಂದ ಈಗಿನ ಹೈಯರ್ ಎಲಿಮೆಂಟರಿ ಶಾಲೆಗಳು ಏರ್ಪಟ್ಟವು. ಆ ಉದ್ದೇಶವು ಇತ್ತೀಚೆಗೆ ಮೂರ್ವಾಟು ಹೊಂದಿ ಈ ಬಾಲಕರು ಈಗ ನಡೆಸುತ್ತಿರುವ ಪೋರ್ಡು ಪರೀಕ್ಷೆಗಳಲ್ಲಿ ಹೈಸ್ಕೂಲ್ ಬಾಲಕರಂತೆಯೇ ತೇರ್ಗಡೆ ಹೊಂದಬೇಕಾಗಿ ಏರ್ಪಡಿಸಿರುತ್ತಾರೆ.

ಹೀಗಿರುವಲ್ಲು ಆಂಧ್ರ ಪರೀಕ್ಷೆಗಳಿಗೆ ಬಾಲಕರನ್ನು ತರಬೇಕು ಮಾಡುವ ಹೈಸ್ಕೂಲಿನ ಎಲ್. ಟಿ. ಗ್ರೇಡಿನ ಉಪಾಧ್ಯಾಯರುಗಳಿಂದ ತರಬೇತಾದ ಬಾಲಕರ ಜೊತೆಯಲ್ಲಿ ಹೈಯರ್ ಎಲಿಮೆಂಟರಿ ಅಧವಾ ಸೆಕೆಂಡರಿ ಗ್ರೇಡಿನ ಉಪಾಧ್ಯಾಯರುಗಳಿಂದ ಸ್ಪರ್ಧಿಸುವುದು ತುಂಬಾ ಶೋಚನೀಯವಾದ ಮತ್ತು ಆಶ್ಚರ್ಯಕರವಾದ ಸಂಗತಿಯೊಗಿದೆ. ದೇಶದ ಮುಂದಿನ ಪ್ರಜೆಗಳಾದ ಮಕ್ಕಳ ಜ್ಞಾನಾಭಿವೃದ್ಧಿ ದೃಷ್ಟಿಯಲ್ಲಿ ಇದೊಂದು ಬಗೆಯ ಕುಂದು ಕೊರತೆ ಎಂದರೆ ತಪ್ಪಾಗಲಾರದು.

ಇತರ ದೇಶಗಳು ಸುಧಾರಣೆ ಹೊಂದುತ್ತಿರುವ ಈ ಕಾಲದಲ್ಲಿ ಕೊಡಗಿನಲ್ಲಿ ವಿದ್ಯಾಭ್ಯಾಸವು ಇನ್ನೂ ಶೈಶವಾವಸ್ಥೆಯಲ್ಲಿರುವುದಕ್ಕೆ ಈಗಿನ ಕೊಡಗಿನ ಶಾಲೆಗಳ ಗಳಲ್ಲಿರುವ ಅಕ್ರಮಗಳೇ ಎಂದು ಭಾವಿಸಿದರೆ ತಪ್ಪಾಗಲಾರದು. ಉದಾಹರಣೆಗಾಗಿ-ಸೋಮವಾರಪೇಟೆ ಹೈಯರ್ ಎಲಿಮೆಂಟರಿ ಶಾಲೆಯಲ್ಲಿರುವ ಸೆಕೆಂಡ್ರಿ ಗ್ರೇಡಿನ ಉಪಾಧ್ಯಾಯರುಗಳು ಕೆಳಗಿನ ತರಗತಿಯಲ್ಲೂ, ಹೈಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರು ಮೇಲಿನ ತರಗತಿಯಲ್ಲೂ, ಬರೀ ಪ್ರೈಮರಿ ಇಂಗ್ಲಿಷ್ ಪಾಸಾದ ಉಪಾಧ್ಯಾಯರು ಮೂರನೆ ತರಗತಿಯ ಬಾಲಕರಿಗೆ ಇಂಗ್ಲಿಷ್ ಕಲಿಸುವುದು, ಸೆಕೆಂಡ್ರಿ ಗ್ರೇಡ್ ಉಪಾಧ್ಯಾಯರು ಎರಡನೇ ಕ್ಲಾಸಿಗೆ ಕನ್ನಡ ಪಾಠ ಮಾಡುವುದು, ಮೂನ್ಪದೋ ಪೈಸರಿ ಶಾಲೆಯಲ್ಲಿ ಹೈಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಾಗಿದ್ದು ಮತ್ತು ಟ್ರೈನಿಂಗ್ ಸಹ ಆಗಿರುವ ಹೈಯರ್ ಎಲಿಮೆಂಟರಿ ಪಾಸಾಗಿರುವ ಉಪಾಧ್ಯಾಯರು ಹೆಡ್ಮಾಸ್ಟರಾಗಿರುವರು. ಕೆಲವು ಶಾಲೆಗಳಲ್ಲಿ ಸೆಕೆಂಡ್ರಿ ಗ್ರೇಡಿನ ಉಪಾಧ್ಯಾಯರುಗಳ ಕೈಕೆಳಗೆ ಅಸಿಸ್ಟೆಂಟ್ ಉಪಾಧ್ಯಾಯರಾಗಿ ಎಸ್ಸು ಜೆಗುಸ್ಯಯಿಂದ ಕೆಲಸ ಮಾಡಬಹುದೆಂಬುದನ್ನು ತಾನೇ ಊಹಿಸಬೇಕಾಗಿದೆ. ಇತರರು ಬರೇ ಮೇಲಾಧಿಕಾರಿಗಳಿಗೆ ಹೆದರಿ ಒಮ್ಮೆ ತರಹದ ಭೀತಿಯಿಂದ ನಿಯಮಿಸ್ಪರಬಹುದೇ ವಿನಾ ನಿಜವಾಗಿಯೂ ಆ ಹೆಡ್ ಮಾಸ್ಟರರನ್ನು ಗೌರವ ಭಾವದಿಂದಾಗಲೀ, ಭಯದಿಂದಾಗಲೀ, ಸ್ನೇಹದಿಂದಾಗಲೀ ಸರಿಯಾದ ಕೆಲಸ ಮಾಡುವವರಾಗಿಲ್ಲವೆಂದೇ ಹೇಳಬೇಕಾಗಿದೆ.

ಆದ್ದರಿಂದ ಈ ಕುಂದುಕೊರತೆಗಳನ್ನು ನಿವಾರಿಸಲು ಸಾಧ್ಯವಾದಷ್ಟು ಹೈಯರ್ ಎಲಿಮೆಂಟರಿ ಶಾಲೆಗಳಿಗೆ ಬಿ. ಎ., ಎಲ್. ಟಿ. ಅಧವಾ ಅದಕ್ಕೆ ಸಮಾನವಾದಂಥ ಹೆಡ್ ಮಾಸ್ಟರುಗಳನ್ನು ನೇಮಕ ಮಾಡಿದರೆ ಮೇಲಿನ ಕೊರತೆಗಳೆಲ್ಲಾ ಲೋಪವಾಗಿ ಶಾಲೆಯ ಸ್ಥಿತಿಯು ಮತ್ತು ವಿದ್ಯಾಭಿವೃದ್ಧಿಯೂ ಉತ್ತಮಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ವಿಷಯವು ಹಿಂದೆ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಘನ ಹೊಂದಿದ ಚೀಫ್ ಕಮಿಷನರವರು ತಕ್ಕ ಸಿಗಾ ಕೊಡುವುದಾಗಿ [illegible] ರೆಂಬವಾಗಿ ತಿಳಿಯುತ್ತೇವೆ. ಹೈಸ್ಕೂಲುಗಳ ಮತ್ತು ಗೌ. ಹೈಯರ್ ಎಲಿಮೆಂಟರಿ ಸ್ಕೂಲುಗಳು ಒಂದೇ ಆಗಿರುವದರಿಂದ ವರ್ಗಾವರ್ಗ ವಿಷಯದಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ಆದ್ದರಿಂದ ಚೀಫ್ ಕಮಿಷನರವರು ಈಗಿನ ಸಿಬ್ಬಂದಿ ಪೋತೆಯ ಸುವನುಯವಲ್ಲಿ ಗವರ್ನರ್‌ಮೆಂಟ್ ಹೈಯರ್ ಎಲಿಮೆಂಟರಿ ಶಾಲೆಗಳಿಗೆ ಒಬ್ಬೊಬ್ಬ ಬಿ. ಎ., ಎಲ್. ಟಿ. ಹೆಡ್ ಮಾಸ್ಟರುಗಳನ್ನು ಕೊಡಬೇಕಾಗಿ ಕೇಳಿ ಕೊಳ್ಳುತ್ತೇನೆ.

'ಮಕ್ಕಳ ತಂದೆ'

———

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿತು. ಅವರಲ್ಲಿ ಹಿಂದಿನ ವರ್ಷದ ಸ್ವಾರ್ತಿಯೊಗದ 1147 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಸ್ಸಿ ವರ್ಷಾವಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಸ್ಪರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಂಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರವು ಭರವಸೆಯಿಂದ ಜೀವನವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪನಿಗಳನ್ನೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಆಯರ್ ಬುಕ್' ಎಂಬುವುದರಿಂದ ತಿಳಿಯಬರುತ್ತದೆ. ಈ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯೊವ್ ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇಷ್ಟಕ್ಕಿಂತ ಅನೇಕ ವರ್ಷಗಳ ಒಳಿಗೆ ಪ್ರವಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇದು ದಾದ ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂಪೆ ಸ್ಥಾಪನೆಯಾಗಿದ್ದಾಗಿದೆ.

ವಿನೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟವನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,108-13-0, ಗತ ವರ್ಷದ್ದು 2,36,767-6-6 ಆಗಿದೆ

ಜೀವ ವಿಮೂ ಫಂಡು:—ಈ ಕಂಪನಿಯ ಜೀವ ವಿಮೂ ಫಂಡು ರೂ. 75,258-14-9ರಿಂದ, ಸ್ಥವಸ್ಥಾ ಕ್ರಮಕ್ಕೆ ಮತ್ತು ಇತರೆ ಖರ್ಚಿಗಾಗಿ ರೂ. 45,037-8-4 ಸಾಲಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅವರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ	ವಿನೂ ಕಂತು	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕಿ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವನವಿಮೂ ಕಂಪನಿಗಳ ಅಕ್ಟಿನ ಮೇರೆ ಕೇವಣಾತಿ:—ಈ ಖಾತೂಸು ಮೇರೆ ಕೇವಣಾತಿ ಮೊತ್ತಕ್ಕಿದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುವರಾಗಿರುವರು.

ಸಿ. ಯಂ. ತಿಮ್ಮಯ್ಯ,
(52-22) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

Watch! Watch!!

The Grand-day of opening the "HOTEL-DE-COORG"

at the heart of Mercara.

Comfortable Boarding and Lodging in a Spacious Bungalow.

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೧೩.

'ರಸನರಿತು ತಿನ್ನುವುದೂ, ಅಲಂಕಾರವರಿತು ಉಡುವುದೂ ಇದೇ ಮನುಷ್ಯನ ಬಡತನಕ್ಕೆ ಮುಖ್ಯ ಕಾರಣಗಳು. ನಾವು ಹೊಟ್ಟೆಗೂ, ಬಟ್ಟೆಗೂ ಹಣ ವ್ಯಯ ಮಾಡುವುದರಿಂದ ಯಾವುದೊಂದು ಪ್ರಯೋಜನವೂ ಇಲ್ಲ. ಶರೀರ ಮುಚ್ಚುವ ಹಾಗೆ ಸಿಕ್ಕಿದ್ದನ್ನು ಧರಿಸಬೇಕು. ಹಸಿವಡಗುವ ಹಾಗೆ ದೊರಕಿದ್ದನ್ನು ತಿನ್ನಬೇಕು. ರಸಭರಿತವಾದ ಆಹಾರಗಳನ್ನೂ, ಅಲಂಕಾರಯುಕ್ತವಾದ ಬಟ್ಟೆಗಳನ್ನೂ ಉಡುವ ಯೋಚನೆಯು ಯಾರಿಗೂ ಇರಬಾರದು. ಇಂಥಾದ್ದೇ ಆಗಬೇಕೆಂದು ಹೊಟ್ಟೆಯಾಗಲೀ, ಶರೀರವಾಗಲೀ ಕೇಳುತ್ತದೆಯೇನು? ನಾವು ತಿನ್ನುವುದು ಇತರರಿಗಾಗ್ಯಾರಿಗೂ ತಿಳಿಯುವುದಿಲ್ಲ. ಉಡುವುದಂತೂ ನಾವು ಮೈಷ್ಟನ್ನವನ್ನೇ ತೆಗೆದುಕೊಳ್ಳಬೇಕೆಂಬ ಅವಶ್ಯವೇನಿರುವುದು? ಇತರರೇನಾದರೂ ನಮ್ಮ ಹೊಟ್ಟೆಯನ್ನು ಸೀಳಿ ನಾವು ಏನು ತಿನ್ನುತ್ತೇವೆಂಬುದನ್ನು ಪರೀಕ್ಷಿಸುತ್ತಾರೆಯೋ ಅಥವಾ ಬದಲು ಕೈಯಲ್ಲಿ ಸ್ವಲ್ಪ ಹಣವಿದ್ದರೆ ಎಲ್ಲರೂ ಮರ್ಯಾದೆ ಕೊಡುತ್ತಾರೆ. ಆದುದರಿಂದ ನಾವು ಆಗುವಷ್ಟು ಹೊಟ್ಟೆ ಬಟ್ಟೆಗಳನ್ನು ಕಟ್ಟಿಯೇ ಸಂಪಾದಿಸಬೇಕು. ಯಾವನು ಹಾಗೆ ಸಂಪಾದಿಸುತ್ತಾನೋ ಅವನೇ ಯೋಗ್ಯನು. ಅದರ ಬದಲು ಯಾವನು ಸಂಪಾದಿಸಿದನ್ನೆಲ್ಲಾ ಹೊಟ್ಟೆ ಬಟ್ಟೆಗಾಗಿ ವ್ಯಯ ಮಾಡುತ್ತಾನೋ ಅವನು ಏಂಡಿ ತವಾಗಿಯೂ ಪಶು ಸಮಾನನು. ಇದು ನನ್ನ ಅಭಿಪ್ರಾಯ ಎಂದು' ಧನವಂತ ಪ್ರಸಾದರು ಹೇಳಿ ಹಲ್ಲುಜ್ಜತೊಡಗಿದರು.

'ನೀವು ಹೇಳಿದ್ದು ತಪ್ಪಂದು ಎನ್ನಲಾಗುವುದಿಲ್ಲ. ಆದರೆ ನಾವು ಇಷ್ಟೆಲ್ಲಾ ಮಾಡುವುದು ಯಾವುದರ ಸಲುವಾಗಿ? ಹೊಟ್ಟೆ ಬಟ್ಟೆಗಳಿಗಾಗಿ ತಲ್ಲಣಿಸಿ? ಸಂಪಾದಿಸಿ ಅದನ್ನು ತಿನ್ನದೆ ಸಾಯುವುದರಿಂದ ಫಲವೇನು? ಪ್ರತಿಯೊಬ್ಬನೂ ತಾನು ಸಂಪಾದಿಸಿದ ಅರ್ಧವನ್ನಾದರೂ ಹೊಟ್ಟೆ ಬಟ್ಟೆಗಳಿಗೆ ವಿನಿಯೋಗ ಪಡಿಸಬೇಕಾಗಿ ಬರುವುದು. ತನ್ನ ಹುಟ್ಟುಹಬ್ಬಗಳಿಗಾದರೂ ಹಾಗೆ ಖರ್ಚನ್ನು ಯಾರು ಮಾಡಾರದು' ಎಂದು ಹೇಳಿ ತಿಥಿಯು ಮುಂದೆ ತೊಳೆಯತೊಡಗಿದನು.

ಧನವಂತ ಪ್ರಸಾದರ ಅಭಿಪ್ರಾಯವು ಹೇಗೆ ಇರಲಿ, ನಾನು ಸೂಕ್ಷ್ಮ ಉಡುಪಿನ ಗೂ, ಊಟಕ್ಕೂ ಹೆಚ್ಚಾಗಿ ವ್ಯಯ ಮಾಡತಕ್ಕವನಲ್ಲ. ನಿಮಗೇನೋ ಆಶ್ಚರ್ಯವಾಗಿ ಕಂಡೀತೆ? ನಾನು ಇಷ್ಟರ ವರೆಗೆ ಒಂದು ದಿವಸವಾದರೂ ಊಟದ ಹೊತಿಗೆ ನುಗ್ಗಿದವನಲ್ಲ. ಕಾಫಿ ಹೊಟೆಲುಗಳಲ್ಲಿ ರಕ್ಕ ತಿಂಡಿ ಪದಾರ್ಥಗಳ ಪೈಕಿ ನನಗೆ ಗೊತ್ತಿರುವುದು ಖಾರದ ವಡೆ ಒಂದೆ. ಅಕಸ್ಮಾತ್ತಾಗಿ ಯಾರಾದರೂ ನನ್ನನ್ನು ಹೊಟೇಲಿಗೆ ಕರೆದೊಯ್ದಿದ್ದಾದರೆ ನಾನು ಮುಟ್ಟುವುದು ಒಂದಾಣೆ ಕಾರ ಮತ್ತು ಒಂದು ಬಟ್ಲು ಕಾಫಿ.— ಇನ್ನು ಅಲ್ಲಿ ರಕ್ಕ ಹಲುವ ಮುಂತಾದ ಪದಾರ್ಥಗಳ ರುಚಿ ಹೇಗಿರುತ್ತದೆ ಎಂಬುದನ್ನೇ ನಾನು ತಿಳಿದವನಲ್ಲ. ಅವುಗಳಲ್ಲಿ ನನಗೆ ಅಭಿರುಚಿಯೇ ಇಲ್ಲ. ಮನೆಯಲ್ಲೂ ಸಹ ಅಷ್ಟೆ. ಏನಾದರೂ ಸ್ವಲ್ಪ ಬಿಸಿ ಬಿಸಿ ಸಿಕ್ಕಿದರೆ ಸಾಕು, ರುಚಿ ಸಪ್ಪೆ ಅವೆಲ್ಲಾ ನನಗೆ ಗಣ್ಯವಿಲ್ಲ. ಊಟುಪಿನಲ್ಲಾ ಹಾಗೆಯೇ. ನಾನು ಮದುವೆಯಾಗುವಾಗ್ಯೆ ನನಗೆ ಇದ್ದವ್ವ ಒಂದೇ ಒಂದು ಕೋಟು. ಮದುವೆಯಾದನಂತರ ಕೋರ್ಟು ಬಿಟೇರಿಗಳಿಗೆ ವ್ಯಾಜ್ಯ ಸಾಜ್ಯಗಳಿಗೆ ಹೋಗಲು ಪ್ರಾರಂಭಿಸುವ ವರೆಗೆ ನಾನು ಕೋಟನ್ನು ಧರಿಸಿದವನಲ್ಲ. ಆ ಮೇಲೆ ನನ್ನ ಕೆಲವು ಸ್ನೇಹಿತರ ವತ್ತಾಯದ ಸೇರೆ ಎರಡು ಅಮೂಲ್ಯವಾದ ಎಂದರೆ ಗಜಕ್ಕೆ ಎರಡುನೂರಿ ರೂಪಾಯಿ ಬೆಲೆ ಬಾಳುವ ಕೋಟುಗಳನ್ನು ಹೊಲಿಸಿದೆನು. ಆವು ಈಗಲೂ ಇವೆ. ಸುಮಾರು ಇಪ್ಪತ್ತು ವರ್ಷವಾಗಿರಬಹುದು. ನನಗೆ ಸುಮಾರು ಅರುವತ್ತು ವರ್ಷ ವಯಸ್ಸಾಗಿರುವುದು. ಬಟ್ಟೆ ಬರೆಗಳಗ ನಾನು ಇಷ್ಟರ ವರೆಗೆ ವ್ಯಯ ಮಾಡಿದ್ದು ಅಷ್ಟೆಂದರೆ ಇನ್ನೂರು ರೂ ಗಳಿಗೆ ಮೀರಲಾರದು'.

ನಂಟರು ನನಸುನಗೆಯಿಂದ ವಿವೇಕ ಸಂಧಾನ ಮಾಡಿದರು. ಧನವಂತ ಪ್ರಸಾದರು ವಿಭೂತಿ ಕಡೆದುಕೊಂಡು ವಿಸರ್ಜನೆಗೆ ಕುಳಿತರು.

ಇವರು ಕೋಳಿ ಮೊಸ ಮುಟ್ಟುತ್ತಿರಲಿಲ್ಲ. ಅತಿಥಿಗಳ ಸತ್ಕಾರಕ್ಕಾಗಿ ಗೃಹಿಣಿಯು ಒಂದು ಕೋಳಿಯನ್ನು ಸಕ್ಕ ಸೂಡಿದ್ದಳು. ತಮ್ಮ ಯಜಮಾನರಿಗೂಸ್ಯ ರಸ್ವಲ್ಪ ಕೆಂಗಿನಕಾಯಿ ಚಟ್ನಿಯನ್ನು ವಿಯೂರಿಸಿದ್ದಳು. ಆದನ್ನೆಲ್ಲಾ ಬಟ್ಲುಗಳಿಗೆ ಹಾಕ ಅಡಿಗೆ ನುನಿಯಲ್ಲಿ ಮೇಜಿನ ಮೇಲೆ ಅವರು ಫಲಾಹಾರಕ್ಕೆ ಕುಳಿತೊಡನೆ ಇವೆಲ್ಲವನ್ನು ಅವರ ಮುಂದ ಇಡು ಎಂಬದಾಗಿ ತನ್ನ ನಾದಿನಿಗೆ ಹೇಳಿದನಂತರ ಪತ್ನಿಯು ಪನ ಪಿಡಲು ಕೊಟ್ಟಿಗೆಗೆ ಹೋದಳು. ಅಷ್ಟರಲ್ಲಿ ಧನವಂತ ಪ್ರಸಾದರ ಪೂಜೆಯು ತೀರಿ, ಅವರು ನಂಟರೊಡನೆ ನಡುಮನೆಯಲ್ಲಿ ಫಲಾಹಾರಕ್ಕೆ ಕುಳಿತರು. ಯಜಮತಿಯು ರೂಟ್ಟೆಯನ್ನೂ ಇನ್ನ ಸೂಜಿಸಿ ಮೊಸವನ್ನೂ ನೆಂಟರ ಎಲೆಯಲ್ಲಿಬ್ಬ ಮತ್ತೊಂದು ಬಟ್ಟಲನ್ನು ಪ್ರಸಾದರ ಎಲೆಯಲ್ಲಿ ಡಗಿದಳು.

ಪ್ರಸಾದರು-'ನಾನು ಕೋಳಿ ಮೊಸ ಮುಟ್ಟುವುದಿಲ್ಲವೆಂಬ ಕಾರಣ ನನಗೆ ಜಟ್ಟಿ ತಯಾರಿಸಿದ್ದಾರಿದೆ. ಇನ್ನೇನು? ಫಲಹಾರ ಮಾಡುವ' ಎಂದು ಹೇಳಿ ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿ ಗೃಹಿಣಿಯು ಒಳಗೆ ಪ್ರವೇಶಿಸಿ, 'ಏನು, ಮಗೂ! ನಿನ್ನ ಅಣ್ಣನವರಿಗೆ ಚಟ್ನಿ ಹಾಕಲಿಲ್ಲವೋ? ಎಂದು ಆಹುಡುಗಿಯನ್ನು ಕೇಳಿದಳು. 'ಇಟ್ಟಿರುತ್ತೇನೆ, ಅತ್ತಿಗೆ' ಎಂದು ಹುಡುಗಿಯು ಮರು ನುಡಿದಳು. 'ಛೀ ಚಟ್ನಿ ಹಾಕಿದ ಬಟ್ಲು ಇಟ್ಟಲ್ಲೇ ಇದೆ, ನೀನು ನೂಡಿದ್ದು ಏನು? ನೀನು ಜಟ್ಟಿ ಎಂದು ಮಸಾಲೆ ಕಡೆಮಾಪನ್ನು ಹಾಕಿದೆಯಲ್ಲಾ? ಈಗ ಮಾಡುವುದೇನು?'

ಬಾಲಿಗೆ ಬಗ್ಗನೆ ನಗು ಬಂತು. ಅವಳು ಅತೀ ಕಷ್ಟದಿಂದ ನಗೆಯನ್ನು ಸಹಿಸಿಕೊಂಡು ನಡುಮನೆಗೆ ಬಂದು ನೋಡುವಾಗ ಧನವಂತರು ನೆಂಟರೊಡನೆ ಮಾತಾಡುತ್ತಾ ಮಸಾಲೆಯ ಅರ್ಧ ಮುಗಿಸಿಬಿಟ್ಟಿದ್ದರು. ಸ್ವಲ್ಪ ಹೊತ್ತಿನಲ್ಲಿ ಏನೊಂದೂ ಅದಚಣೆ ಇಲ್ಲದೆ ಫಲಾಹಾರವು ನುಗಿಯಲು ಇಬ್ಬರು ಕೈ ತೊಳೆದು ಬಂದು ಹೊರಗೆ ಕುಳಿತರು. ಅಷ್ಟರಲ್ಲಿ ಟಪ್ಪಾಲಿನವನು ಲಕೋಟೆಯೊಂದನ್ನು ತಂದು ಧನವಂತರಿಗೆ ಕೊಟ್ಟನು. ಕೂಡಲೆ ಅವರು ಅವನ್ನು ಒಡೆದು ಓದಲಾರಂಭಿಸಿದರು.

'ಪ್ರಿಯ ತಂದೆಯವರಿಗೆ-ನಾನು ಕ್ಷೇಮ. ನಿಮ್ಮ ಕ್ಷೇಮವನ್ನು ತಿಳಿದು ನಂತೋಷವಾಯಿತು. ತಮ್ಮಸ್ವನವರಿಗೆ ಈ ಕಾಗದವನ್ನು ತೋರಿಸುವುದು. ನನ್ನ ಪರೀಕ್ಷೆಯು ನಾಳೆಗೆ ಕೊನೆಗೊಳ್ಳುವುದು ಆ ಮೇಲೆ ನಿಮಗೆ ಎರಡು ವಾರ ರಜ ಇಷ್ಟೆ. ನಾವು ಕೆಲವು ಸಿದ್ಧಾರ್ಥಿಗಳು ರೇವ ಪಟ್ಟಣಕ್ಕೆ ಪ್ರಯಾಣ ಹೊರಲು ಏರ್ಪಾಡು ಮಾಡಿರುತ್ತೇನೆ. ಆದುದರಿಂದ ನೀವು ಈ ಕಾಗದ ಕಂದ ಒಡನೆ ನೂರು ರೂಪಾಯಿಗಳನ್ನು ತಂತಿಯ ಮುಖಕ ಕಳುಹಿಸಿಕೊಡಕ್ಕಾದ್ದು. ತಪ್ಪಿದಲ್ಲಿ ಬಹು ತೊಂದರೆಗೀದಾಗುವುದು. ಹಣ ಸಿಗುವ ಭರವಸೆಯಿಂದ ಪ್ರಯಾಣಕ್ಕೆ ಬೇಕಾದ ಸರಂಜಾಮುಗಳನ್ನೆಲ್ಲಾ ಕೊಂಡು ಕೊಂಡಿರುತ್ತೇನೆ ಆದುದರಿಂದ ಒಡನೆ ಕಳುಹಿಸುವುದು.

ಇಂತಿ. ಆನಂದಪ್ರಸಾದ.

"ನಾನಾಡುವುದೆಲ್ಲಾ ಬುದ್ಧಿವಂತಿಕೆಯ ಮಾತು ಆದರೆ ನಸಗೂಬ್ಬ ವಿವಾರನು ಜನಿಸಿರುತ್ತಾನೆ, ಅವನು ಹುಟ್ಟಿದ್ದೇ ನಾವು ಗಳಿಸಿದ್ದನ್ನೆಲ್ಲಾ ಹಾಳು ಮಾಡುವುದಕ್ಕ. ಪ್ರತಿ ರಜೆಯಲ್ಲಿಯೂ ಹೀಗೆಯೇ ಮನೆಗೆ ಬರುವುದೇ ಇಲ್ಲ. ಇಲ್ಲಿ ಬಂದರೆ ತಮಗಿನಿಗೆ ತನ್ನ ತಂಡಿತೀರ್ಥಗಳೇ ಒಗ್ಗುವುದಿಲ್ಲವಂತೆ! ಅಯ್ಯೋ! ಅವನ ಉಡುಪು ಏನು! ಪೋಕ ಏನು! ಇನ್ನಕ್ಕೆಲ್ಲಾ ವಿದ್ಯೆಯಲ್ಲಾದರೂ ಸರಿಯಾಗಿ ತೇರ್ಗಡೆಯಾಗುತ್ತಾ ಬಂದಿದ್ದರೆ, ಅದಾದರೂ ಒಂದು; ಅದೂ ಇಲ್ಲ. ಈಗ ಇದೇ ಕಾಲಿನಲ್ಲಿ ಮೂರು ವರುಷಗಳಾದವು. ವ್ಯರ್ಥ ಲಿಂಗಳೂ ಹೀಗೆಯೇ 'ಹಣ, ಹಣ'ವೆಂದು ಬರೆಯುತ್ತಾನೆ ನನಗೇದೂ ಉಗಿಸಿ ವಿದ್ಯಾಭ್ಯಾಸದ ಕ್ರಮವೇ ಗೊತ್ತಿರುವುದಿಲ್ಲ. ಕಲಿಯುವುದು ಬರೇ ಮಟ್ಟಿಕೆಯಲ್ಲಿ. ಏನಷ್ಟು ರೂಪಾಯಿಗಳ ಪುಸ್ತಕಗಳನ್ನು ಕೊಂಡುಕೊಂಡಿರುವನಂತೆ. ಪ್ರತಿ ಪರೀಕ್ಷೆಗೂ ಏನು ರೂಪಾಯಿ ಕೊಡಬೇಕಂತೆ. ಏನೇನೋ ಕಾರ್ಡ್ ಬರಯುತ್ತಾನೆ ನನಗೇನೂ ತಿಳಿಯದು, ಏನು ಮಾಡುವುದು ತಿಳುಹಿಸದಿದ್ದರೆ ಅವೂ ಆಗುವುದಿಲ್ಲ. ಹೇಗಾದರೂ ಮಾಡಿ ಅವನನ್ನು ವಿದ್ಯೆಯಲ್ಲಿ ಆಗುವಷ್ಟು ಮುಂದಕ್ಕೆ ತರಬೇಕೆಂದು ವಿಶ್ವ ಪ್ರಯತ್ನ ಮಾಡಿದೆನು. ಇಲ್ಲಿ ಕಲಿಯಲಿಕ್ಕೆ ಆಗುವದಿಲ್ಲವೆಂದು ರಾಜಧಾನಿಗೆ ಕಳುಹಿಸಿದ್ದಾಯಿತು. ಅಲ್ಲಿಯೂ ಸಹ ಅವನು ಅಭಿವೃದ್ಧಿ ಹೊಂದುವವ್ವ ಹಾಗೆ ಕಾಣುವುದಿಲ್ಲ' ಎಂದು ಹೇಳಿ ಧನವಂತ ಪ್ರಸಾದನು ಬಲವಾಗಿ ನಿಟ್ಟುಸಿರು ಬಿಟ್ಟನು.

ಅತಿಥಿ:-'ಅಯ್ಯೋ! ಗಾನೇನು ಬಹು ವಿದ್ಯಾವಂತನಲ್ಲ. ವಯಸ್ಸಿನಲ್ಲೂ, ವೈಯಸ್ಸಿನಲ್ಲೂ ನಿಮಗಿಂತಲೂ ಕೀಳೇ ಇದ್ದೀನಿ. ಆದರೂ ನನ್ನ ದೊಂಮ ಅಭಿಪ್ರಾಯವೇನೆಂದರೆ ಸುಕ್ಕಳ ಮಹತ್ವಕ್ಕೂ, ಹಿರಿತನಕ್ಕೂ ತಂದೆ ತಾಯಿಗಳೇ ಕಾರಣರು. ಅನೇಕ ತಂದ ತಾಯಿಗಳಿಗೆ ತಮ್ಮ ಸುಕ್ಕಳನ್ನು ಹೇಗೆ ಸಲಹಬೇಕೆಂಬ ವಿಧಾನವೇ ಗೊತ್ತೇ ಇರುವುದಿಲ್ಲ. ಹುಟ್ಟುವಾಕ್ಷಣದಿಂದ ಅವರ ಮೇಲೆ ತಮಗಿರಬಕ್ಕ ಅರ್ಧವಿಲ್ಲದ ಪ್ರೀತಿಯನ್ನು ತೋರಿಸುತ್ತಾ ತಮ್ಮ ಸುಕ್ಕಳನ್ನು ನಾನಾ ರೀತಿಯ ವಿಚಿತ್ರವಾದ ಪರಿಪಾಠಗಳನ್ನಾಗಿ ಮಾಡುತ್ತಾರೆ.

ಕೆಲವು ತಂದೆ ತಾಯಿಗಳು ಸಣ್ಣ ಸುಕ್ಕಳಿಗೆ ತಾವು ಖಾದಿಶೆಯಾಗಿ ಉಪಯೋಗಿಸಿದ ಆಹಾರ ಪದಾರ್ಥಗಳನ್ನು ಕ್ರಮೇಣ ತಿಂಪಡಿಸುತ್ತಾರೆ. ಆ ರೀತಿಯ ನವೀನ ಆಹಾರಗಳಲ್ಲೇ ಬೆಳೆದ ಸುಕ್ಕಳು ಸ್ವಲ್ಪ ದೊಡ್ಡವರಾದ ನೋಲೆ ತಮ್ಮ ಸಾಡಿಕೆಯ ಆಹಾರವನ್ನು ಸೇರಿಸಲಿಡಗಲು ಅವು ಅವರ ಶರೀರಕ್ಕೆ ಸರಿ ಬೀಳದೆ ನಾನಾ ಕಾಯಿಲೆಗಳಿಗೂ, ಬಲಹೀನತೆಕ್ಕೂ ಗುರಿಯಾಗುತ್ತಾರೆ. ಇದಕ್ಕೆ ತಂದೆ ತಾಯಿಗಳ ಅರ್ಧವಿಲ್ಲದ ಪ್ರೀತಿಯೆಲ್ಲವೆ ಬೇರೆ ಕಾರಣವಿದೆಯೇ?

'ಇನ್ನು ಕೆಲವು ತಂದ ತಾಯಿಗಳು ತಮ್ಮ ಸೇವಿಸುವ ಸ್ಥಿತಿ ಒಂದು ಪದಾರ್ಥವನ್ನು ತಮ್ಮ ಸುಕ್ಕಳಿಗೆ ಕೊಡುತ್ತಾರೆ. ಅವಂಥ ಸುಕ್ಕಳ ಆರೋಗ್ಯವನ್ನು ಹಾಳು ಸೂಡುವುದಲ್ಲದೆ, ಅವರನ್ನು ಮೊರ್ಖ ಜಡತೆಗಳಿಗೂ, ಮರ್ಗುಣಗಳಿಗೂ ಆಶ್ರಯವನ್ನಾಗಿ ಮಾಡುತ್ತಾರೆ. ಹೆಂಡ, ಸಾರಾಯಿ ಮೊದಲಾದ ಮೊಡಕ ಪದಾರ್ಥಗಳ ಸೇವನೆಯಲ್ಲಿ ತಮ್ಮ ಜೀವಸವನ್ನೇ ತೋ ಜಿಸೀಯೊವನಸ್ಥಗೆ ತಂಪಡೊಂಡಿರುವ ತಾಯಿ ತಂದೆಗಳೂ ಕೂಡ ತಪ್ಪು ಕುಡಿದು, ಅದೇ ಬಟ್ಟಲಲ್ಲಿ ಸ್ವಲ್ಪ ಮಿಗಿಸಿ, ತಮ್ಮನ್ನು ಸುಸ್ಮೆ ಎಳೆ ಸುಕ್ಕಳಿಗೆ ಕುಡಿಸುತ್ತಾರೆ. ಇದು ಮಾಡುವುದು ಸಪ ಸುಕ್ಕಳ ಮೇಲೆ ತಮಗಿರುವ ಸ್ತ್ರೀತಿಯ ಸಲುವಾಗಿ; ಇದೀ ಅಜ್ಞಾನದಿಂದ ಆ ಸುಕ್ಕಳು ಮುಂದೆ ಕುಡುಕರಾಗಿ ತಮ್ಮ ತನು, ಧನ, ನೂನ ಮರ್ಯಾದೆಗಳನ್ನು ಕಳೆದುಕೊಂಡರೆ ಇಂತಹ ಮಾತಾ ಪಿತೃಗಳು ತೋರಿಸುವ ಅನ್ಯಾಲ್ಯವು ಮಮತೆಯೋ ಅಲ್ಲ ಯಮತೆಯೋ?'

'ಇನ್ನು ಕೆಲವರು ತಮ್ಮ ಎಳೇ ಮಕ್ಕಳು ಕೊದಲ್ಲುಡಿಗಳಾಡಲು ತೊಡಗಿದ ಕೆಂದರೆ ಇವರಿಗೆ ಆಯೋಗ್ಯವಾದ ಕೆಲವು ಕೀಳು ನುಡಿಗಳನ್ನೂ, ಅಪಶಬ್ದಗಳನ್ನೂ ಮತ್ತು ಅಹಂಕಾರದ ಮಾತುಗಳನ್ನೂ ಕಲಿಸುವುದಲ್ಲದೆ ಅತಿಥಿಗಳೋ, ಅಲ್ಲ ಸ್ನೇಹಿತರೋ ತಮ್ಮ ನುನೆಗೆ ಬಂದರೆಂದರೆ ತಾವು ಕಲಿಸಿದ ಕೀಳು ನುಡಿಗಳಿಂದ ಅವರನ್ನು ಬಯಿಸಿ ಅವರಲ್ಲಿ ಕ್ಷಸ್ತಿ ಹೊಂದುತ್ತಾರೆ. ಇಂತವರು ಮಕ್ಕಳಿಗೆ ಹಿತಚಿಂತಕರೋ ಅಥವಾ ಅವರ ಅಪಾಹುತ್ಯಕ್ಕೆ ಕಾರಣರೋ ನೀವೆ ಹೇಳಿ.'

[ಸಶೇಷ]

೧೯ ಕಾಕಮಾಡ ಗಣಪತಿಯನವರ ೪ ರಾವುಗಳು.

25 (1) ಹುದಿಕೇರಿ ಪೂರ್ಕೇಟನಲ್ಲಿ ಮೂರ್ಕೇಟ್ ಕಟ್ಟದಕ್ಕೆ ಜಂಟಿಸಿರುವ ಜಿಂಕಿನ ತಗಡುಗಳನ್ನು ತೆಗೆದುಬಿಡಬೇಕೆಂದು ತೀರ್ಮಾನಿಸಲಾಯಿತು.

(2) ಡಿ. ಬೋರ್ಡಿನ ಲೈಸೆನ್ಸು ಪಡೆದಿರುವ ಎಲ್ಲಾ ಅಂಗಡಿಗಳನ್ನೂ, ಹೋಟೇಲುಗಳನ್ನೂ ಸಂದರ್ಶಿಸಿ ಅವುಗಳ ರುಚಿತ್ವದ ವಿಚಾರ ರಿಪೋರ್ಟು ಮಾಡುವ ಅಧಿಕಾರ ಬೋರ್ಡಿನ ಮೆಂಬರುಗಳಿಗೆ ಕೊಡುವಂತೆ ತೀರ್ಮಾನವಾಯಿತು.

(3) ಕೊಡಗಿನ ಶಾಲೆಗಳಿಗೆ ಜೀಕಾಪ ಸರ್ಕ್ಯೂಲರ್ ಪುಸ್ತಕಗಳನ್ನು ಮಾರಾಯಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂಬ ತಕಿದ ಕೌನ್ಸಿಲು ಮೀಟಿಂಗಿನಲ್ಲಿ ವಾಡಾದ ರಾವನ್ನು ಆಗುವಷ್ಟು ಬೇಗನ ಜಾಂಗ ತರಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು

(4) ಒಂದೇ ಶಾಲೆಯಲ್ಲಿ 8 ವರ್ಷಗಳಿಗಿಂತ ಹೆಚ್ಚು ಸರ್ವಿಸಿನಲ್ಲಿದ್ದ ಉಪಾಧ್ಯಾಯರುಗಳನ್ನು ೪ ವರ್ಷ ಡೌನ್ ಕೆಡೆ ವರ್ಗಾಯಿಸಬೇಕೆಂದು ಬರುತಕಾಯಿದೆ ಮಾಡಿಕೊಯಿತು.

ಇನ್ಸ್‌ಪೆಕ್ಟರಲ್ಲಿ ಎಕ್ಸ್‌ಟ್ರಾ ಎಸ್ಟೆಬ್ಲಿಷ್‌ಮೆಂಟ್ ಮೀಟಿಂಗಿಗೆ ಹೋಗಿದ್ದ ಮೆಂಬರುಗಳು ವಾಪಸು ಬಂದು ಬೋರ್ಡಿನ ವ್ಯವಹಾರಗಳನ್ನು ವಿಚಾರಿಸಿದರು.

(5) ಮದ್ರಾಸು ಲೋಕಲ್ ಬೋರ್ಡಿನ ಆಸ್ತಿ ಮಾರಿ ಡಿಸ್ಟ್ರಿಕ್ಟ್ ಬೋರ್ಡ್ ಮ್ಯೂನ್ಸಿಪಲ್ಟಿಯನ್ನು ತಿದ್ದುಪಡಿ ಕಾಯಿದೆ ತಂದ ನಿಜಾರದಲ್ಲಿ ಸರ್ಕಾರದ ಕರಡು ನಿಯಮಕ್ಕೆ ಕೊಡಗು ಪ್ರಾಂತವನ್ನು ಜನತೆ

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಬಂಧನೆಯನ್ನು ತಯಾರಿಸುವ ಮೊದಲು ಪ್ರಸಿಡೆಂಟರ ಮತ್ತು ವೈಸ್‌ಪ್ರೆಸಿಡೆಂಟರ ಸಲಹೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳಲು ತೀರ್ಮಾನವಾಯಿತು

(6) ಹುದಿಕೇರಿಯ ಈಗಿನ ವಾರದ ಆಸ್ಪತ್ರೆಯನ್ನು ಯಾಯಂ ವೈದ್ಯಕೀಯ ಆಸ್ಪತ್ರೆಯಾಗಿ ನಾಡಬೇಕೆಂಬ ರಾವು ವಾಪಾನು ತೆಗೆದುಕೊಳ್ಳಲ್ಪಟ್ಟಿತು

(7) ಬಿಟ್ಟಂಗಿ ಲದಿಂದ ಕೂಟಿಯೂಲ ಹೊಳೆಗೆ ಹೋಗುವ ರಸ್ತೆಯಲ್ಲಿರುವ ದಿನೈಗಳನ್ನು ತೆಗೆಸಲು ರೂ 70 ಹೆಚ್ಚಿನ ಗ್ರಾಂಟು ಕೊಡಬೇಕೆಂಬ ರಾವು ವಾಪಾಸು ತೆಗೆದುಕೊಳ್ಳಲ್ಪಟ್ಟಿತು.

26 ಡಿ. ಬೋರ್ಡಿನ 1937-38ರ ಆಡಿಟ್ ವರದಿಯ ನಕಲನ್ನು ಎಲ್ಲಾ ಮೆಂಬರುಗಳಿಗೂ ಸರಬರಾಯಿ ಮಾಡಲು ತೀರ್ಮಾನವಾಯಿತು

೧೯ ಎ. ಯಸ್ ಪಾಚಯ್ಯನವರ ೪ ರಾವುಗಳು.

27. ಕೊಡಗಿನ ಡಿಸ್ಟ್ರಿಕ್ಟ್ ಬೋರ್ಡಿನ ಎಂಜಿನಿಯರ್ ಸ್ಥಿತಿಯ ತಡಕಿಲಿಕ್ಕೆ ಬೇರೆ ಬೋರ್ಡುಗಳು ಜನತೆಗೆ ಕೊಡುತ್ತಿರುವ ನಲಕರಣಗಳನ್ನೊಳಗೊಳ್ಳುವ, ಜನರಿಗಾಗಿ ಯುತ್ತಮಾದ ಕೆಲಸ ಮಾಡಲು ಆಸ್ಪದವಿಲ್ಲದ ಪೂರಾ ಅಶಕ್ತಿಕರವಾದ್ದರಿಂದಲೂ, ಪಿ ಬೋರ್ಡಿಗೆ ಬಂದಿರುವ ಅಸಂತೃಪ್ತಿ ಹೊಂದಲು ವಿಶೇಷಕಾರಣಗಳಿಲ್ಲದಿರುವುದರಿಂದಲೂ ಆ ಜಾಗೆಯನ್ನು ಕೊಡಗು ಪ್ರಾಂತವನ್ನು ಜನತೆಯ ಉನ್ನತಿಗಾಗಿಯೂ, ಡಿ. ಬೋರ್ಡಿಗೆ ಹೆಚ್ಚಿನ ಅಧಿಕಾರಗಳನ್ನು ಕಲ್ಪಿಸುವ ಬಗ್ಗೆಯೂ, ಮದ್ರಾಸಿನೊಂದಿಗೆ ಸೇರಿಸಬೇಕೆಂದೂ, ಇದರಿಂದ ಕರ್ನಾಟಕ ಪ್ರಾಂತರ ಚಿಕಿತೆಯ ಸಮಸ್ಯೆಯು ತೀರ್ಮಾನಕ್ಕೆಳ್ಳತ್ತದೆಂದೂ ತಂದ ರಾವನ್ನು ವಾಪಸು ತೆಗೆದು ಕೊಂಡರು.

28. (2) ಲೋಕಲ್ ಫಂಡ್ ಆಸ್ಪತ್ರೆಗಳ ಸರ್ಜಿ ಆಸಿಸ್ಟೆಂಟ್ ಸರ್ಜನರುಗಳನ್ನು ಒಂದೇ ಆಸ್ಪತ್ರೆಯಲ್ಲಿ ಮೂರು ವರ್ಷಗಳ ಮಾಲ ಇರಬಾರದೆಂಬ ರಾವನ್ನು ಮುಂದೂರಾಯಿತು.

29. ಕೊಡಗು ಡಿ ಬೋರ್ಡಿನ ವಿವಿಧ ಇಲಾಖೆಗಳ ನೌಕರರಿಗೆ ಪರಿಷ್ಕರಿಸಿದ ಸಂಬಳ ದರವನ್ನು ಕೊಡಬೇಕೆಂಬ ವಿಚಾರದ ಚೀಫ್ ಕಮಿಷನರ ಸಕ್ರೆಟರಿಯ ಪತ್ರವನ್ನು ಇನ್ನೊಂದು ಸಿಟಿಂಗಿಗೆ ಮುಂದಿರಿಸಿಡಲು ಯಿತು.

30 ಗ್ರಾಮಾಂತರಗಳಲ್ಲಿ ಸಾಕಷ್ಟು ದೂರ ನಾಯುಗಳ ನೇಮಕ ರೂ. 3 ರಂತೆ ಕಂದಾಯ ವಿಧಿಸಬೇಕೆಂಬ ಶ್ರೀ ಜೆ. ಪಿ. ಹೆಚ್ ಮೂರಪ್ಪನವರ ರಾವನ್ನು ಸ್ವೀಕರಿಸಿದೆ ಯಿತು, ಬೈನ್ ಸೈಸಿಲೆಂಟರು, ಅಸಿಸ್ಟೆಂಟ್ ಕಮಿಷನರು, ಡಿ ಇನ್‌ಸ್ಪೆಕ್ಟರು, ಶ್ರೀ ಗಣಪತಿ ಸಿ. ಯಂ. ಗೂಣಜ್ಜನವರು, ಕಾಕಮಾಡ ಗಣಪತಿಯನವರು ಮತ್ತು ಹೆಚ್. ಯಂ. ಪುಷ್ಪಣ್ಣನವರಂತೆ ಕೂಡಿದ ಕಮಿಟಿಯ ಎಮರ್ಜೆನ್ಸಿಗೆ ಬಿಡಲಾಯಿತು.

31. ಆಲೂರು ಶಾಲೆಯನ್ನು ಮುಚ್ಚಬೇಕೆಂಬ ಪತ್ರಗಳನ್ನು ಓದಿ, ಬರುವ ಸಿಟಿಂಗಿಗೆ ಮುಂದಿರಿಸಿಡಲಾಯಿತು

32. ಸಿದ್ದಾಪುರದ ಹಳೇ ಪೂರ್ಕೇಟು ಕಂಟ್ರಾಕ್ಟರ್ ಶ್ರೀ ಶಿವಾಚಾರ ರುದ್ರಪ್ಪ ನವರಿಂದ ಬರತಕ್ಕದ್ದಿರುವ ಏಪ್ರಿಲ್ 1ರಿಂದ ಆಕ್ಟೋಬರ್ 13ರ ವರೆಗಿನ ಕಂತು ಹಣ ವಸೂಲಾತಿ ಬಗ್ಗೆ ಕಾನೂನನುಸರಿಸಿಯುಕ್ತ ಕಂಡ ರೀತಿ ಕ್ರಮವಹಿಸಲು ಪ್ರಸಿಡೆಂಟರಿಗೆ ಅಧಿಕಾರ ಕೊಡಲಾಯಿತು.

ಶ್ರೀ ಮಂಡೇಪಂಡ ಸೋಮಯ್ಯನವರ ೪ ರಾವುಗಳು.

33 (1) 20 ವರ್ಷಗಳ ಸರ್ವಿಸು ಮಾಡಿದ ಉಪಾಧ್ಯಾಯರಿಗೆ ಟ್ರೈನಿಂಗಿನ ಆವಶ್ಯಕತೆ ಇಲ್ಲವೆಂಬ ರೂಲನ್ನು ವಾಪಾನು ತೆಗೆದುಕೊಳ್ಳಲ್ಪಟ್ಟಿತು

34. ಚೇರ್ಮನ್ ಕಮಿಷನರಿಗೆ ಪೆನ್ಶನ್ ಟಿ ರನ್ ಹೋಗಿದ್ದವರ ಪ್ರಯೋಜನ ಬತ್ಯವನ್ನು ತೆಗೆದುಕೊಳ್ಳಲು ಬೋರ್ಡು ಮುಂದೂರು ಮಾಡಿದ ರಾವಿನ ನಕಲನ್ನು ಕೊಡಬೇಕೆಂಬ ಮುದ್ರಾಸು ಎಕೌಂಟೆಂಟ್ ಜನರಲ್‌ರವರ ಪತ್ರ ಮೇರೆ ಆವಶ್ಯಕ ಕೊಡಲು ತೀರ್ಮಾನಿಸಿತು.

35 ರವಿವಾರಪೇಟೆ ಜನಗಳ ಜಾತ್ರೆಗೆ ರೂ 50 ನ್ನೂ, ನಾಪೋಕ್ಲಿನ ಜಾತ್ರೆಗೆ ರೂ 25 ನ್ನೂ ಮತ್ತು ಫ್ರೈಜರ್‌ಪೇಟೆಯ ಸೀತಾಪುರ ಜನಗಳ ಜಾತ್ರೆಗೆ ರೂ. 10 ನ್ನೂ ಪಂಜರುಮೊಡಿದ್ದಲ್ಲಿ, ಪರ್ಮಾವಧಿ ಕೊಡುತ್ತಿರುವ ಗ್ರಾಂಟಿನ್ನು ಬೇರೆ ಜಾತ್ರೆಗಳಿಗೂ ಕೊಡಲು ಪ್ರೆಸಿಡೆಂಟರಿಗೆ ಅಧಿಕಾರ ಕೊಡಲಾಯಿತು.

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮಾನ್ಯವಾದ ಜೀವನವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ಸ್ಥಿತಿಗೆ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೨೩೪	೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೪	೧೩—೦
ಕರೆನ್ಸಿ ಕಂಟ್ರೋಲರ ಬಳಿ ವಿಜಾಜಿಟ್ಟು	೨,೦೦,೦೦೦	೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಮೆಂಬರುಗಳು	೫೦,೯೨,೪೪೮	೨—೦
ಭವನದ ಆಸ್ತಿಗಳು	೧೦,೬೩,೧೫೬	೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಧನ	೮೩,೦೮೮	೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭	೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಧನದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.

೧೯೨೭ ———— ೨೧,೭೫,೨೪೪ ರೂಗಳು.

೧೯೩೭ ———— ೮೫,೩೨,೯೭೯ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ರಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಆಫೀಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-8

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ. 29-10-38 ರಲ್ಲು ಆಪರಾನ್ನ 1-30 ಕ್ಕೆ ಶ್ರೀಮಾನ್ ಪಂಮ್ಮಂಡ ಬಿ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು

ಮೆ. ಗಳಾದ 1. ಪಂಮ್ಮಂಡ ಬಿ. ಬೆಳ್ಯಪ್ಪನವರು (ಸ್ಪೆಷಲ್ ಡೆಪುಟಿ ಕಲೆಕ್ಟರು) 2. ಕೊಳ್ಳಿಮಾಡ ಕರುಂಬೈಯ್ಯನವರು, 3. ಐನಂಡ ಕಾರ್ಯಪ್ಪನವರು, 4. ಚೇಯಂಡಪೂವಂಡ ಭೀಮಯ್ಯನವರು, 5. ರಾ. ಬಾ. ಪಟ್ಟಮಾಡ ದೇವಯ್ಯನವರು 6. ಮನೆಯಪಂಡ ಬೆಳ್ಯಪ್ಪನವರು 7. ಚೌರಿರ ಮಂದಣ್ಣನವರು, (ಟ್ರೆಜರರ್) 8. ಪುತ್ತಮನೆ ಮುದ್ದಯ್ಯನವರು, 9. ಮಂಡೆಯಂಡ ದೇವಯ್ಯನವರು, 10. ಮಂಡೇಪಂಡ ಸೋಮಯ್ಯನವರು, 11. ಹೆಚ್. ಯಂ. ಪುಟ್ಟಣ್ಣನವರು, 12. ಬಲ್ಲಚಂಡ ಬೆಳ್ಯಪ್ಪನವರು, 13 ಐಚೆಟ್ಟಿರ ಸುಬ್ಬಯ್ಯನವರು, ಮತ್ತು 14. ವಲಿಯಂದ ಐಯ್ಯಪ್ಪನವರು (ಗೌರವ ಕಾರ್ಯದರ್ಶಿ.)

ಸಹಕಾರಿ ಸಂಸ್ಥೆಗಳ ರಿಜಿಸ್ಟ್ರಾರವರೂ ಸೀನಿಯರ್ ಆನ್ ಕ್ರೆಡಿಟ್ ಇನ್ಸ್‌ಪೆಕ್ಟರರೂ ಸಹ ಹಾಜರಿದ್ದರು.

ಐವಾನ್ ಬಹದೂರ್ ಕೇಟೋಳಿರ ಚಂಗಪ್ಪನವರು ಗೈರಾಜರಾಗಿದ್ದರು.

1. ಕಳೆದ ಮೀಟಿಂಗು ಪ್ರೂಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಡೆಪ್ಯೂಟೇಶನ್ ರಿಜಿಯೋನಲ್ ಬೋರ್ಡಿನ ಕಳೆದ ಮೀಟಿಂಗುಗಳ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು

3. ಕಳೆದ ಆಗೋಸ್ತು ಮತ್ತು ಸೆಪ್ಟೆಂಬರ್ ತಿಂಗಳುಗಳ ಜಮಾ ಮತ್ತು ಖರ್ಚಿನ ಲೆಬ್ಬ ಓದಿ ಮಂಜೂರ್ಮಾಡಲಾಯಿತು.

